# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜನವರಿ 16, 2021

ಸಂಪುಟ : 47 ಸಂಚಿಕೆ : 257 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 12 ರೂ : 4.00 www.janathavani.com janathavani@mac.com


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ
ನಮ್ಮ ಕಾಲೇಜಿನ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕರಾದ
ಡಾ॥ ಮತ್ತಿಹಳ್ಳಿ ಜಿ. ಪ್ರಕಾಶ್ ಇವರ ಧರ್ಮಪತ್ನಿ ಹಾಗೂ
ನಮ್ಮ ಕಾಲೇಜಿನ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದ ಪ್ರಾಧ್ಯಾಪಕರೂ ಆದ

### ಡಾ॥ ಜಿ.ಆರ್. ವೀಣಾ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಛೇರ್ಮನ್, ಪ್ರಾಂಶುಪಾಲರು, ಆಡಳಿತಾಧಿಕಾರಿಗಳು, ನಿರ್ದೇಶಕರು, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು**

**ಜೆಜೆಎಂ ವೈದ್ಯಕೀಯ ಕಾಲೇಜು, ದಾವಣಗೆರೆ.**

## ಇಂದು ತಿಪ್ಪೇಗುಂಡಿ ಗಂಗಮ್ಮನವರ ಕೈಲಾಸ ಶಿವಗಣಾರಾಧನೆ

॥ ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ॥

ದಾವಣಗೆರೆ ಸಿಟಿ ಸಿಟಿ ಶಾಮನೂರು ಗ್ರಾಮದ
ಸಿದ್ದವೀರಪ್ಪ ಬಡಾವಣೆ 8ನೇ ಕ್ರಾಸ್ ವಾಸಿ
**ಶ್ರೀ ತಿಪ್ಪೇಗುಂಡಿ ಕರಿಯಪ್ಪ** ಇವರ ಮಾಡುವ ವಿಜ್ಞಾಪನೆಗಳು.
ದಿನಾಂಕ 08.01.2021ನೇ ಶುಕ್ರವಾರ ರಾತ್ರಿ 8.20ಕ್ಕೆ ನನ್ನ ಧರ್ಮಪತ್ನಿ

### ಶ್ರೀಮತಿ ತಿಪ್ಪೇಗುಂಡಿ ಗಂಗಮ್ಮ

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ 16.01.2021ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಶಾಮನೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು
ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

- ಶ್ರೀ ಟಿ. ಕರಿಯಪ್ಪನವರು, ಶಾಮನೂರು.
- ಶ್ರೀಮತಿ ಅನಿತಾ ಶ್ರೀ ಟಿ. ಬಸವರಾಜ್ ಮತ್ತು ಮಕ್ಕಳು, ಶಾಮನೂರು.
- ಶ್ರೀಮತಿ ಪವಿತ್ರ ಶ್ರೀ ಎಸ್.ಟಿ. ನಾಗರಾಜ್ ಮತ್ತು ಮಕ್ಕಳು, ಶಾಮನೂರು.
- ದಿ. ಶ್ರೀಮತಿ ರುದ್ರಮ್ಮ ಶ್ರೀ ಗೌಡ್ರು ರಾಜಶೇಖರಪ್ಪ ಮತ್ತು ಮಕ್ಕಳು, ಆಲೂರು.
- ಶ್ರೀಮತಿ ಮಂಗಳ ಶ್ರೀ ಎ.ಸಿ. ರುದ್ರಪ್ಪ ಮತ್ತು ಮಕ್ಕಳು, ಆಲೂರು.
- ಶ್ರೀಮತಿ ವನಜಾಕ್ಷಿ ಶ್ರೀ ಎಸ್.ಹೆಚ್. ಸುಭಾಷ್ ಹಿರೇಗೌಡ್ರು ಮತ್ತು ಮಕ್ಕಳು, ಕರೂರು.
- ಶ್ರೀಮತಿ ಕವಿತಾ ಶ್ರೀ ಡಿ.ಎಲ್. ರವಿಕುಮಾರ್ ಮತ್ತು ಮಕ್ಕಳು, ಅಸಗೋಡು.
- ಶ್ರೀಮತಿ ಹನುಮಮ್ಮ ದಿ. ಶ್ರೀ ಟಿ. ಚಂದ್ರಶೇಖರಪ್ಪ ಮತ್ತು ಮಕ್ಕಳು, ಶಾಮನೂರು.
- ಶ್ರೀಮತಿ ಸುಲೋಚನಮ್ಮ ದಿ. ಶ್ರೀ ಟಿ.ಮಹೇಶ್ವರಪ್ಪ ಮತ್ತು ಮಕ್ಕಳು, ಶಾಮನೂರು.

ಹಾಗೂ ಮೃತರ ಸಹೋದರಿಯರು ಮತ್ತು ತಿಪ್ಪೇಗುಂಡಿ ವಂಶಸ್ಥರು, ಶಾಮನೂರು
ಹಾಗೂ ಗೌಡ್ರ ವಂಶಸ್ಥರು, ಆಲೂರು ಮತ್ತು ಬಂಧು-ಮಿತ್ರರು.




**ಶ್ರೀಮತಿ ತಿಪ್ಪೇಗುಂಡಿ ಗಂಗಮ್ಮನವರು**

ಇವರಿಂದ :
**ಶ್ರೀ ಟಿ. ಕರಿಯಪ್ಪನವರು**
**ಶ್ರೀಮತಿ ಅನಿತಾ ಶ್ರೀ ಶಾಮನೂರು ಟಿ. ಬಸವರಾಜ್**
ಕಾಂಗ್ರೆಸ್ ಮುಖಂಡರು
**ಶ್ರೀಮತಿ ಪವಿತ್ರ, ಶ್ರೀ ಶಾಮನೂರು ಎಸ್.ಟಿ. ನಾಗರಾಜ್**
ಶಾಮನೂರು – ದಾವಣಗೆರೆ.
ಮೊ. 98440-99972, 94484-15199

ವಿ.ಸೂ : ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

## ಜನ್ಮದಿನದ ಶುಭಾಶಯಗಳು



ಇಂದು ಜನ್ಮ ದಿನ ಆಚರಿಸಿಕೊಳ್ಳುತ್ತಿರುವ ಸ್ನೇಹ ಜೀವಿಗಳು,
ಸರಳ-ಸಜ್ಜನಿಕೆಯ ರಾಜಕಾರಣಿಗಳು, ಸಮಾಜ ಸೇವಕರು,
ಕ್ರೀಡಾಭಿಮಾನಿಗಳು, ದೀನ-ದುರ್ಬಲರ ಕಷ್ಟಗಳಿಗೆ ಸ್ಪಂದಿಸಿ,
ಜನ ಮನ ಗೆದ್ದಿರುವ ನಮ್ಮೆಲ್ಲರ ಪ್ರೀತಿಯ

### ಸನ್ಮಾನ್ಯ ಶ್ರೀ ಡಾ॥ ಎಸ್.ಎಸ್. ಬಕ್ಕೇಶ್

ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್
ಡೈರೆಕ್ಟರ್ ಶಾಮನೂರು ಷುಗರ್ಸ್, ದುಗ್ಗಾವತಿ ಇವರಿಗೆ ಮತ್ತು
ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ
ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರು, ನೂತನ ಕರ್ನಾಟಕ
ಮಹರ್ಷಿ ಶ್ರೀ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ
ನಿಗಮ(ನಿ.)ದ ನೂತನ ಅಧ್ಯಕ್ಷರಾಗಿರುವ ಕ್ರೀಡಾ ಸಾಂಸ್ಕೃತಿಕ
ರಾಯಭಾರಿಗಳು, ಜನಪರ ಕಾಳಜಿಯ ರಾಜಕಾರಣಿಗಳು,
ಸ್ನೇಹ ಜೀವಿ, ಸರಳ ಸಜ್ಜನಿಕೆಯ, ರಾಜಕಾರಣಿ

### ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ

ಅವರುಗಳಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳನ್ನು
ಸಲ್ಲಿಸುತ್ತಾ, ಶ್ರೀಯುತರುಗಳಿಗೆ ಭಗವಂತನು ಆಯುಷ್ಯ,
ಆರೋಗ್ಯ ಭಾಗ್ಯವನ್ನು ಸದಾ ನೀಡಲಿ ಎಂದು ಪ್ರಾರ್ಥಿಸುತ್ತೇವೆ....



**ಸ್ನೇಹಿತರು, ಅಭಿಮಾನಿಗಳು ಹಾಗೂ ಹಿತೈಷಿಗಳು.**
**ದಾವಣಗೆರೆ, ಹರಪನಹಳ್ಳಿ ಮತ್ತು ಜಗಳೂರು.**



॥ ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ

ದಾವಣಗೆರೆ ನಗರ ಎಂಸಿಸಿ 'ಬಿ' ಬ್ಲಾಕ್,
11ನೇ ಮುಖ್ಯರಸ್ತೆ, 4ನೇ ಕ್ರಾಸ್ ವಾಸಿ

**ಶ್ರೀ ಎ.ಎನ್. ಶೇಖರ್ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 05.01.2021ನೇ ಮಂಗಳವಾರ ರಾತ್ರಿ 3.00ಕ್ಕೆ
ನನ್ನ ಧರ್ಮಪತ್ನಿಯಾದ

**ಶ್ರೀಮತಿ ವಿಜಯಲಕ್ಷ್ಮಿ ಆವರಗೆರೆ ಶೇಖರ್**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆಯನ್ನು'**

ದಿನಾಂಕ : 17.01.2021ನೇ ಭಾನುವಾರ ಮಧ್ಯಾಹ್ನ 12.00ಕ್ಕೆ ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಭವನ, ಎಂಸಿಸಿ 'ಬಿ' ಬ್ಲಾಕ್, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ✦ ಶ್ರೀ ಎ.ಎನ್. ಶೇಖರ್, ಶ್ರೀಮತಿ ಸೌಮ್ಯ ಶ್ರೀ ಟಿ. ರಾಮಚಂದ್ರಪ್ಪ ಮತ್ತು ಮಕ್ಕಳು
✦ ಶ್ರೀಮತಿ ನಯನ ಶ್ರೀ ಚಂದ್ರಕಾಂತ್ ಮತ್ತು ಮಕ್ಕಳು ✦ ಶ್ರೀಮತಿ ರೇಣುಕಾ ಶ್ರೀ ನಾಗರಾಜ್ ಮತ್ತು ಮಕ್ಕಳು
✦ ಶ್ರೀಮತಿ ಶರ್ಮಿಲಾ ಶ್ರೀ ಡಾ. ಪ್ರಶಾಂತ್ ಮತ್ತು ಮಕ್ಕಳು
ಮೃತರ ಸಹೋದರರು, ಸಹೋದರಿಯರು, ಆವರಗೆರೆ ಮನೆತನದವರು ಹಾಗೂ ಬಂಧುಗಳು-ಮಿತ್ರರು.
ಮೊ. 81509 45051, 97401 12230, 97401 12231

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.





## ಜನ್ಮದಿನದ ಶುಭಾಶಯಗಳು

ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರೂ, ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ

**ಶ್ರೀ ಎಸ್.ವಿ. ರಾಮಚಂದ್ರ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

**ರಾಜನಹಳ್ಳಿ ಶಿವಕುಮಾರ್**
ಅಧ್ಯಕ್ಷರು, ದಾವಣಗೆರೆ-ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.



ನಾಗರಾಜ್ ಎಂ. ರೋಖಡೆ, ಸದಸ್ಯರು | ಡಿ.ವಿ. ಜಯರುದ್ರಪ್ಪ, ಸದಸ್ಯರು | ಆರ್.ಎಲ್. ದೇವೀರಮ್ಮ, ಸದಸ್ಯರು | ಸೌಭಾಗ್ಯ ಮುಕುಂದ, ಸದಸ್ಯರು



## ಜನ್ಮದಿನದ ಶುಭಾಶಯಗಳು

ಜಗಳೂರಿನ ಜನಪ್ರಿಯ ಶಾಸಕರೂ, ಕರ್ನಾಟಕ ರಾಜ್ಯ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ ಮಂಡಳಿಯ ಅಧ್ಯಕ್ಷರೂ ಹಾಗೂ ನಮ್ಮ ಆತ್ಮೀಯ ಸ್ನೇಹಿತ

**ಎಸ್.ವಿ. ರಾಮಚಂದ್ರ**

ಅವರಿಗೆ ಜನ್ಮದಿನದ ಶುಭ ಹಾರೈಕೆಗಳು

"ನಿನ್ನ ಪ್ರತಿಯೊಂದು ಹೆಜ್ಜೆಯು ಯಶಸ್ಸಿನ ಹಾದಿಯಾಗ ಬೇಕೆಂಬುದೇ ನಮ್ಮಗಳ ಹಾರೈಕೆ"

**ಶುಭಕೋರುವವರು**

- ◆ ಎಂ. ಶಶಿಶೇಖರ್
- ◆ ಎಂ.ಎಲ್. ಸತೀಶ್
- ◆ ಎಸ್. ರವೀಂದ್ರನಾಥ್
- ◆ ಎಂ.ಹೆಚ್. ವಹೀದ್ ಅಹ್ಮದ್

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ
ಶ್ರೀ ವಾಣಿ ಶಿವಣ್ಣ ಅವರ ಕಿರಿಯ ಸಹೋದರಿ

**ಶ್ರೀಮತಿ ಎಸ್.ಎಂ. ಪರಂಜ್ಯೋತಿ ಶಶಿಧರ್**

(ಮಾಲೀಕರು, ಜ್ಯೋತಿ ಪೆಟ್ರೋಲ್ ಬಂಕ್, ತ್ಯಾವಣಿಗಿ)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ವಾಣಿ ವಿಲಾಸ ಸಹೋದರರು**
**ವಾಣಿ ರೈಸ್ ಮಿಲ್, ದಾವಣಗೆರೆ.**



## ಹುಟ್ಟುಹಬ್ಬದ ಶುಭಾಶಯಗಳು



ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ, ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ

**ಶ್ರೀ ಎಸ್.ವಿ. ರಾಮಚಂದ್ರ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.



**ಶ್ರೀನಿವಾಸ್ ದಾಸಕರಿಯಪ್ಪ**
ಜಿಲ್ಲಾ ಉಪಾಧ್ಯಕ್ಷರು,
ಭಾರತೀಯ ಜನತಾ ಪಾರ್ಟಿ, ದಾವಣಗೆರೆ.



## ಹುಟ್ಟುಹಬ್ಬದ ಶುಭಾಷಯಗಳು

ಜಗಳೂರಿನ ಜನಪ್ರಿಯ ಶಾಸಕರೂ, ಕರ್ನಾಟಕ ರಾಜ್ಯ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ ಮಂಡಳಿಯ ಅಧ್ಯಕ್ಷರೂ ಹಾಗೂ ನಮ್ಮ ಆತ್ಮೀಯರೂ ಆದ

**ಶ್ರೀ ಎಸ್.ವಿ.ರಾಮಚಂದ್ರ** ಇವರಿಗೆ
ಜನ್ಮದಿನದ ಶುಭಾಷಯಗಳು




**ಶ್ರೀ ನಾಗರಾಜ್ ಲೋಕಿಕೆರೆ,**
ಜಿಲ್ಲಾಧ್ಯಕ್ಷರು, ಬಿಜೆಪಿ ರೈತ ಮೋರ್ಚಾ,
ದಾವಣಗೆರೆ ಹಾಗೂ ಅಭಿಮಾನಿ ಬಳಗ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಬಸವೇಶ್ವರ ಫೀಡರ್‌ನಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ತುರ್ತು ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ನಗರದ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗು ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10-00 ಗಂಟೆಯಿಂದ ಸಾಯಂಕಾಲ 05-00 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.


**ಭಾವಪೂರ್ಣ ಶ್ರದ್ಧಾಂಜಲಿ**

ಹುಬ್ಬಳ್ಳಿ-ಧಾರವಾಡ ಬೈಪಾಸ್‌ನ ಇಟ್ಟಿಗಟ್ಟಿ ಬಳಿ ಜನವರಿ 15 ರಂದು ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ **ಸಂತ ಪೌಲರ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ಹಿರಿಯ ವಿದ್ಯಾರ್ಥಿನಿಯರು** ಧಾರುಣವಾಗಿ ಮೃತಪಟ್ಟಿದ್ದು, ದಯಾಮಯ ದೇವರು ಮೃತರಾದವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖಿತಪ್ತ :

**ಆಡಳಿತ ಮಂಡಳಿ, ಶಿಕ್ಷಕ-ಶಿಕ್ಷಕೇತರ ವರ್ಗ ಹಾಗೂ ವಿದ್ಯಾರ್ಥಿನಿಯರು,**
**ಸಂತ ಪೌಲರ ಶಿಕ್ಷಣ ಸಂಸ್ಥೆ, ದಾವಣಗೆರೆ.**


# ವಿವೇಕಾನಂದ ಇಂದಿನ ವಿದ್ಯಾರ್ಥಿಗಳಿಗೆ ಮಾದರಿ

ದಾವಣಗೆರೆ, ಜ. 12- ತಮ್ಮ ಜೀವನದಲ್ಲಿನ ಕಡು ಬಡತನ, ಕಾಯಿಲೆ, ಅವಹೇಳನದ ಮಾತುಗಳ ನಡುವೆಯೂ ಎದೆಗುಂದದೆ ಇಡೀ ಜಗತ್ತಿನ ತತ್ವ ಶಾಸ್ತ್ರಗಳನ್ನು ಅರೆದು ಕುಡಿದು ಜಗತ್ತಿಗೆ ಮಹಾಗುರುವಾದ ಸ್ವಾಮಿ ವಿವೇಕಾನಂದ ಅವರು ಇಂದಿನ ವಿದ್ಯಾರ್ಥಿಗಳಿಗೆ ಮಾದರಿ ಎಂದು ಪ್ರಗತಿಪರ ಚಿಂತಕ ದಿನೇಶ್ ಅಮಿನ್ ಮಟ್ಟು ಹೇಳಿದರು.

ಎನ್.ಎಸ್.ಯು.ಐ. ಹಾಗೂ ಎ.ವಿ. ಕಮಲಮ್ಮ ಮಹಿಳಾ ಮಹಾವಿದ್ಯಾಲಯದ ಸಹ ಭಾಗಿತ್ವದಲ್ಲಿ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಸ್ವಾಮಿ ವಿವೇಕಾನಂದರ 158ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಉಪನ್ಯಾಸ ನೀಡಿದರು.

ಓರ್ವ ಸನ್ಯಾಸಿಯಾಗಿ ವಿವೇಕಾನಂದರು ದೇವರು, ಧರ್ಮದ ಬಗ್ಗೆ ಮಾತನಾಡದೆ ಬಡವರು, ರೋಗಿಗಳು, ನಿರ್ಗತಿಕರಲ್ಲಿ ದೇವರನ್ನು ಕಾಣಬೇಕೇ ಹೊರತು, ಹೊರಗಡೆ ಹುಡುಕಲು ಹೋಗಬಾರದು ಎಂದಿದ್ದರು. ಆದರೆ ಇಂದಿಗೂ ನಮ್ಮ ದೇಶವನ್ನು ಹಸಿವು,



ಪ್ರಗತಿಪರ ಚಿಂತಕ ದಿನೇಶ್ ಅಮಿನ್ ಮಟ್ಟು

ಅನಕ್ಷರತೆ, ಅನಾರೋಗ್ಯದ ಸಮಸ್ಯೆಗಳು ಕಾಡುತ್ತಿವೆ ಎಂದರು.

ನಾವು ಯಾವ ಜಾತಿ, ಧರ್ಮಕ್ಕೆ ಸೇರಿದ್ದೇವೆಂದು ಮರೆತು, ನಾವು ಕೇವಲ ಮನುಷ್ಯರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವ ಜೊತೆಗೆ, ಸ್ವಾಮಿ ವಿವೇಕಾನಂದರು ಯಾವ ಜಾತಿ, ಧರ್ಮ ಎಂಬುದನ್ನೂ ಮರೆತು, 'ಇಡೀ ಮನುಕುಲದ ಬಗ್ಗೆ ಮಾತನಾಡಿದ ಓರ್ವ ಆದರ್ಶ ಪುರುಷ' ಎಂದು ತಿಳಿದು ವಿವೇಕಾನಂದರ ಬಗ್ಗೆ ಓದಿದರೆ ಮಾತ್ರ ಅವರು ಅರ್ಥವಾಗುತ್ತಾರೆ. ಜೊತೆಗೆ ನಮ್ಮ ಬದುಕಿನ ದಾರಿಗೆ ಬೆಳಕಾಗುತ್ತಾರೆ ಎಂದು ಹೇಳಿದರು.

ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ನಾರಾಯಣ ಗುರು, ಕುವೆಂಪು ಅವರುಗಳು ಹೇಳಿದ ಚಿಂತನೆಗನುಗುಣವಾಗಿ ಹಿಂದೂ ಧರ್ಮವನ್ನು ಸುಧಾರಣೆಗೊಳಪಡಿಸಿದ್ದರೆ ಹಿಂದೂ ಧರ್ಮ ಕೇವಲ ಭಾರತ ಹಾಗೂ ಅರ್ಧ ನೇಪಾಳಕ್ಕಷ್ಟೇ ಸೀಮಿತವಾಗದೆ ಜಗತ್ತಿನಾದ್ಯಂತ ವ್ಯಾಪಿಸುತ್ತಿತ್ತು ಎಂದು ಅಭಿಪ್ರಾಯಿಸಿದರು.

ಹಿಂದೂ ಧರ್ಮದ ಹುಳುಕುಗಳ ಬಗ್ಗೆಯೇ ಸ್ವಾಮಿ ವಿವೇಕಾನಂದರು ಮಾತನಾಡಿದ್ದರು. ಆದರೆ ಇಂದು ಹಿಂದೂ ಧರ್ಮದ ಬಗ್ಗೆ ಮಾತನಾಡಿ ಧರ್ಮ ದ್ರೋಹಿ ಎಂದು ಹೇಳಲಾಗುತ್ತಿದೆ. ಧರ್ಮವನ್ನು ತಾಯಿ ಎಂದು ತಿಳಿದವರು ಧರ್ಮದ ಹುಳುಕು ಪ್ರಶ್ನಿಸಿದರೆ ತಪ್ಪೇನು? ಎಂದು ಪ್ರಶ್ನಿಸಿದರು.

ಹಿಂದೂ ಧರ್ಮ ಹರಿಯುವ ನೀರಿನಂತಿರಬೇಕು. ವಿವೇಕಾನಂದರು ಸೇರಿದಂತೆ ಕೆಲ ಮಹಾನ್ ಪುರುಷರು ಕಾಲ ಕಾಲಕ್ಕೆ ಧರ್ಮದಲ್ಲಿನ ಕೊಳೆಯನ್ನು ತೊಳೆದು ಶುದ್ಧ ಮಾಡಿದ್ದಾರೆ. ಇಲ್ಲದಿದ್ದರೆ ಹಿಂದೂ ಧರ್ಮ ಎಲ್ಲಿಯೋ ಕಳೆದು ಹೋಗುತ್ತಿತ್ತು ಎಂದರು.


ಎ.ವಿ. ಕಮಲಮ್ಮ ಕಾಲೇಜು ಪ್ರಾಂಶುಪಾಲ ಡಾ.ಬಿ.ಪಿ. ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎ.ಬಿ. ಶಿವನಗೌಡ, ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ವಕೀಲ ಅನಂತನಾಯ್ಕ, ಪಾಲಿಕೆ ಸದಸ್ಯ ಚಮನ್ ಸಾಬ್ ಉಪಸ್ಥಿತರಿದ್ದರು.

# ಕಿಸಾನ್ ಕಾಂಗ್ರೆಸ್ ರ‍್ಯಾಲಿಗೆ ಜಿಲ್ಲೆಯಿಂದ 5 ಸಾವಿರ ಜನ ಭಾಗಿ

ದಾವಣಗೆರೆ, ಜ.15- ಕೇಂದ್ರ ಸರ್ಕಾರದ ವಿರುದ್ಧ ಇದೇ ದಿನಾಂಕ 20 ರಂದು ಬೆಂಗಳೂರಲ್ಲಿ ಬೃಹತ್ ಕಿಸಾನ್ ಕಾಂಗ್ರೆಸ್ ರ‍್ಯಾಲಿ ನಡೆಯಲಿದ್ದು, ದಾವಣಗೆರೆ ಜಿಲ್ಲೆಯಿಂದ ಸುಮಾರು 5 ಸಾವಿರ ಮಂದಿ ತೆರಳಲಿದ್ದಾರೆ ಎಂದು ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ ಶಿವಗಂಗಾ ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಹೋರಾಟದ ಯಶಸ್ಸಿಗೆ ನಮ್ಮ ಜಿಲ್ಲೆಯ ಜವಾಬ್ದಾರಿ ವಹಿಸಿದ್ದಾರೆ. ಈ ಹಿನ್ನೆಲೆ ಬೆಂಗಳೂರಿನಲ್ಲಿ ನಡೆಯುವ ಹೋರಾಟಕ್ಕೆ ಜಿಲ್ಲೆಯಿಂದ ಸಾವಿರಾರು ಕಾರ್ಯಕರ್ತರು ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಕಿಸಾನ್ ಕಾಂಗ್ರೆಸ್ ಪದಾಧಿಕಾರಿಗಳೊಂದಿಗೆ ಕಿಸಾನ್ ರ‍್ಯಾಲಿ ಪೂರ್ವಭಾವಿ ಸಭೆ ನಡೆಸಿದ ಅವರು ಈ ವಿಷಯ ತಿಳಿಸಿದರು.

ರೈತ ವಿರೋಧಿ ನೀತಿಗಳು ಹಾಗೂ ಕಾನೂನು ಜಾರಿಗೆ ತಂದಿರುವ ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ಅನಿವಾರ್ಯ ಎಂದರು. ರೈತರ ಮರಣ ಶಾಸನ ಬರೆಯಲು ಮುಂದಾಗಿರುವ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕಿದೆ. ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಹೋರಾಟ



ಬಸವರಾಜು ವಿ. ಶಿವಗಂಗಾ

ಹಮ್ಮಿಕೊಂಡಿದ್ದು ಕಾಂಗ್ರೆಸ್ ಪಕ್ಷ ಬೃಹತ್ ಪ್ರತಿಭಟನೆ ನಡೆಸಲಿದೆ ಎಂದರು.

ದೇಶದ ರಾಜಧಾನಿಯಲ್ಲಿ ರೈತರು ಕಳೆದ 40 ದಿನಗಳಿಂದ ಪ್ರತಿಭಟನೆ ಮಾಡಿದರೂ ಕೇಂದ್ರದ ಬಿಜೆಪಿ ಸರ್ಕಾರ ಕಿವಿ ಕೇಳದ ಕಿವುಡನಂತೆ ಆಡಳಿತ ಮಾಡುತ್ತಿದೆ.

ದೇಶದಲ್ಲಿ ರೈತರು ಸುರಕ್ಷತೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದು ಬಸವರಾಜು ವಿ ಶಿವಗಂಗಾ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಕೊಟ್ಟ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯ ಜನರು ಜೀವನ ನಡೆಸುವುದು ಕಷ್ಟವಾಗುತ್ತಿದೆ. ನಿತ್ಯ ಬಳಕೆ ವಸ್ತುಗಳ ಬೆಲೆ ಗಗನಕ್ಕೇರಿವೆ.

ಪೆಟ್ರೋಲ್, ಡಿಸೇಲ್, ಸಿಲಿಂಡರ್ ಬೆಲೆ ಹೆಚ್ಚಾಗಿದೆ. ಎಲ್ಲಿದೆ ಅಚ್ಛೇ ದಿನ್ ಎಂದು ಪ್ರಶ್ನೆ ಮಾಡಿದರು.

ದೇಶದಲ್ಲಿ ಬಡ ಜನರು ನೆಮ್ಮದಿಯಿಂದ ಬದುಕಲು ಕಾಂಗ್ರೆಸ್ ಸರ್ಕಾರ ಬರಬೇಕು, ಬಿಜೆಪಿ ಸರ್ಕಾರ ತೊಲಗಬೇಕು. ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ಅನಿವಾರ್ಯ ಎಂದರು. ಈ ವೇಳೆ ಕಿಸಾನ್ ಕಾಂಗ್ರೆಸ್ ಬೆಂಬಲಿತರು ನೂತನವಾಗಿ ಗ್ರಾಮ ಪಂಚಾಯ್ತಿಗೆ ಆಯ್ಕೆಯಾದ ಸದಸ್ಯರಿಗೆ ಬಸವರಾಜು ವಿ. ಶಿವಗಂಗಾ ಸನ್ಮಾನಿಸಿ, ಗೌರವಿಸಿ, ಜನಸೇವೆ ಮಾಡಬೇಕು ಎಂದು ತಿಳಿಸಿದರು. ಈ ವೇಳೆ ಕಿಸಾನ್ ಕಾಂಗ್ರೆಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ ಶ್ರೀ ಸಂಗಮೇಶ್ವರ ಹಾರ್ಡ್‌ವೇರ್ಸ್ ಮಾಲೀಕರಾದ ಶ್ರೀ ವೀರೇಶ್ ಬಿರಾದಾರ್ ಅವರ ಧರ್ಮಪತ್ನಿ

**ಶ್ರೀಮತಿ ವರ್ಷಿತಾ (ಶಕುಂತಲ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು

**ದಿ ದಾವಣಗೆರೆ ಗನ್ನಿ ಮರ್ಚಂಟ್ಸ್ ಅಸೋಸಿಯೇಷನ್, ದಾವಣಗೆರೆ.**


### ದಿನದ ಚುಟುಕು

ಕಾಂಚಾಣದಾಟವೋ ಆಟ
ಒಳಸಂಚಿನಲಿ ಮಹಾದಾಟ
ಹೊರಗೆ ಬಂದರೆ ಬಡಿದಾಟ
ಇಕ್ಕಟ್ಟಿನಲ್ಲಿ ಪ್ರಾಣ ಸಂಕಟ !!

- ವೀಕೆಎಂ

## ಕರಾಟೆ ಪಟುಗಳಿಗೆ ಬಂಗಾರದ ಪದಕ



ರಾಣೇಬೆನ್ನೂರು

ರಾಣೇಬೆನ್ನೂರು, ಜ.15- ವಿಜಯ ಅಗಡಿ ಮಾರ್ಷಲ್ ಆರ್ಟ್ಸ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಇತ್ತೀಚೆಗೆ ಆನ್‌ಲೈನ್ ಕಟಾ ಸ್ಪರ್ಧೆಯು 6ನೇ ಓಪನ್ ಗೋವಾ ಇಂಟರ್‌ನ್ಯಾಷನಲ್ ಚಾಂಪಿಯನ್ ಶಿಪ್ ಅನ್ನು ವರ್ಲ್ಡ್ ಪುಲಾಕೋಶಿ ಷೋಟೋಕಾನ್ ಕರಾಟೆ ಆರ್ಗನೈಸೇಷನ್ ಆಯೋಜಿಸಿದ್ದು ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಗರದ ವಿಜಯ ಅಗಡಿ ಮಾರ್ಷಲ್ ಆರ್ಟ್ಸ್ ಸ್ಪೋರ್ಟ್ಸ್ ಕ್ಲಬ್ ಮಕ್ಕಳು ಸಾಧನೆ ತೋರಿದ್ದಾರೆ.

ಸುಮಾರು 22 ದೇಶಗಳ ಸ್ಪರ್ಧಾಳುಗಳು ಭಾಗವಹಿಸಿದ್ದ ಸ್ಪರ್ಧೆಯಲ್ಲಿ ಕ್ಲಬ್‌ನ ಮಕ್ಕಳಾದ ಚಂದನಾ ಜಿ. ನಾಯಕ್, ಎಸ್. ಶರತ್, ಎಫ್.ಎಂ. ಹರ್ಷಾ, ಎಂ. ರುಚಿತಾ ಚಿನ್ನಿಕಟ್ಟಿ ಇವರು ಗೋಲ್ಡ್ ಮೆಡಲ್ ಪಡೆದು ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ.

ಕ್ಲಬ್‌ನ ಪಾಲಕರಾದ ಗಂಗಾಧರ ನಾಯಕ್ (ಬಿಎಸ್‌ಎನ್‌ಎಲ್ ನಿವೃತ್ತರು), ಜೆಸಿ ಅಧ್ಯಕ್ಷ ಶಿವರುದ್ರಪ್ಪ, ಶಿಕ್ಷಕ ನಾಗರಾಜ್ ಚಿನ್ನಿಕಟ್ಟಿ, ಹೆಸ್ಕಾಂ ಜ್ಯೂನಿಯರ್ ಅಸಿಸ್ಟೆಂಟ್, ವೈ. ಫಕ್ಕೀರೇಶ ಮಡಿವಾಳರ, ಕ್ಲಬ್‌ನ ಮುಖ್ಯಸ್ಥರು ಹಾಗೂ ತರಬೇತುದಾರರಾದ ಶ್ರೇಯಾನ್ ವಿಜಯ ಅಗಡಿ ಹಾಜರಿದ್ದು ಸ್ಪರ್ಧಾಳುಗಳಿಗೆ ಪದಕ ಮತ್ತು ಪ್ರಮಾಣ ಪತ್ರ ವಿತರಿಸಿದರು.

## ಎಲ್ಲದಕ್ಕೂ ದೈವ ಕೃಪೆ ಬೇಕು

ಮುನಿರತ್ನ

ದಾವಣಗೆರೆ, ಜ.15- ನನಗೆ ಸಚಿವ ಸ್ಥಾನ ನೀಡದಿದ್ದಕ್ಕೆ ಕಾರಣವೇನೂ ಇಲ್ಲ. ಎಲ್ಲದಕ್ಕೂ ದೈವ ಕೃಪೆ ಬೇಕು. ಅವಕಾಶ ಸಿಗಲಿಲ್ಲ ಎಂದು ಆರೋಪ ಮಾಡಲಾರೆ. ಎಂದು ಶಾಸಕ ಮುನಿರತ್ನ ಹೇಳಿದ್ದಾರೆ.

ಜಿಎಂಐಟಿ ಹೆಲಿಪ್ಯಾಡ್‌ನಲ್ಲಿಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಚಿವ ಸ್ಥಾನ ಸದ್ಯಕ್ಕೆ ಮುಗಿದ ಅಧ್ಯಾಯ. ಅದರ ಬಗ್ಗೆ ಚರ್ಚೆ ಬೇಡ ಎಂದರು. ಕಾರಣಾಂತರದಿಂದಾಗಿ ಮಂತ್ರಿಗಿರಿ ನೀಡುವುದು ವಿಳಂಬವಾಗಿದೆ. ಯಾವಾಗ ಕಾಲ ಕೂಡಿ ಬರುತ್ತದೋ ನೋಡಬೇಕಿದೆ. ಮುಖ್ಯಮಂತ್ರಿಗಳ ಮೇಲೆ ನಂಬಿಕೆ ಇದೆ. ಸಚಿವ ಸ್ಥಾನ ನೀಡಲು ಬದ್ಧರಿದ್ದಾರೆ. ಸದ್ಯಕ್ಕೆ ಪಕ್ಷ ಸಂಘಟನೆ ಹಾಗೂ ಕ್ಷೇತ್ರದ ಅಭಿವೃದ್ಧಿಯತ್ತ ಗಮನ ನೀಡುತ್ತೇನೆ ಎಂದು ಹೇಳಿದರು. ಶಾಸಕ ಬಸನಗೌಡ ಪಾಟೀಲ್ ಬಳಿ ಸಿಡಿ ಇದ್ದರೆ ಬಿಡುಗಡೆ ಮಾಡಲಿ. ಆಧಾರ ರಹಿತ ಆರೋಪ ಮಾಡುವುದು ಬೇಡ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ನಗರದಲ್ಲಿ ಇಂದು ನಡೆಯಬೇಕಿದ್ದ ನಾಟಕ ಪ್ರದರ್ಶನ ಮುಂದೂಡಿದೆ

ದಾವಣಗೆರೆ, ಜ.15- ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿಯಿಂದ ನಾಳೆ ದಿನಾಂಕ 16ರ ಶನಿವಾರ ಸಂಜೆ 6.30 ಕ್ಕೆ ನಡೆಯಬೇಕಿದ್ದ 'ಧರ್ಮ ದೇವತೆ' ನಾಟಕ ಪ್ರದರ್ಶನವನ್ನು ಅನಿವಾರ್ಯ ಕಾರಣಗಳಿಂದ ದಿನಾಂಕ 23.01.2021 ರ ಶನಿವಾರಕ್ಕೆ ಮುಂದೂಡಲಾಗಿದೆ ಎಂದು ಡ್ರಾಮಾ ಕಂಪನಿಯ ಅಧ್ಯಕ್ಷ ಚಿಂದೋಡಿ ಶಂಭುಲಿಂಗಪ್ಪ ತಿಳಿಸಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ
ನಮ್ಮ ಆತ್ಮೀಯ ಸ್ನೇಹಿತರಾದ ಶ್ರೀ ಶಶಿಧರ್ ಅವರ ಧರ್ಮಪತ್ನಿ

**ಶ್ರೀಮತಿ ಎಸ್.ಎಂ. ಪರಂಜ್ಯೋತಿ ಶಶಿಧರ್**

(ಮಾಲೀಕರು, ಜ್ಯೋತಿ ಪೆಟ್ರೋಲ್ ಬಂಕ್, ತ್ಯಾವಣಿಗಿ)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ ಸುರೇಶ್ ಪೈ, ನಲ್ಲುದುರೆ ಗೋಮಾಳ
- ✦ ಆಲೂರು ಚನ್ನಬಸಪ್ಪ ಕೆ.ಎಸ್.
- ✦ ಕೃಷ್ಣಮೂರ್ತಿ, ದಾವಣಗೆರೆ
- ✦ ರಂಗಪ್ಪ ಲೋಕಿಕೆರೆ
- ✦ ಅನ್ವರ್ ಭಾಷಾ, ತುರ್ಚಘಟ್ಟ
- ✦ ರಿಯಾಜ್ ಅಹಮದ್, ತುರ್ಚಘಟ್ಟ
- ✦ ವಿಜಿಗೌಡ, ನಲ್ಕುದುರೆ
- ✦ ಕುಮಾರ್ ಬೊಮ್ಮೇನಹಳ್ಳಿ (ಜುಲ್ಪಿ)

**ಶ್ರೀ ಗೆಳೆಯರ ಬಳಗ, ತುರ್ಚಘಟ್ಟ**



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ
ಶ್ರೀ ಅಂದನೂರು ಬಸವರಾಜಪ್ಪ (ACK)
ಅವರ ಪುತ್ರಿ ಮತ್ತು ವರ್ತಕರಾದ
ಶ್ರೀ ಶಿವಕುಮಾರ್ ಬಂದಮ್ಮನವರ್ ಅವರ ಧರ್ಮಪತ್ನಿ

**ಶ್ರೀಮತಿ ರಾಜೇಶ್ವರಿ ಬಂದಮ್ಮನವರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಂದನೂರು ಬಳಗ**



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 15.01.2021ರಂದು ಅಕಾಲಿಕವಾಗಿ ನಿಧನರಾದ
'ಆರೈಕೆ' ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರಾದ
ಡಾ।। ಟಿ.ಜಿ. ರವಿಕುಮಾರ್ ಅವರ ಧರ್ಮಪತ್ನಿ ಹಾಗೂ
ದಿ।। ಶಾಮನೂರು ಕಲ್ಲೇಶಪ್ಪ ಅವರ ಪುತ್ರಿ ಮತ್ತು
ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ

**ಶ್ರೀಮತಿ ಪ್ರೀತಿ ರವಿಕುಮಾರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀಮತಿ ಮೇಘನಾ ಮತ್ತು ಎಸ್.ಕೆ. ಪವಿತ್ರ,**
**ಕು।। ಗೌರಿ, ಚಿ।। ಸಮನ್ಯು**
**ಶ್ರೀಮತಿ ಶ್ವೇತಾ ಮತ್ತು ಎಸ್.ಕೆ. ಪ್ರದೀಪ್**
**ಹಾಗೂ ಶಾಮನೂರು ಬಂಧು - ಮಿತ್ರರು.**

ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 16, 2021

# ಭೀಕರ ರಸ್ತೆ ಅಪಘಾತದಲ್ಲಿ ದಾವಣಗೆರೆಯ 9 ಮಹಿಳೆಯರು ಸೇರಿದಂತೆ 11 ಜನರ ದುರ್ಮರಣ



ಧಾರವಾಡ,ಜ.15- ಇಲ್ಲಿನ ಬೈಪಾಸ್ ರಸ್ತೆಯ ಇಟ್ಟಿಗಟ್ಟಿ ಗ್ರಾಮದ ಸಮೀಪದ ಸ್ವರ್ಗ ಫಾರ್ಮ್ ಹೌಸ್ ಹತ್ತಿರ ಇಂದು ಮುಂಜಾನೆ 7ರ ಸಮಯದಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ದಾವಣಗೆರೆಯ 9 ಜನ ಮಹಿಳೆಯರು ಸೇರಿದಂತೆ ಒಟ್ಟು 11 ಜನರು ಸಾವಿಗೀಡಾಗಿದ್ದು, 6 ಜನರು ಗಾಯಗೊಂಡಿದ್ದಾರೆ.

ದಾವಣಗೆರೆಯಿಂದ ಗೋವಾಕ್ಕೆ ಚಲಿಸುತ್ತಿದ್ದ ಕೆಎ 64 - 1316 ಸಂಖ್ಯೆಯ ಮಿನಿ ಬಸ್ ಮತ್ತು ಕೆಎ 22-ಸಿ 1649 ಸಂಖ್ಯೆಯ ಟಿಪ್ಪರ್ ಲಾರಿ ನಡುವೆ ಡಿಕ್ಕಿಯಾದ ಪರಿಣಾಮ ಈ ಅಪಘಾತ ನಡೆದಿದೆ. ಡಿಕ್ಕಿಯ ರಭಸಕ್ಕೆ ಮಿನಿ ಬಸ್ ಮತ್ತು ಲಾರಿ ಎರಡೂ ನಜ್ಜುಗುಜ್ಜಾಗಿವೆ.

ಶ್ರೀಮತಿ ಪ್ರೀತಿ ರವಿಕುಮಾರ್ (46), ಶ್ರೀಮತಿ ಪರಂಜ್ಯೋತಿ ಶಶಿಧರ (47), ಶ್ರೀಮತಿ ವರ್ಷಿತಾ ವೀರೇಶ್ (46), ಶ್ರೀಮತಿ ಮಂಜುಳಾ ನಟೇಶ್ ಜಿ.ಬಿ. (47), ಶ್ರೀಮತಿ ರಾಜೇಶ್ವರಿ ಶಿವಕುಮಾರ್ ಬಂದಮ್ಮನವರ್ (46), ಡಾ. ವೀಣಾ ಮತ್ತಿಹಳ್ಳಿ ಪ್ರಕಾಶ್ (47), ಶ್ರೀಮತಿ ಮಾನಸಿ (ಹೇಮಲತಾ) (48), ಕು. ಯಶ್ಮಿತಾ (18) ಮತ್ತು ಕ್ಷರಾ ತಂದೆ ಸುರೇಶ್ ಬಾಬು ಪೊರಾಳ್ (21) ರಸ್ತೆ ಅಪಘಾತದಲ್ಲಿ ಮಡಿದ ದುರ್ದೈವಿಗಳು.

ಮಿನಿ ಬಸ್ ಚಾಲಕ ರಾಣೇಬೆನ್ನೂರಿನ ರಾಜು ಸೋಮಪ್ಪ ಗೊರಬಣ್ಣನವರ್ (38) ಮತ್ತು ಮಿನಿ ಬಸ್ ನಿರ್ವಾಹಕ ರಾಣೇಬೆನ್ನೂರಿನ ಮಲ್ಲಿಕಾರ್ಜುನ ಉಡಗಟ್ಟಿ (27) ಅಪಘಾತದಲ್ಲಿ ಸತ್ತಿರುವ ಇತರರು.

ನಿರ್ಮಲಾ ಚಂದ್ರಶೇಖರ್ (46), ಆಶಾ ಜಗದೀಶ್ ಬೇತೂರು (47), ವೇದ ಮಂಜುನಾಥ (46), ಉಷಾರಾಣಿ ರಮೇಶ್ (46), ಪೂರ್ಣಿಮಾ ಸುರೇಶ್ ಬಾಬು (46), ಪ್ರವೀಣಾ ಪ್ರಕಾಶ್ (46) ಗಾಯಗೊಂಡಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇವರೊಂದಿಗೆ ಲಾರಿ ಚಾಲಕ ಬಸವರಾಜ ಈರಪ್ಪ ಖಾದರೊಳ್ಳಿ (25) ಕೂಡಾ ಗಾಯಗೊಂಡಿದ್ದಾನೆ.

ಪ್ರವಾಸ ಕೈಗೊಂಡಿದ್ದ ಎಲ್ಲಾ ಮಹಿಳೆಯರು




ದಾವಣಗೆರೆಯ ಹೆಸರಾಂತ ಮನೆತನದವರಾಗಿದ್ದು, ಶಾಲಾ - ಕಾಲೇಜುಗಳ ಆತ್ಮೀಯ ಸಹಪಾಠಿಗಳಾಗಿದ್ದರು. ಪ್ರತಿ ವರ್ಷಕ್ಕೊಮ್ಮೆ ಪ್ರವಾಸ ಕೈಗೊಳ್ಳುತ್ತಿದ್ದ ಇವರು ಈ ಬಾರಿಯೂ ಮೂರು ದಿನಗಳ ಗೋವಾ ಪ್ರವಾಸವನ್ನು ಹಮ್ಮಿಕೊಂಡಿದ್ದರು. ಕೈಗೊಂಡಿರುವ ಸಿದ್ಧತೆಯಂತೆ ಇಂದು ಮುಂಜಾನೆ 3.45ರ ವೇಳೆಗೆ ದಾವಣಗೆರೆಯಿಂದ ಮಿನಿ ಬಸ್ ಹೊರಡುವ

### ಶಾಲಾ-ಕಾಲೇಜುಗಳ ಸಹಪಾಠಿಗಳಾಗಿದ್ದ 15 ಜನರು ಗೋವಾ ಪ್ರವಾಸಕ್ಕೆ ಹೊರಟಾಗ ಧಾರವಾಡದ ಬಳಿ ಸಂಭವಿಸಿದ ಅಪಘಾತ

ಸಂದರ್ಭದಲ್ಲಿ ಎಲ್ಲರೂ ಸೇರಿ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದ್ದರು. ಬಸ್ ಧಾರವಾಡ ಸಮೀಪ ಹೋಗುತ್ತಿದ್ದಾಗ ಯಮನಂತೆ ಬಂದ ಟಿಪ್ಪರ್ ಲಾರಿ ಅಪ್ಪಳಿಸಿದ ಪರಿಣಾಮ ಮಿನಿ ಬಸ್ ಗುರುತು ಸಿಗದಷ್ಟು ಅಪ್ಪಚ್ಚಿಯಾಗಿದೆ.

ದುರಂತಕ್ಕೊಳಗಾದವರ ಇನ್ನಿಬ್ಬರು ಗೆಳತಿಯರು ಬೆಂಗಳೂರಿನಲ್ಲಿ ವಾಸವಾಗಿದ್ದು, ಅವರು ನಿನ್ನೆಯೇ ವಿಮಾನದ ಮೂಲಕ ಗೋವಾಕ್ಕೆ ತೆರಳಿ ಹೋಟೆಲ್ ನಲ್ಲಿ ರೂಂ ಮಾಡಿಕೊಂಡು, ದಾವಣಗೆರೆಯ ಗೆಳತಿಯರ ಬರುವಿಕೆಯ ನಿರೀಕ್ಷೆಯಲ್ಲಿದ್ದರು. ಮೊಬೈಲ್ ಫೋನ್ ಮೂಲಕ ಸಂಪರ್ಕಿಸಿದಾಗ ವಿಷಯ ತಿಳಿದು ಆತಂಕಗೊಂಡರು.

**ಮೃತಪಟ್ಟಿರುವವರ ವಿವರ :**

ಶ್ರೀಮತಿ ಪ್ರೀತಿ ಅವರು ದಾವಣಗೆರೆಯ ಆರೈಕೆ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಆಸ್ಪತ್ರೆಯ ವೈದ್ಯ ಡಾ.ರವಿಕುಮಾರ್ ಅವರ ಧರ್ಮಪತ್ನಿ. ಅಲ್ಲದೇ, ಜಗಳೂರು ಕ್ಷೇತ್ರದ ಮಾಜಿ ಶಾಸಕ ಟಿ. ಗುರುಸಿದ್ದನಗೌಡ ಅವರ ಸೊಸೆ ಮತ್ತು ದಾವಣಗೆರೆಯ ಹೆಸರಾಂತ ಮನೆತನದ ದಿ. ಶಾಮನೂರು ಕಲ್ಲೇಶಪ್ಪ ಅವರ ಪುತ್ರಿ.

ಶ್ರೀಮತಿ ಪರಂಜ್ಯೋತಿ ಅವರು ತ್ಯಾವಣಗಿಯ ಜ್ಯೋತಿ ಪೆಟ್ರೋಲ್ ಬಂಕ್ ಮಾಲೀಕರಾಗಿದ್ದು, (6ನೇ ಪುಟಕ್ಕೆ)

# ಇಂದು ಲಸಿಕೆ

## ಇಂದು ಜಿಲ್ಲೆಯ 7 ಕೇಂದ್ರಗಳಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ

ದಾವಣಗೆರೆ, ಜ. 15 - ಜಿಲ್ಲೆಗೆ ಕೋವಿಶೀಲ್ಡ್ ಲಸಿಕೆಯ ನಂತರ ಕೊವ್ಯಾಕ್ಸಿನ್ ಲಸಿಕೆಯೂ ಸಹ ಆಗಮಿಸಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ನಾಳೆ ಶನಿವಾರ ಜಿಲ್ಲೆಯಲ್ಲಿ ಕೊರೊನಾ ಲಸಿಕೆಗೆ ಚಾಲನೆ ನೀಡಲಿರುವ ಹಿನ್ನೆಲೆಯಲ್ಲಿ ಪೂರ್ವ ಸಿದ್ಧತೆ ಪರಿಶೀಲಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಜಿಲ್ಲೆಗೆ 13,500 ಡೋಸ್‌ಗಳ ಕೋವಿಶೀಲ್ಡ್ ಲಸಿಕೆ ತಲುಪಿದೆ. ಮುಂದಿನ ದಿನಗಳಲ್ಲಿ 708 ಡೋಸ್ ಕೊವ್ಯಾಕ್ಸಿನ್ ಲಸಿಕೆ ಬರುವ ನಿರೀಕ್ಷೆಯಲ್ಲಿದ್ದೇವೆ ಎಂದು ತಿಳಿಸಿದ್ದಾರೆ.




ಶನಿವಾರದಂದು ಜಿಲ್ಲೆಯ ಜನಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೊರೊನಾ ಲಸಿಕೆ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಲಾ ಗುವುದು. ಮೊದಲ ದಿನ ಸಿ.ಜಿ. ಆಸ್ಪತ್ರೆ ಸೇರಿದಂತೆ 7 ತಾಣಗಳಲ್ಲಿ ಲಸಿಕೆ ನೀಡಲಾಗುವುದು. ನಂತರದ ದಿನಗಳಲ್ಲಿ 36 ತಾಣಗಳಲ್ಲಿ ಲಸಿಕೆ ವಿತರಿಸಲಾಗುವುದು ಎಂದಿದ್ದಾರೆ. (6ನೇ ಪುಟಕ್ಕೆ)

### ಕೆಲವೇ ಜಿಲ್ಲೆಗಳಿಗೆ ಕೊವ್ಯಾಕ್ಸಿನ್

ರಾಜ್ಯದಲ್ಲಿ ಪ್ರಮುಖವಾಗಿ ಕೋವಿಶೀಲ್ಡ್ ಲಸಿಕೆಗಳನ್ನು ನೀಡಲಾಗಿದೆ. ಆದರೆ, 5-6 ಜಿಲ್ಲೆಗಳಲ್ಲಿ ಕೊವ್ಯಾಕ್ಸಿನ್ ಲಸಿಕೆಗಳನ್ನು ಪೂರೈಸಲಾಗುತ್ತಿದೆ. ಆ ಜಿಲ್ಲೆಗಳಲ್ಲಿ ದಾವಣಗೆರೆಯೂ ಸೇರಿದಂತೆ. ಮುಂದಿನ ಕೆಲವೇ ದಿನಗಳಲ್ಲಿ ಕೊವ್ಯಾಕ್ಸಿನ್ ಲಸಿಕೆಯೂ ಬರಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೊವ್ಯಾಕ್ಸಿನ್ ಲಸಿಕೆಯನ್ನು ಭಾರತ್ ಬಯೋಟೆಕ್ ರೂಪಿಸಿದೆ. ಇದು ಸಂಪೂರ್ಣ ಭಾರತದಲ್ಲಿ ರೂಪುಗೊಂಡು, ಉತ್ಪಾದನೆಯಾಗಿದೆ.

# ಅಸಮಾಧಾನಕ್ಕೆ ತೆರೆ ಎಳೆಯಲು ಅಮಿತ್ ಷಾ ಮಧ್ಯ ಪ್ರವೇಶ

ಬೆಂಗಳೂರು, ಜ. 1 5- ರಾಜ್ಯ ಸಚಿವ ಸಂಪುಟ ವಿಸ್ತರಣೆ ನಂತರ ಪಕ್ಷದಲ್ಲಿ ಎದ್ದಿರುವ ಅಸಮಾಧಾನಕ್ಕೆ ತೆರೆ ಎಳೆಯಲು ಗೃಹ ಸಚಿವ ಅಮಿತ್ ಷಾ ಮಧ್ಯ ಪ್ರವೇಶ ಮಾಡಲಿದ್ದಾರೆ.



ಪಕ್ಷ ಮತ್ತು ಸರ್ಕಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉದ್ದೇಶದಿಂದ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಗೃಹ ಸಚಿವರು, ತಮ್ಮ ಭೇಟಿಯ ಸಂದರ್ಭದಲ್ಲೇ ಸರ್ಕಾರ ಮತ್ತು ಪಕ್ಷದ ಗೊಂದಲಗಳಿಗೆ ತೆರೆ ಎಳೆಯಲಿದ್ದಾರೆ.

ವಿಧಾನಸೌಧದಲ್ಲಿ ನಡೆಯುವ ಪೊಲೀಸ್ ಅಧಿಕಾರಿಗಳ ಸಭೆಯ ನಂತರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕೊಠಡಿಯಲ್ಲೇ ಸ್ವಲ್ಪ ಸಮಯ ವಿಶ್ರಾಂತಿ ಪಡೆಯಲಿದ್ದಾರೆ. ಈ ಸಂದರ್ಭದಲ್ಲೇ ಮುಖ್ಯಮಂತ್ರಿಯವರ ಜೊತೆ ಮುಖಾಮುಖಿ 20 ನಿಮಿಷಗಳ ಚರ್ಚೆ ನಡೆದಿದ್ದು, ತಮ್ಮ ಸಮಯ ಮೀಸಲಿರಿಸಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ನಂತರ ಆಗಿರುವ ಬೆಳವಣಿಗೆಗಳ ಬಗ್ಗೆ ಯಡಿಯೂರಪ್ಪ ಅವರಿಂದ ಮಾಹಿತಿ ಪಡೆಯುವ ಅಮಿತ್ ಷಾ ಅವರು ಇದನ್ನು ಕೊನೆಗಾಣಿಸಲು ಏನು (6ನೇ ಪುಟಕ್ಕೆ)


# ಮಾಜಿ ಶಾಸಕ ಟಿ. ಗುರುಸಿದ್ದನಗೌಡ್ರು ಅವರಿಗೆ ಸೊಸೆ ವಿಯೋಗ

ದಾವಣಗೆರೆ ಹದಡಿ ರಸ್ತೆಯಲ್ಲಿರುವ
'ಆರೈಕೆ' ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರಾದ
ಡಾ|| ಟಿ.ಜಿ. ರವಿಕುಮಾರ್ ಅವರ ಧರ್ಮಪತ್ನಿ ಹಾಗೂ
ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ

## ಶ್ರೀಮತಿ ಪ್ರೀತಿ ರವಿಕುಮಾರ್

ಅವರು ದಿನಾಂಕ 15.01.2021ರ ಶುಕ್ರವಾರ ಮುಂಜಾನೆ ಅಕಾಲಿಕವಾಗಿ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 46 ವರ್ಷ ವಯಸ್ಸಾಗಿತ್ತು.
ಮೃತರ ಪಾರ್ಥಿವ ಶರೀರವನ್ನು ದಿನಾಂಕ 16.01.2021ರ ಶನಿವಾರ
ಬೆಳಿಗ್ಗೆ 10 ರವರೆಗೆ 'ಸಂವೇದನ' 7ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ,
ದಾವಣಗೆರೆ. ಇಲ್ಲಿರುವ ಅವರ ಸ್ವಗೃಹದಲ್ಲಿ ಇಡಲಾಗಿದ್ದು
ನಂತರ 11 ಗಂಟೆಗೆ ಹರಪನಹಳ್ಳಿ ತಾಲ್ಲೂಕು ಗಡಿಗುಡಾಳ್
(ಮಾರ್ಗ : ಅಣಜಿ ಕ್ರಾಸ್, ಉಚ್ಚಂಗಿದುರ್ಗ) ಗ್ರಾಮದಲ್ಲಿರುವ
ಅವರ ತೋಟದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಶ್ರೀ. ಟಿ. ಗುರುಸಿದ್ದನ ಗೌಡ್ರು, ಮಾಜಿ ಶಾಸಕರು ಮತ್ತು ಕುಟುಂಬ ವರ್ಗ
ಹಾಗೂ ಆರೈಕೆ ಪರಿವಾರ

## ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
ಹದಡಿ ರಸ್ತೆ, ದಾವಣಗೆರೆ.



ಶ್ರೀಮತಿ ಪ್ರೀತಿ ರವಿಕುಮಾರ್
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಆರೈಕೆ ಆಸ್ಪತ್ರೆ

# ಜಿಲ್ಲಾ ಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ಮಹಮದ್ ತೌಫಿಕರ್ ದ್ವಿಶತಕ

ದಾವಣಗೆರೆ, ಜ.15- ನಗರದ ಮಯೂರ ಕ್ರಿಕೆಟ್ ಕ್ಲಬ್ ವತಿಯಿಂದ ಸಂಕ್ರಾಂತಿ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿರುವ ಆರು ದಿನಗಳ ಆಹ್ವಾನಿತ ಅಂತರ್ ಜಿಲ್ಲಾ ಮಟ್ಟದ 16 ವರ್ಷದೊಳಗಿನ ಬಾಲಕರ ಲೆದರ್ ಬಾಲ್ ಕ್ರಿಕೆಟ್ ಟೂರ್ನಿಯ ಎರಡನೇ ದಿನದ ಆಟದಲ್ಲಿ ದಾವಣಗೆರೆ ಕ್ರಿಕೆಟ್ ಅಕಾಡೆಮಿಯ ಮಹಮದ್ ತೌಫಿ ಕರ್ ಇಂದು ಮತ್ತೊಂದು ಶತಕ ಬಾರಿಸುವ ಮೂಲಕ ಟೂರ್ನಿಯಲ್ಲಿ ಸತತ ಎರಡನೇ ಶತಕ ಸಿಡಿಸಿದರು.



ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಬಳ್ಳಾರಿಯ ಡಾ. ಮಸ್ತಿಕರ್ ಅಕಾಡೆಮಿ ವಿರುದ್ಧ ನಡೆದ ರೋಚಕ ಪಂದ್ಯದಲ್ಲಿ ತೌಫಿಕರ್ ಕೇವಲ 66 ಎಸೆತಗಳಲ್ಲಿ 102 ರನ್ ಬಾರಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮತ್ತೊಂದು ಪಂದ್ಯಾವಳಿಯಲ್ಲಿ ದಾವಣಗೆರೆ ಯನೈಟೆಡ್ ಕ್ರಿಕೆಟ್ ಅಕಾಡೆಮಿ ಮತ್ತು ವೀನಸ್ ಪವರ್ ದಾವಣಗೆರೆ ಇವರ ಮಧ್ಯೆ ನಡೆದ ಪಂದ್ಯದಲ್ಲಿ ಆದರ್ಶ 64 ಕ್ಕೆ 66 ಮತ್ತು ರಕ್ಷಿತ ನಾಯಕ ಅವರ ಅಮೋಘ 22 ರನ್ ಗಳ ನೆರವಿನೊಂದಿಗೆ 155 ಉತ್ತಮ ಮೊತ್ತ ದಾಖಲಿಸಿದರು. ಇದಕ್ಕೆ ಉತ್ತರವಾಗಿ ವೀನಸ್ ಹುಡುಗರು 131 ಕ್ಕೆ ಆಲ್ ಔಟ್ ಆಗುವ ಮೂಲಕ ಸೋಲು ಅನುಭವಿಸಿದರು.

ಮೂರನೆ ಪಂದ್ಯದಲ್ಲಿ ಚಿತ್ರದುರ್ಗ ಮದಕರಿ ಕ್ರಿಕೆಟ್ ಕ್ಲಬ್ ಮತ್ತು ತುಮಕೂರು ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಚಿತ್ರದುರ್ಗದ ಮದಕರಿ ಬಾಲಕರು ಜಯಭೇರಿ ಬಾರಿಸಿದರು.

ಚಿತ್ರದುರ್ಗ ಮದಕರಿ ಬಾಲಕರು ಮತ್ತು ದಾವಣಗೆರೆಯ ಅಕಾಡೆಮಿ ತಂಡ ಆಡಿದ ಎರಡೂ ಪಂದ್ಯಗಳನ್ನು ಗೆಲ್ಲುವ ಮೂಲಕ ಟೂರ್ನಿಯ ಅಗ್ರಸ್ಥಾನದಲ್ಲಿದ್ದಾರೆ.

ಉಳಿದಂತೆ ಬಳ್ಳಾರಿ ಬಾಲಕರು ಆಡಿದ ಎರಡೂ ಪಂದ್ಯಗಳಲ್ಲಿ ಸೋಲು ಕಂಡಿದ್ದಾರೆ. ಯುನೈಟೆಡ್ ಕ್ರಿಕೆಟ್ ಅಕಾಡೆಮಿ ಮತ್ತು ತುಮಕೂರು ಅಕಾಡೆಮಿ ಬಾಲಕರು ತಲಾ ಒಂದೊಂದು ಪಂದ್ಯ ಸೋತು, ಒಂದು ಪಂದ್ಯದಲ್ಲಿ ಗೆದ್ದು ತಲಾ ಎರಡು ಅಂಕ ಗಳಿಸಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಶುಕ್ರವಾರ ಬೆಳಿಗ್ಗೆ ಎಂಬಿಎ ಮೈದಾನಕ್ಕೆ ಆಗಮಿಸಿ ಬ್ಯಾಟ್ ಬೀಸುವ ಮೂಲಕ ಕ್ರೀಡಾಪಟುಗಳನ್ನು ಹುರಿದುಂಬಿಸಿದ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಇಂತಹ ವಿಶೇಷ ಪಂದ್ಯಗಳು ನಿರಂತರವಾಗಿ ನಡೆಯಬೇಕು. ಕ್ರಿಕೆಟ್ ಆಟಗಾರರಿಗೆ ಈ ಟರ್ಫ್ ಕ್ರೀಡಾಂಗಣವನ್ನು ಇನ್ನೂ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಶಾಮನೂರು ಟಿ. ಬಸವರಾಜ್, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯ ದೇವರಮನೆ ಶಿವಕುಮಾರ್, ಅಬ್ದುಲ್ ಲತೀಫ್, ಕೆ. ಚಮನ್ ಸಾಬ್, ಜಿ.ಡಿ. ಪ್ರಕಾಶ್, ಅಯೂಬ್ ಪೈಲ್ವಾನ್, ಎಲ್.ಎಂ. ಪ್ರಕಾಶ್, ತುಮಕೂರು ಲೋಕೇಶ್, ಕೆ. ಶಶಿಧರ್, ಅಶೋಕ್, ಕೆಎಸ್ ಸಿಎ ವಕ್ತಾರರಾದ ಮೋಹನ್‌ರಾವ್, ಅನಿಲ್, ರೈತ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಕರಿಬಸಪ್ಪ, ತಿಮ್ಮೇಶ್, ಸಿರಿಗೆರೆ ಉಮೇಶ್, ರಂಗನಾಥ್, ಸಂತೋಷ್ ಕುಮಾರ್, ಎಲ್.ಬಿ. ಭೈರೇಶ್, ಅನಿತಾಬಾಯಿ ಮಾಲತೇಶ್, ಸುಷ್ಮಾ ಪಾಟೀಲ್ ಸೇರಿದಂತೆ ಇತರರು ಇದ್ದರು.

# ಮೀಸಲಾತಿ ಭಿಕ್ಷೆಯಲ್ಲ ಅದು ನಮ್ಮ ಹಕ್ಕು

## ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ



ಹರಪನಹಳ್ಳಿ, ಜ.15- ಮೀಸಲಾತಿ ಭಿಕ್ಷೆಯಲ್ಲ ಅದು ನಮ್ಮ ಸಂವಿಧಾನ ನೀಡಿದ ಹಕ್ಕಾಗಿದ್ದು, ಜಾತಿ, ಜನಸಂಖ್ಯೆ ಆಧಾರದ ಮೇಲೆ ರಾಜ್ಯ ಸರ್ಕಾರ ಶೇ. 7.5ರಷ್ಟು ಮೀಸಲಾತಿಯನ್ನು ಹೆಚ್ಚಿಸಬೇಕು ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ ಹೇಳಿದರು.

ತಾಲ್ಲೂಕಿನ ಕೋಣನಕಟ್ಟೆ. ಕಬ್ಬಳ್ಳಿ, ಉಚ್ಚಂಗಿದುರ್ಗ ಸೇರಿದಂತೆ ಅನೇಕ ಗ್ರಾಮಗಳಲ್ಲಿ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಬ್ಯಾನರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 50 ಲಕ್ಷಕ್ಕೂ ಅಧಿಕವಿದೆ. ಆದರೆ ವಾಲ್ಮೀಕಿ ನಾಯಕ ಸಮಾಜಕ್ಕೆ ಪ್ರಸ್ತುತ ಶೇ.3 ರಷ್ಟು ಮೀಸಲಾತಿ ನೀಡಲಾಗುತ್ತಿದೆ. ಈಗಾಗಲೇ ಕೇಂದ್ರದಲ್ಲಿ ವಾಲ್ಮೀಕಿ ನಾಯಕ ಸಮಾಜಕ್ಕೆ ಶೇ. 7.5 ರಷ್ಟು ಮೀಸಲಾತಿ ನೀಡಲಾಗುತ್ತಿದ್ದು, ಸರ್ವೋಚ್ಚ ನ್ಯಾಯಲಯದ ಆದೇಶವಿದ್ದರೂ ಕೂಡ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿದ್ದು, ರಾಜ್ಯ ಸರ್ಕಾರ ಕೂಡಲೇ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು ಎಂದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರು 28 ಜಿಲ್ಲೆಗಳು ಹಾಗೂ 175 ತಾಲ್ಲೂಕುಗಳ ಪ್ರವಾಸ ಮಾಡಿ ಜಾತ್ರೆಗೆ ಆಹ್ವಾನ ನೀಡುವ ಮೂಲಕ ರಾಜ್ಯದ 4 ನೇ ಅತಿ ದೊಡ್ಡ ಸಮಾಜವನ್ನು ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಕಳೆದ ಎರಡು ಜಾತ್ರೆಗಳು ಯಶಸ್ವಿಯಾಗಿದ್ದು, ಈ ಬಾರಿಯೂ ಕೂಡ ಜಾತ್ರೆ ಯಶಸ್ವಿಯಾಗಲು ನಿಮ್ಮಗಳ ಸಹಕಾರ ಅಗತ್ಯವಾಗಿದೆ ಎಂದರು.

ವಾಲ್ಮೀಕಿ ಜಾತ್ರಾ ಸಮಿತಿ ತಾಲ್ಲೂಕು ಅಧ್ಯಕ್ಷ ಹೆಚ್.ಕೆ. ಹಾಲೇಶ್ ಮಾತನಾಡಿ ಮೀಸಲಾತಿ ಪಡೆದುಕೊಳ್ಳುವುದು ನಮ್ಮ ಸಾಂವಿಧಾನಿಕ ಹಕ್ಕಾಗಿದ್ದು ಮೀಸಲಾತಿ ವಿಚಾರದಲ್ಲಿ ನಾವೆಲ್ಲರೂ ಪಕ್ಷಾತೀತವಾಗಿ ಸ್ವಾಭಿಮಾನಿ ಸಿಂಹದ ಮರಿಗಳಾಗಿ ಘರ್ಜನೆ ಮಾಡಬೇಕಿದೆ. ರಾಜ್ಯದಲ್ಲಿ ಯಾವುದೇ ಸರ್ಕಾರವಿರಲಿ, ಯಾರೇ ಮುಖ್ಯ ಮಂತ್ರಿಗಳಿರಲಿ ನಮಗೆ ನ್ಯಾಯಬದ್ಧವಾದ ಮೀಸಲಾತಿ ಹೆಚ್ಚಿಸಬೇಕು. ಕಳೆದ ಎರಡು ಜಾತ್ರೆಗಳು ಯಶಸ್ವಿಯಾಗಿದ್ದು ಈ ಬಾರಿ ಕೂಡ ಜಾತ್ರೆ ಯಶಸ್ವಿಯಾಗಲು ನಿಮ್ಮಗಳ ಸಹಕಾರ ಅಗತ್ಯವಾಗಿದೆ. ವಾಲ್ಮೀಕಿ ನಾಯಕ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಕಂಚಿಕೇರಿ ಜಯಲಕ್ಷ್ಮಿ ಮಾತನಾಡಿದರು.

ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಉಪಾಧ್ಯಕ್ಷ ಶಿವಾನಂದ , ಪ್ರಧಾನ ಕಾರ್ಯದರ್ಶಿ ಗಿರಜ್ಜಿ ನಾಗರಾಜ, ಸಂಘಟನಾ ಕಾರ್ಯದರ್ಶಿಗಳಾದ ಫಣಿಯಾಪುರ ಲಿಂಗರಾಜ್, ನೀಲಗುಂದ ತಿಮ್ಮೇಶ, ದ್ಯಾಪನಾಯಕನಳ್ಳಿ ಜಿ.ಕೆ. ಬಸವರಾಜ, ಬಾನಳ್ಳಿ ಕೆಂಚನಗೌಡ, ವಾಲ್ಮೀಕಿ ಸೇವಾ ಸಮಿತಿ ಚಿಗಟೇರಿ ಜಂಬಣ್ಣ, ಹಳ್ಳಿಕೇರಿ ಎಚ್. ರಾಜಪ್ಪ, ಕೆ. ಯೋಗೇಶ್, ಎಂ. ಪ್ರಾಣೇಶ್, ನೀಲಗುಂದ ಬಿ. ವಾಗೀಶ್, ಏಕಲವ್ಯ ಸಂಘರ್ಷ ಸಮಿತಿ ತಾಲ್ಲೂಕು ಅಧ್ಯಕ್ಷ ರಾಯದುರ್ಗದ ಪ್ರಕಾಶ್ , ದುಗ್ಗಾವತಿ ಮಂಜುನಾಥ, ಕಂಭತ್ರಹಳ್ಳಿ ರಾಜಪ್ಪ, ಮಹಿಳಾ ಘಟಕದ ಗೌರವಾಧ್ಯಕ್ಷೆ ಟಿ. ಪದ್ಮಾವತಿ. ಮಂಜುಳಾ, ಪವಿತ್ರ, ಶ್ಯಾಲಿನಿ, ಪಿ. ಪರಶುರಾಮ್ ಸಾಸ್ವೆಹಳ್ಳಿ ನಾಗರಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಜಿಗಳಿಯಲ್ಲಿ ಶ್ರೀ ಗುರು ಸಿದ್ದರಾಮ ಜಯಂತಿ ಆಚರಣೆ



ಮಲೇಬೆನ್ನೂರು, ಜ.15- ಜಿಗಳಿ ಗ್ರಾ.ಪಂ. ಕಛೇರಿಯಲ್ಲಿ ಕಾಯಕಯೋಗಿ ಶ್ರೀ ಗುರು ಸಿದ್ದರಾಮೇಶ್ವರರ 848 ನೇ ಜಯಂತಿ ಆಚರಿಸಲಾಯಿತು.

ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಅವರ ಕಾಯಕ ಹಾಗೂ ನಾಡಿಗೆ ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು.

ನೊಳಂಬ ವೀರಶೈವ ಸಂಘದ ಕೇಂದ್ರ ಸಮಿತಿ ನಿರ್ದೇಶಕರೂ, ಗ್ರಾ.ಪಂ. ಮಾಜಿ ಅಧ್ಯಕ್ಷರೂ ಆದ ಬಿ.ಕೆ. ಮಹೇಶ್ವರಪ್ಪ, ಗ್ರಾ.ಪಂ. ನೂತನ ಸದಸ್ಯರಾದ ಎನ್.ಎಂ. ಪಾಟೀಲ್, ಕೆ.ಜಿ. ಬಸವರಾಜ್, ವೈ.ಆರ್. ಚೇತನ್‌ಕುಮಾರ್, ಕವಿತಾ ಮಾಕನೂರು ಶಿವು, ರೇಣುಕಮ್ಮ ಪೂಜಾರ್ ನಾಗರಾಜ್, ಜಿ. ಬೇವಿನಹಳ್ಳಿಯ ಬಿ.ಕೆ. ಜಯಮ್ಮ ರಂಗನಾಥ್, ಆನಂದಗೌಡ, ಕೆ.ಜಿ. ಮಹಾಂತೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಿ.ಎಂ. ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಕೆ.ಎಂ. ರಾಮಪ್ಪ, ಜಿ. ಆರ್. ಹಾಲೇಶ್‌ಕುಮಾರ್, ಪತ್ರಕರ್ತ ಪ್ರಕಾಶ್, ನಿಂಗಪ್ಪ, ಪಿಡಿಓ ದಾಸರ ರವಿ, ಸಿಬ್ಬಂದಿಗಳಾದ ಬಿ. ದಾನಪ್ಪ, ಬಿ. ಮೌನೇಶ್, ಎಂ.ಎಸ್. ಬಸವರಾಜ್, ಕೆ.ಇ. ಬಸವರಾಜ್, ಆನಂದ್, ರವಿ, ಮಂಜು ಮತ್ತಿತರರು ಭಾಗವಹಿಸಿದ್ದರು.

# ಕೊರೊನಾ ಅಂತ್ಯದ ಆರಂಭ : ಕೇಂದ್ರ ಸಚಿವ ಹರ್ಷ ವರ್ಧನ್

ನವದೆಹಲಿ, ಜ. 15 – ಕೊರೊನಾ ವೈರಸ್‌ಗೆ ಲಸಿಕೆ ನೀಡುವ ಅಭಿಯಾನ ಆರಂಭವಾಗುವ ಮುನ್ನಾ ದಿನ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್, ಇದು ಕೊರೊನಾ ವೈರಸ್‌ನ ಅಂತ್ಯದ ಆರಂಭವಾಗಬಹುದಾಗಿದೆ ಎಂದಿದ್ದಾರೆ.

ಹವಾಮಾನ ಇಲಾಖೆಯ 146ನೇ ಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಿದ್ದ ಅವರು, ಲಸಿಕೆ ಅಭಿಯಾನ ನಡೆದರೂ ಸಹ ಮುನ್ನೆಚ್ಚರಿಕೆ ಬಿಡಬಾರದು. ಜನರು ಕೊರೊನಾ ಸಂದರ್ಭದಲ್ಲಿ ಸರಿಯಾದ ವರ್ತನೆ ತೋರಬೇಕು ಎಂದಿದ್ದಾರೆ.

ನಾಳೆ ಮಹತ್ವದ ದಿನವಾಗಿದೆ. ಇದು ಕೊರೊನಾ ವೈರಸ್ ವಿರುದ್ಧದ ಹೋರಾಟದ ಅಂತಿಮ ಹಂತವಾಗಿದೆ. ಇದು ಕೊರೊನಾ ಅಂತ್ಯದ ಆರಂಭವಾಗಬಹುದು ಎಂದು ವರ್ಧನ್ ಹೇಳಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಾಳೆ ಶನಿವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಲಸಿಕೆ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಇದು ವಿಶ್ವದ ಅತಿ ದೊಡ್ಡ ಲಸಿಕಾ ಅಭಿಯಾನವಾಗಲಿದೆ.

# ರಾಣೇಬೆನ್ನೂರು ತಾಲ್ಲೂಕು ಗ್ರಾ.ಪಂ. ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿ

ರಾಣೇಬೆನ್ನೂರು, ಜ.15- ಇಲ್ಲಿನ ಶ್ರೀ ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣನವರ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಯೋಗೇಶ್ವರ್, ತಹಶೀಲ್ದಾರ್ ಬಸನಗೌಡ ಕೋಟೂರ ಹಾಗೂ ಚುನಾವಣಾ ಆಯೋಗದ ಸಿಬ್ಬಂದಿ ವರ್ಗದವರ ಉಪಸ್ಥಿತಿಯಲ್ಲಿ ಅವಧಿ ಪೂರ್ಣಗೊಳ್ಳದ 7 ಪಂಚಾಯ್ತಿಗಳು ಸೇರಿದಂತೆ ತಾಲ್ಲೂಕಿನ ಒಟ್ಟು 40 ಪಂಚಾಯ್ತಿಗಳ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಮೀಸಲಾತಿ ನಿಗದಿಗೊಳಿಸಲಾಯಿತು.

ಅರೇಮಲ್ಲಾಪುರ ಅಧ್ಯಕ್ಷ (ಹಿಂದುಳಿದ ಎ ವರ್ಗ), ಉಪಾಧ್ಯಕ್ಷ ( ಎಸ್.ಸಿ. ಮಹಿಳೆ), ಐರಣಿ ಅಧ್ಯಕ್ಷ ಸ್ಥಾನಕ್ಕೆ (ಹಿಂದುಳಿದ ಎ ವರ್ಗ), ಉಪಾಧ್ಯಕ್ಷ (ಸಾ. ಮಹಿಳೆ) ಮುದೇನೂರ ಅಧ್ಯಕ್ಷ ಸ್ಥಾನಕ್ಕೆ (ಹಿಂದುಳಿದ ಎ ವರ್ಗ), ಉಪಾಧ್ಯಕ್ಷ (ಸಾ. ಮಹಿಳೆ), ಚಳಗೇರಿ ಅಧ್ಯಕ್ಷ (ಹಿಂದುಳಿದ ಎ ವರ್ಗ), ಉಪಾಧ್ಯಕ್ಷ (ಸಾ. ಮಹಿಳೆ), ಬೆನಕನಕೊಂಡ ಅಧ್ಯಕ್ಷ ( ಹಿಂದುಳಿದ ಎ ವರ್ಗ ಮಹಿಳೆ), ಉಪಾಧ್ಯಕ್ಷ ( ಸಾ.), ಚಿಕ್ಕ ಕುರವತ್ತಿ ಅಧ್ಯಕ್ಷ ( ಹಿಂದುಳಿದ ಎ ವರ್ಗ ಮಹಿಳೆ), ಉಪಾಧ್ಯಕ್ಷ ( ಎಸ್.ಟಿ. ಮಹಿಳೆ), ಮಾಳನಾಯ್ಕನ ಹಳ್ಳಿ ಅಧ್ಯಕ್ಷ (ಹಿಂದುಳಿದ ಎ ವರ್ಗ ಮಹಿಳೆ), ಉಪಾಧ್ಯಕ್ಷ (ಸಾ) ಜೋಯಿಸರಹರಳಹಳ್ಳಿ ಅಧ್ಯಕ್ಷ ( ಹಿಂದುಳಿದ ಎ ವರ್ಗ ಮಹಿಳೆ), ಉಪಾಧ್ಯಕ್ಷ (ಹಿಂದುಳಿದ ಬಿ ವರ್ಗ),ಕೋಡಿಯಾಲ ಅಧ್ಯಕ್ಷ (ಹಿಂದುಳಿದ ಬಿ ವರ್ಗ), ಉಪಾಧ್ಯಕ್ಷ (ಸಾ. ಮಹಿಳೆ), ತುಮ್ಮಿನಕಟ್ಟಿ ಅಧ್ಯಕ್ಷ ( ಹಿಂದುಳಿದ ಬಿ. ವರ್ಗ ಮಹಿಳೆ), ಗುಡಗೂರು ಅಧ್ಯಕ್ಷ ( ಸಾಮಾನ್ಯ), ಉಪಾಧ್ಯಕ್ಷ (ಎಸ್. ಸಿ.ಮಹಿಳೆ), ಬೇಲೂರು ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಹಿಂದುಳಿದ ಎ ವರ್ಗ ಮಹಿಳೆ), ಹರನಗಿರಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಲಿಂಗದಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಹಿಂದುಳಿದ ಬಿ ಮಹಿಳೆ), ಕಮದೋಡ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾ. ಮಹಿಳೆ), ಕಾಕೋಳ ಅಧ್ಯಕ್ಷ ( ಸಾಮಾನ್ಯ), ಉಪಾಧ್ಯಕ್ಷ (ಎಸ್.ಸಿ ಮಹಿಳೆ), ಕಜ್ಜರಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮನ್ಯ ಮಹಿಳೆ), ಗುಡ್ಡಗುಡ್ಡಾಪುರ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾ. ಮಹಿಳೆ), ಸುಣಕಲ್ಲಬಿದರಿ ಅಧ್ಯಕ್ಷ ( ಸಾಮಾನ್ಯ), ಉಪಾಧ್ಯಕ್ಷ (ಹಿಂದುಳಿದ ಎ ವರ್ಗ ಮಹಿಳೆ), ರಾಹುತನಕಟ್ಟಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾ.ಮಹಿಳೆ), ಹಿರೇಬಿದರಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್.ಟಿ.), ಮಾಕನೂರು ಅಧ್ಯಕ್ಷ (ಸಾ.ಮಹಿಳೆ), ಉಪಾಧ್ಯಕ್ಷ ( ಸಾಮಾನ್ಯ), ಇಟಗಿ ಅಧ್ಯಕ್ಷ (ಸಾ. ಮಹಿಳೆ), ಉಪಾಧ್ಯಕ್ಷ (ಎಸ್.ಟಿ. ಮಹಿಳೆ), ಅಸುಂಡಿ ಅಧ್ಯಕ್ಷ (ಸಾ.ಮಹಿಳೆ),ಉಪಾಧ್ಯಕ್ಷ (ಸಾಮಾನ್ಯ), ಹೊನ್ನತ್ತಿ ಅಧ್ಯಕ್ಷ (ಸಾ.ಮಹಿಳೆ), ಉಪಾಧ್ಯಕ್ಷ (ಹಿಂದುಳಿದ ಎ ವರ್ಗ), ಕವಲೆತ್ತು ಅಧ್ಯಕ್ಷ (ಸಾ.ಮಹಿಳೆ), ಉಪಾಧ್ಯಕ್ಷ (ಎಸ್.ಸಿ.), ಉಕ್ಕುಂದ ಅಧ್ಯಕ್ಷ ( ಸಾ. ಮಹಿಳೆ), ಉಪಾಧ್ಯಕ್ಷ (ಎಸ್.ಸಿ.), ಅಂತರವಳ್ಳಿ ಅಧ್ಯಕ್ಷ (ಸಾ. ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಕುಪ್ಪೇಲೂರು ಅಧ್ಯಕ್ಷ (ಸಾ. ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಬಿಲ್ಲಹಳ್ಳಿ ಅಧ್ಯಕ್ಷ (ಸಾ.ಮಹಿಳೆ), ಉಪಾಧ್ಯಕ್ಷ (ಎಸ್.ಸಿ), ಗುಡ್ಡದ ಆನ್ವೇರಿ ಅಧ್ಯಕ್ಷ (ಎಸ್.ಸಿ.), ಉಪಾಧ್ಯಕ್ಷ (ಹಿಂದುಳಿದ ಎ ವರ್ಗ ಮಹಿಳೆ), ಹೆಡಿಯಾಲ ಅಧ್ಯಕ್ಷ (ಎಸ್.ಸಿ.), ಉಪಾಧ್ಯಕ್ಷ (ಅ ವರ್ಗ), ಸೋಮಲಾಪುರ ಅಧ್ಯಕ್ಷ (ಎಸ್.ಸಿ.), ಉಪಾಧ್ಯಕ್ಷ (ಹಿಂದುಳಿದ ಎ ವರ್ಗ ಮಹಿಳೆ), ಕರೂರು ಅಧ್ಯಕ್ಷ (ಎಸ್.ಸಿ ಮಹಿಳೆ), ಉಪಾಧ್ಯಕ್ಷ (ಅ ವರ್ಗ), ನದಿಹರಳಹಳ್ಳಿ ಅಧ್ಯಕ್ಷ ( ಎಸ್.ಸಿ. ಮಹಿಳೆ), ಉಪಾಧ್ಯಕ್ಷ (ಹಿಂದುಳಿದ ಎ ವರ್ಗ), ವೈ.ಟಿ. ಹೊನ್ನತ್ತಿ ಅಧ್ಯಕ್ಷ (ಎಸ್.ಸಿ.ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಮೆಡ್ಲೇರಿ ಅಧ್ಯಕ್ಷ (ಎಸ್.ಟಿ.), ಉಪಾಧ್ಯಕ್ಷ (ಸಾ. ಮಹಿಳೆ), ಹಲಗೇರಿ ಅಧ್ಯಕ್ಷ (ಎಸ್.ಟಿ.), ಉಪಾಧ್ಯಕ್ಷ (ಸಾಮಾನ್ಯ), ಹನುಮಾಪುರ ಅಧ್ಯಕ್ಷ (ಎಸ್.ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ನಿಟ್ಟೂರು ಅಧ್ಯಕ್ಷ (ಎಸ್.ಟಿ.ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ).

ಒಟ್ಟು 20 ಸಾಮಾನ್ಯ, 4 ಎಸ್. ಟಿ, 8 ಹಿಂದುಳಿದ ಎ ವರ್ಗ, 6 ಎಸ್.ಸಿ, 2 ಹಿಂದುಳಿದ ಬಿ ವರ್ಗ. ಇವುಗಳಲ್ಲಿ ಶೇಕಡಾ 50 ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಗಿದ್ದು, ಕೆಲವೆಡೆ ಕಂಡುಬಂದ ತಾಂತ್ರಿಕ ತೊಂದರೆಯನ್ನು ಚೀಟಿ ಎತ್ತುವುದರ ಮೂಲಕ ಸರಿಪಡಿಸಲಾಯಿತು.

### ಕಾಂಗ್ರೆಸ್‌ಗೆ ಒಲಿದ ಅದೃಷ್ಟ...



ಮೆಡ್ಲೇರಿ ಗ್ರಾ.ಪಂ. ನಲ್ಲಿನ ಒಟ್ಟು 22 ಸದಸ್ಯರಲ್ಲಿ 19 ಸದಸ್ಯರು ಬಿಜೆಪಿ ಬೆಂಬಲಿತರಿದ್ದು, ಕಾಂಗ್ರೆಸ್ ಬೆಂಬಲಿತರು 3 ಸದಸ್ಯರಿದ್ದಾರೆ. ಅಧ್ಯಕ್ಷ ಸ್ಥಾನ ಎಸ್.ಟಿ. ಮಹಿಳೆಗೆ ಮೀಸಲಾಗಿದೆ. ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿರುವ ಶಾಂತಮ್ಮ ತಳವಾರ ಅವರಿಗೆ ಅಧ್ಯಕ್ಷಗಿರಿ ಒಲಿಯಲಿದೆ. ಅದರಂತೆ ಕರೂರ ಗ್ರಾ.ಪಂ.ನ ಒಟ್ಟು 15 ರಲ್ಲಿ 9 ಬಿಜೆಪಿ ಬೆಂಬಲಿತರು, 6 ಕಾಂಗ್ರೆಸ್ ಬೆಂಬಲಿತರಿದ್ದಾರೆ. ಅಧ್ಯಕ್ಷ ಸ್ಥಾನ ಎಸ್.ಸಿ. ಮಹಿಳೆಗೆ ಮೀಸಲಾಗಿದ್ದು, ಇಲ್ಲಿಯೂ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದ ನೀಲಮ್ಮ ಪೂಜಾರ ಅವರಿಗೆ ಅಧ್ಯಕ್ಷ ಹುದ್ದೆ ದಕ್ಕಲಿದೆ ಎನ್ನುತ್ತಿದ್ದಾರೆ.

# ಸ್ವರ್ಣ ಜಯಂತಿ ರೋಜಗಾರ್ ಯೋಜನೆ ಮುಂದುವರೆಸಲು ಒತ್ತಾಯ

ದಾವಣಗೆರೆ, ಜ.14- ಕಳೆದ 4-5 ತಿಂಗಳಿನಿಂದ ಸ್ಥಗಿತಗೊಂಡಿರುವ ಸ್ವರ್ಣ ಜಯಂತಿ ರೋಜಗಾರ್ ಯೋಜನೆಯನ್ನು ಮುಂದುವರೆ ಸುವಂತೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಮಿತಿ ಒತ್ತಾಯಿಸಿದೆ. ಸುಮಾರು 20 ರಿಂದ 30 ವರ್ಷಗಳಿಂದ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸ್ವಯಂ ಉದ್ಯೋಗಕ್ಕೆ ಅನುಕೂಲವಾಗುವಂತೆ ಹಾಗೂ ಪ್ರತಿ ವರ್ಷ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ನೀಡುವುದರ ಮೂಲಕ ಹಿಂದಿನ ಸರ್ಕಾರಗಳು ಈ ಯೋಜನೆ ರೂಪಿಸಿದ್ದವು. ಆದರೆ ಕಳೆದ ನಾಲ್ಕೈದು ತಿಂಗಳಿನಿಂದ ಯೋಜನೆ ಕಾರ್ಯರೂಪದಲ್ಲಿ ಇಲ್ಲ ಎಂದು ಸಮಿತಿ ಅಧ್ಯಕ್ಷ ಡಿ.ಜಿ. ಆಸೀಫ್ ಹಾಗೂ ಇತರೆ ಪದಾಧಿಕಾರಿಗಳು ತಿಳಿಸಿದ್ದಾರೆ. ಮುಖ್ಯ ಮಂತ್ರಿಗಳು ಈ ಕೂಡಲೇ ಗಮನಹರಿಸಿ ಜಾರಿಗೊಳಿಸುವಂತೆ ಮನವಿ ಮಾಡಿದ್ದಾರೆ.


**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 40x30 ಅಕ್ಕ-ಪಕ್ಕ ಪೂರ್ವ, 30x40 ಪಶ್ಚಿಮ, ಆಂಜನೇಯ ಬಡಾವಣೆಯಲ್ಲಿ 30x40 ಉತ್ತರ ಪೂರ್ವ ಕಾರ್ನರ್, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಮಾರಾಟಕ್ಕಿವೆ**
40x60 North 3 ಬೆಡ್ ರೂಂ, ಕುವೆಂಪು ಬಡಾವಣೆಯಲ್ಲಿ, S.S. layout 'B' ಬ್ಲಾಕ್ ನಲ್ಲಿ 35x46, 2 ಬೆಡ್‌ರೂಂ, North-East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಮನೆ ಬಾಡಿಗೆಗೆ ಇವೆ**
ಎಸ್.ಎಸ್. ಬಡಾವಣೆ ಅಥಣಿ ಕಾಲೇಜ್ ಹತ್ತಿರ 4 ಬೆಡ್ ರೂಂ ಮನೆ. ವಿದ್ಯಾನಗರ ತರಳಬಾಳು ಬಡಾವಣೆಯಲ್ಲಿ 3 ಬೆಡ್‌ರೂಂ ಮನೆ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್,ವಿದ್ಯಾನಗರ
97421 44715

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿ ವಾಸ್ತು ಪ್ರಕಾರ 3 BHK, ನೀರಿನ ಸೌಕರ್ಯ ಇರುವ ಮನೆ ಸಪ್ತಗಿರಿ ಹಾಸ್ಟೆಲ್ ಹಿಂಭಾಗ ಕುಂದವಾಡ ರಸ್ತೆ, ಬಸವೇಶ್ವರ ನಗರದಲ್ಲಿ ಲೀಸ್‌ಗೆ ಇರುತ್ತದೆ. ಸಂಪರ್ಕಿಸಿ:
98443 03551
94481 15270

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿರಿ
ಅಮರಾವತಿ ಹಾಲಪ್ಪ
98454 84076

**ಸೈಟ್‌ಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ ಬಡಾವಣೆಯಲ್ಲಿ (ಬೈಪಾಸ್ ಪಕ್ಕ) 40x50 ಉತ್ತರ, 30x50 ಪೂರ್ವಕ್ಕೆ ಇರುವ ಸೈಟ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
72599 20520

**Innova 2011 Model**
Total 13,100 KM
white Board, sliver colour G Model
Rs 7,71,000
99646 13790

**1BHK ಮನೆ ಹಾಗೂ 1 ರೂಂ ಬಾಡಿಗೆಗೆ ಇದೆ**
ಜಯದೇವ ಸರ್ಕಲ್ ಪೆಟ್ರೋಲ್ ಬಂಕ್ ಹತ್ತಿರ, ಕೆಟಿಜೆ ನಗರ, 1ನೇ ಮೇನ್,1ನೇ ಕ್ರಾಸ್, ಡೋರ್ ನಂ 967/2 1st ಫ್ಲೋರ್‌ನಲ್ಲಿ 1 BHK ಮನೆ ಹಾಗೂ ಮಹಡಿಯಲ್ಲಿ ರೂಂ ಬಾಡಿಗೆಗೆ ಇದೆ.
99801 79321, 78139 64360

**House For Rent Long Term & Short Term Available**
with all Amenities cot, bed, fan, light, UPS, internet, T.V, Dining table, Geyser, Kitchen, Stove, Gas etc.
94800 73451

**ಓಮ್ನಿ ವಾಹನ ಮಾರಾಟಕ್ಕಿದೆ**
8 ಸೀಟುಗಳು ಗ್ಯಾಸ್ ಮತ್ತು ಪೆಟ್ರೋಲ್ ಮಾದರಿಯ ಉತ್ತಮ ಸ್ಥಿತಿಯ ವಾಹನ ಮಾರಾಟಕ್ಕಿದೆ.
ಕೂಡಲೇ ಸಂಪರ್ಕಿಸಿ
ಆಂಜನೇಯ ಬಡಾವಣೆ, ದಾವಣಗೆರೆ
98804 36414

**ಮನೆ ಬಾಡಿಗೆಗೆ ಇದೆ**
M.C.C. A Block ನಲ್ಲಿ (ಚರ್ಚ್ ಹತ್ತಿರ) ಎಲ್ಲ ಅನುಕೂಲಗಳಿರುವ 1 ಬೆಡ್ ರೂಮ್ ಇರುವ ವಿಶಾಲವಾದ ಮನೆ ಬಾಡಿಗೆಗೆ ಇದೆ. ಹಿಂದೆ, ಮುಂದೆ, RCC, ಮಧ್ಯ ಶೀಟ್ ಇರುವ, ಮಹಡಿಯ ಮೇಲಿರುವ ಮನೆ ಕಡಿಮೆ ಬಾಡಿಗೆಯಲ್ಲಿ ದೊರೆಯುತ್ತದೆ.
97430 98298

**ಮನೆಗಳು ಬಾಡಿಗೆಗೆ ಇವೆ**
30x40 ಡ್ಯೂಪ್ಲೆಕ್ಸ್ ಜಯನಗರ, 30x60 ಇಂಡಿಪೆಂಡೆಂಟ್ ಜಯನಗರ, 40x60 ಗ್ರೌಂಡ್ ಫ್ಲೋರ್ ವಿದ್ಯಾನಗರ
99023 83936
82172 14069

**ಡಾಲರ್ಸ್ ಕಾಲೋನಿಯಲ್ಲಿ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ**
40x60 East, 30x50 West, 30x50 East, 30x63, South west corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ತಕ್ಷಣ ಬೇಕಾಗಿದ್ದಾರೆ**
ಆಫೀಸ್ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ
76760 91760

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಹಳೇಪೇಟೆ ಖಿಂಡಪ್ಪನ ಗಲ್ಲಿಯಲ್ಲಿ 12x45 ಅಳತೆಯ AEH, ಸೋಲಾರ್, ಕಾರ್ಪೊರೇಷನ್ ವಾಟರ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94480-47506

**Offer Price**
Anu Solar
200 ಲೀ Rs 18900
Mixe Free
99645-11172
99646 13790

**ಮನೆ ಮಾರಾಟಕ್ಕಿದೆ**
ಆಧುನಿಕ ಮತ್ತು ವಾಸ್ತು ವ್ಯವಸ್ಥೆ ಇರುವ 2 ಬೆಡ್ ರೂಂ , 30x50ರ ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ ಹೊಸ ಮನೆ ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕಿದೆ.
98448 82366

**ದಾಖಲಾತಿಗಳು ಕಳೆದಿವೆ**
ದಾವಣಗೆರೆ ಎಸ್. ನಿಜಲಿಂಗಪ್ಪ ಬಡಾವಣೆಯ ಡೋರ್ ನಂ 697ಕ್ಕೆ ಸಂಬಂಧಿಸಿದ ಮಂಜುಳ ಗೋವಿಂದರಾಜು ಹಾಗೂ ಚೇತನ್ ಕುಮಾರ್ ಹೆಸರಿನ ಮನೆ ದಾಖಲಾತಿಗಳು ಕಳೆದಿವೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಲು ಕೋರಿದೆ.
97316 45909

**ಬೇಕಾಗಿದ್ದಾರೆ**
ಶಾಲೆಯಲ್ಲಿ ಆಯಾ ಕೆಲಸಕ್ಕೆ ಹಾಗೂ ಹಾಸ್ಟೆಲ್‌ಗೆ ಮಹಿಳಾ ವಾರ್ಡನ್ ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ:
ಎಂ.ಇ.ಎಸ್ ಕಾನ್ವೆಂಟ್
ಆಂಜನೇಯ ಬಡಾವಣೆ, ದಾವಣಗೆರೆ
98804 36414

**ಮಾರಾಟಕ್ಕೆ**
ಚಿಕ್ಕಮ್ಮಣಿ ದೇವರಾಜ ಅರಸು ಬಡಾವಣೆ 20×30, DCM ಮನೆ- 30×35, ಶ್ರೀರಾಮ ಬಡಾವಣೆ ಮನೆ ಡೂಪ್ಲೆಕ್ಸ್-20×30, ಸರಸ್ವತಿ ಬಡಾವಣೆ ಮನೆ- 30×40, 20×35, ತುಂಗಭದ್ರಾ ಬಡಾವಣೆ ಮನೆ-30×40, SS ಲೇಔಟ್ ಮನೆ-30×40, 30×47
78996 36597, 99165 25828

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಬೆಣ್ಣೆ ದೋಸೆ ಹೋಟೆಲ್ ನಲ್ಲಿ ಕೆಲಸ ಮಾಡಲು ಬೆಣ್ಣೆ ದೋಸೆ ಮಾಡುವ ಭಟ್ಟರು ಬೇಕಾಗಿದ್ದಾರೆ.ಸಂಪರ್ಕಿಸಿ
96060 75744

**"ಸೂರ್ಯ" ನವೋದಯ**
ರೆಗ್ಯುಲರ್ ಹೊಸ ಬ್ಯಾಚ್‌ಗಳು ಆರಂಭ
ಸಮಯ: ಸಂಜೆ : 5.30 ರಿಂದ 8-00
ಸ್ಥಳ : K.S.S. ಕಾಲೇಜು, ದುರ್ಗಾಂಬಿಕ ಹೈಸ್ಕೂಲ್ ಹತ್ತಿರ ಸರಸ್ವತಿ ಬಡಾವಣೆ.
ಸುರೇಶ್ ಪಿ. ಮುರಗಿ
99028 24909

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
9019580600, 86601 95955

**ಬೇಕಾಗಿದ್ದಾರೆ**
ಆಟೋಮೊಬೈಲ್ಸ್ ಅಂಗಡಿಗೆ 2-3 ವರ್ಷ ಟ್ಯಾಲಿ ಗೊತ್ತಿರುವ ಮದುವೆಯಾಗಿರುವ ಮಹಿಳಾ ಅಕೌಂಟೆಂಟ್ ಬೇಕಾಗಿದ್ದಾರೆ.
91 99865 21147

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ 1ನೇ ಕ್ರಾಸ್, #1077/10 ರಲ್ಲಿ 3 ಬೆಡ್‌ರೂಂ ಕಾರ್ ಪಾರ್ಕಿಂಗ್ ಇರುವ ಮೊದಲ ಮಹಡಿ ಮನೆ ಬಾಡಿಗೆಗೆ ಮತ್ತು ಲೀಸ್‌ಗೆ ಇದೆ.
ವಿಚಾರಿಸಿ
97425 52737

**ಉಚಿತ 30 ಗಿಡಗಳು**
ಮದುವೆ ಮತ್ತು ಇತರೆ ಸಮಾರಂಭಗಳಿಗೆ ತಾಂಬೂಲವಾಗಿ ರಿಟರ್ನ್ ಗಿಫ್ಟ್ 30 ಹೂವಿನ ಗಿಡಗಳನ್ನು ಉಚಿತವಾಗಿ ನೀಡಲಾಗುವುದು.
ಸಂಪರ್ಕಿಸಿ:
94805 64551
91418 74551

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ:
82177 72482

**Bussiness opprtunity**
Part Time, Full Time without Investment. Earn 200 Rs to 2000 Rs. Per day
Contact
91102 99070
98801 47046

**ಸುವರ್ಣಾವಕಾಶ**
ಯುವಕ/ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದ ವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ :
93435 46891, 70194 26891

**ಲೀಸ್‌ಗೆ ಇದೆ**
ದೇವರಾಜ್ ಅರಸ್ 'ಬಿ' ಬ್ಲಾಕ್‌ನ 12 ನೇ ಕ್ರಾಸ್‌ನಲ್ಲಿರುವ # 380/3, ಶ್ರೀ ಕಾಕತಿ ಸಿದ್ದೇಶ್ವರ ನಿಲಯ ಒಂದನೇ ಮಹಡಿಯಲ್ಲಿ ಮನೆ 2 ಬೆಡ್ ರೂಂ 2 ಹಾಲ್‌ವುಳ್ಳ ಮನೆ ಲೀಸ್‌ಗೆ ಇರುತ್ತದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ:
98864 84216
99163 23302

**ಜನರೇಟರ್ ಮಾರಾಟಕ್ಕಿದೆ**
65 KVA, Kirloskar Model ಉತ್ತಮ ಗುಣಮಟ್ಟವುಳ್ಳ ಜನರೇಟರ್.
ಸಂಪರ್ಕಿಸಿ:
99649 44063

**DIPLOMA & BE TUITIONS For All Branches**
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಪ್ರವಾಸ**
ದಾವಣಗೆರೆಯಿಂದ 2 ದಿನಗಳ ತಮಿಳುನಾಡು ಪ್ರವಾಸ ಹೊಗೇನಕಲ್ ಜಲಪಾತ, ವೇಲೂರು ಸ್ವರ್ಣ ಮಂದಿರ, ವಾಲಜ (ಧನ್ವಂತರಿ ಮಂದಿರ) ಕಂಚಿ (ಕಾಂಚೀಪುರಂ)
ಗೀತಾ ಟ್ರಾವೆಲ್ಸ್, ದಾವಣಗೆರೆ.
S.A. ರಾಜು
94481 62499
99455 34966

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account Open)
#264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**SSLC/PUC CORRESPONDENCE**
ಸುವರ್ಣ ಅವಕಾಶ
ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 86601 95955

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ, 38½×40 ಪಶ್ಚಿಮ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x40 ಉತ್ತರ ಮನೆ, ನಿಜಲಿಂಗಪ್ಪ ಬಡಾವಣೆ, 30x35 ಉತ್ತರ ಬಾಗಿಲು ಪಶ್ಚಿಮ ದಿಕ್ಕು, 2 ಮನೆ 1 ಪೂರ್ವ ಮನೆ 30x40 ಮಲ್ಲಿಕಾರ್ಜುನ್ ಬಡಾವಣೆ, ವಾಜಪೇಯಿ ಬಡಾವಣೆ 34x40 ಪೂರ್ವ, 30x40 ಪೂರ್ವ, 30x50 ಪಶ್ಚಿಮ (ಶಾಮನೂರು) 30x55 ಪೂರ್ವ ಸೈಟ್
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**REQUIRED Lady Teachers**
Science Post-01, B.Sc. B.Ed (P.C.M)
Attractive Salary will be given to right candidates, Apply or Contact to Dr. Veeresh, Biradar, Secretary
Vinayaka Eng Medium High School
Ganesh pet, Behind kalikadevi temple, Davanagere - 95356 10817

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೊಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

# ರಾಮ ಮಂದಿರ ನಿರ್ಮಾಣಕ್ಕೆ ರಾಷ್ಟ್ರಪತಿಯಿಂದ 5 ಲಕ್ಷ ರೂ.

ನವದೆಹಲಿ, ಜ. 15 – ಅಯೋಧ್ಯೆಯ ರಾಮ ಮಂದಿರ ನಿರ್ಮಾಣಕ್ಕೆ ದೇಶಾದ್ಯಂತ ದೇಣಿಗೆ ಸಂಗ್ರಹ ಆರಂಭವಾಗಿದ್ದು, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು 5 ಲಕ್ಷ ರೂ.ಗಳ ದೇಣಿಗೆ ನೀಡಿದ್ದಾರೆ. ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರ ಕುಟುಂಬ ಈಗಗಾಲೇ ದೇವಾಲಯ ನಿರ್ಮಾಣಕ್ಕೆ 5 ಲಕ್ಷ ರೂ.ಗಳ ದೇಣಿಗೆ ನೀಡಿದೆ.

ಮೊದಲ ಉತ್ತರ ಪ್ರದೇಶದ ಮಾಜಿ ಶಾಸಕ ಬಹದ್ದೂರ್ ಸಿಂಗ್ ಅವರು ಅತಿ ಹೆಚ್ಚಿನ ಒಂದು ಕೋಟಿ ರೂ. ದೇಣಿಗೆ ನೀಡಿದ್ದಾರೆ.

ಅವರು ವಿಶ್ವ ಹಿಂದೂ ಪರಿಷತ್ ಉಪಾಧ್ಯಕ್ಷ ಹಾಗೂ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರಿಗೆ 1,11,11,111 ರೂ.ಗಳ ಚೆಕ್ ನೀಡಿದ್ದಾರೆ.

ರಾಮ ಮಂದಿರ ನಿರ್ಮಾಣಕ್ಕಾಗಿ ದೇಣಿಗೆ ಸಂಗ್ರಹಿಸುವ ಹೊಣೆಯನ್ನು ವಿಶ್ವ ಹಿಂದೂ ಪರಿಷತ್‌ಗೆ ವಹಿಸಲಾಗಿದೆ. ಪರಿಷತ್ ಮಂದಿರ ನಿರ್ಮಾಣ ಹೋರಾಟದ ಮುಂಚೂಣಿಯಲ್ಲಿತ್ತು.

ದೇಶದ ಪ್ರಥಮ ಪ್ರಜೆ ರಾಮ ನಾಥ ಕೋವಿಂದ್ ಹಾಗೂ ಅವರ ಕುಟುಂಬದವರ ಪರವಾಗಿ 5,00,100 ರೂ.ಗಳ ದೇಣಿಗೆ ನೀಡಲಾಗಿದೆ ಎಂದು ವಿಶ್ವ ಹಿಂದೂ ಪರಿಷತ್ ಅಂತರರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ತಿಳಿಸಿದ್ದಾರೆ. ದೇಶಾದ್ಯಂತದ ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳು ಮೊದಲ ದಿನದಂದು ದೇಣಿಗೆ ನೀಡಿರುವ ವರದಿಗಳು ಬಂದಿವೆ.

ವಿ.ಹೆಚ್.ಪಿ. ನಿಯೋಗ ಉತ್ತರಾಖಂಡದ ರಾಜ್ಯಪಾಲರಾದ ಬೇಬಿ ರಾಣಿ ಮೌರ್ಯ ಅವರಿಂದ 1.21 ಲಕ್ಷ ರೂ.ಗಳ ದೇಣಿಗೆ ಪಡೆದುಕೊಂಡಿದೆ. ರಾಜ್ಯದ ಮುಖ್ಯಮಂತ್ರಿ 1.51 ಲಕ್ಷ ರೂ. ನೀಡಿದ್ದಾರೆ.

ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಗುಜರಾತ್ ಉಪ ಮುಖ್ಯಮಂತ್ರಿ ನಿತಿನ್ ಪಟೇಲ್ ಹಾಗೂ ಉತ್ತರ ಪ್ರದೇಶ ಮತ್ತು ಜಾರ್ಖಂಡ್ ರಾಜ್ಯಪಾಲರೂ ಸಹ ತಮ್ಮನ್ನು ಭೇಟಿ ಮಾಡಿದ ವಿ. ಹೆಚ್.ಪಿ. ನಿಯೋಗಕ್ಕೆ ದೇಣಿಗೆ ನೀಡಿದ್ದಾರೆ.


# ರಾಣೇಬೆನ್ನೂರಿನಲ್ಲಿ ಆರ್.ಶಂಕರ್‌ಗೆ ಭವ್ಯ ಸ್ವಾಗತ

ರಾಣೇಬೆನ್ನೂರು, ಜ.14- ಬಿಜೆಪಿ ಸರ್ಕಾರದಲ್ಲಿ ಸಚಿವರಾದ ನಂತರ ಮೊದಲ ಬಾರಿಗೆ ನಗರಕ್ಕೆ ಆಗಮಿಸಿದ ಸಚಿವ ಆರ್. ಶಂಕರ್‌ಗೆ ಅವರ ಅಭಿಮಾನಿಗಳು, ಬಿಜೆಪಿ ಕಾರ್ಯಕರ್ತರು ಶುಕ್ರವಾರ ನಗರದಲ್ಲಿ ಭವ್ಯ ಸ್ವಾಗತ ಕೋರಿದರು.

ಸಚಿವ ಆರ್.ಶಂಕರ್ ಮೊದಲಿಗೆ ಕೆಇಬಿ ವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಆಶೀರ್ವಾದ ಪಡೆದರು. ನಂತರ ಗಂಗಾಜಲ ಚೌಡೇಶ್ವರಿ ದೇವಸ್ಥಾನಕ್ಕೆ ತೆರಳಿ, ದೇವಿಯ ದರ್ಶನ ಪಡೆದು ಪುನಃ ಕೆಇಬಿ ವಿನಾಯಕ ದೇವಸ್ಥಾನಕ್ಕೆ ಬಂದರು. ಅಲ್ಲಿಂದ ಸಚಿವರನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಬಸ್‌ನಿಲ್ದಾಣ ವೃತ್ತ, ಸ್ಟೇಷನ್ ರಸ್ತೆ, ಮೆಡ್ಲೇರಿ ಕ್ರಾಸ್, ಎಡಿಬಿ ಕ್ರಾಸ್, ಪೋಸ್ಟ್ ಸರ್ಕಲ್ ಮಾರ್ಗವಾಗಿ ಬಿಜೆಪಿ ಕಚೇರಿಗೆ ಕರೆತರಲಾಯಿತು. ಮಾರ್ಗ ಮಧ್ಯದಲ್ಲಿ ಅಭಿಮಾನಿಗಳು ಸಚಿವರಿಗೆ ಸೇಬು ಹಾರ ಹಾಕಿದ್ದು ವಿಶೇಷವಾಗಿತ್ತು.

ಪಕ್ಷದ ಕಚೇರಿಯಲ್ಲಿ ಮಾತನಾಡಿದ ಸಚಿವ ಆರ್.ಶಂಕರ್, ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಸರ್ಕಾರದ ಆಡಳಿತವಿದ್ದರೆ ಅಭಿವೃದ್ಧಿಗೆ ಪೂರಕವಾಗಲಿದೆ ಎಂಬ ಚಿಂತನೆಯಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆನು. ಇತಿಹಾಸದಲ್ಲಿಯೇ ಎರಡರಲ್ಲಿ ಒಂದೇ ಸರ್ಕಾರ ಆಡಳಿತ ನಡೆಸುವಂತೆ ಮಾಡಿದ್ದೇವೆ. ಇದಾದ ನಂತರ ಅನರ್ಹತೆಗೆ ಒಳಗಾಗಿದ್ದು, ಒಂದೂವರೆ ವರ್ಷಗಳ ಅವಧಿಯಲ್ಲಿ ಮಾನ-ಅಪಮಾನ ಎರಡನ್ನೂ ಅನುಭವಿಸಿರುವೆ. ಮುಂದಿನ ದಿನಗಳಲ್ಲಿ ನನ್ನ ಬಲಗೈ ಸ್ಥಳೀಯ ಶಾಸಕ ಅರುಣಕುಮಾರ ಪೂಜಾರ್ ಜೊತೆಗೂಡಿ, ಬೆಂಗಳೂರು ಮಾದರಿಯಲ್ಲಿ ತಾಲ್ಲೂಕನ್ನು ಅಭಿವೃದ್ಧಿಗೊಳಿಸುವೆ. ಕ್ಷೇತ್ರದ ಮತದಾರರು 2018ರಲ್ಲಿ ನನ್ನನ್ನು ಮೊದಲ ಬಾರಿಗೆ ಶಾಸಕನನ್ನಾಗಿ ಆಯ್ಕೆ ಮಾಡಿದ್ದು, ಅಭಿವೃದ್ಧಿ ಮೂಲಕ ನಾನು ಅವರ ಋಣ ತೀರಿಸಬೇಕಾಗಿದೆ. ನಾನು ಶಾಸಕನಾಗಿದ್ದ ಸಮಯದಲ್ಲಿ 380 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳನ್ನು ತಂದಿದ್ದೆ. ಕೊರೊನಾ ಹಿನ್ನೆಲೆಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗಿದೆ. ಈಗ ಮತ್ತೆ ತಾಲ್ಲೂಕಿಗೆ ಸಾಕಷ್ಟು ಅನುದಾನವನ್ನು ತಂದು ಅಭಿವೃದ್ಧಿಗೊಳಿಸುತ್ತೇವೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ಧರಾಜ ಕಲಕೋಟಿ ಮಾತನಾಡಿದರು.



ವಿಶ್ವನಾಥ ಅವರ ಬಗ್ಗೆ ಬಹಳಷ್ಟು ಗೌರವವಿದ್ದು, ಅವರು ಮುಖ್ಯಮಂತ್ರಿ ಯಡಿಯೂರಪ್ಪ ಬಗ್ಗೆ ಮಾತನಾಡಿದ್ದು ನೋವಾಗಿದೆ. ಸುಪ್ರೀಂಕೋರ್ಟ್‌ನ ಆದೇಶ ಹಿನ್ನಲೆಯಲ್ಲಿ ಸಚಿವ ಸ್ಥಾನ ಸಿಕ್ಕಿಲ್ಲ. ಇಷ್ಟು ದಿವಸ ತಾಳ್ಮೆಯಿಂದ ಇರುವ ಫಲವಾಗಿ ಸಚಿವ ಸ್ಥಾನ ಲಭಿಸಿದೆ. ಪಕ್ಷಕ್ಕೆ ಮುಜುಗಾರ ತರುವ ಹೇಳಿಕೆ ನೀಡಲ್ಲ ಎಂದು ಸಚಿವ ಆರ್.ಶಂಕರ್ ಹೇಳಿದರು.

# ಅಪಘಾತ : 11 ಜನರ ದುರ್ಮರಣ

**(5ನೇ ಪುಟದಿಂದ)** ದಾವಣಗೆರೆಯ ವರ್ತಕ ಶಶಿಧರ್ ಅವರ ಧರ್ಮಪತ್ನಿ ಹಾಗೂ ಮಾಜಿ ಮುಖ್ಯಮಂತ್ರಿ ದಿ. ಜೆ.ಹೆಚ್. ಪಟೇಲ್ ಮನೆತನದ ಮತ್ತು ದಿ. ವಾಣಿ ಮುರಿಗೆಪ್ಪ ಅವರ ಪುತ್ರಿ.

ಡಾ. ವೀಣಾ ಪ್ರಕಾಶ್ ಅವರು ದಾವಣಗೆರೆಯ ಜಜಮು ವೈದ್ಯಕೀಯ ಮಹಾವಿದ್ಯಾಲಯದ ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ಪ್ರಾಧ್ಯಾಪಕರಾಗಿದ್ದು, ಅದೇ ಕಾಲೇಜಿನ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ. ಪ್ರಕಾಶ್ ಮತ್ತಿಹಳ್ಳಿ ಅವರ ಧರ್ಮಪತ್ನಿ ಮತ್ತು ಕೈಗಾರಿಕೋದ್ಯಮಿ ಮತ್ತಿಹಳ್ಳಿ ವೀರಣ್ಣ ಅವರ ಸೊಸೆ.

ಶ್ರೀಮತಿ ರಾಜೇಶ್ವರಿ ಅವರು ದಾವಣಗೆರೆಯ ವರ್ತಕ ಶಿವಕುಮಾರ್ ಬಂದಮ್ಮನವರ್ ಅವರ ಧರ್ಮಪತ್ನಿಯಾಗಿದ್ದು, ಹಿರಿಯ ಸಹಕಾರಿ ಧುರೀಣರಾಗಿದ್ದ ದಿ. ಅಂದನೂರು ಕೊಟ್ರಬಸಪ್ಪ (ಎಸಿಕೆ) ಅವರ ಸಹೋದರ ಅಂದನೂರು ಬಸವರಾಜಪ್ಪ ಅವರ ಪುತ್ರಿ.

ಶ್ರೀಮತಿ ವರ್ಷಿತಾ ಅವರು ದಾವಣಗೆರೆಯ ಶ್ರೀ ಸಂಗಮೇಶ್ವರ ಹಾರ್ಡ್ ವೇರ್ ಮಾಲೀಕ ವೀರೇಶ್ ಬಿರಾದಾರ್ ಅವರ ಧರ್ಮಪತ್ನಿಯಾಗಿದ್ದು, ಹೆಸರಾಂತ ಖಾಲಿ ಚೀಲ ವ್ಯಾಪಾರಿ ಮತ್ತು ಶ್ರೀ ಮಾತಾ ಮಾಣಿಕೇಶ್ವರಿ ಆಶ್ರಮದ ಅಮರಪ್ಪ ಅವರ ಪುತ್ರಿ.

ಶ್ರೀಮತಿ ಮಂಜುಳಾ ಅವರು ಜಿ.ಬಿ. ನಟೇಶ್ ಅವರ ಧರ್ಮಪತ್ನಿ.

ಡಾ. ಕಾಳಪ್ಪನವರ ಪುತ್ರಿ ಶ್ರೀಮತಿ ಮಾನಸಿ (ಹೇಮಲತಾ) ಮತ್ತು ಮಾನಸಿ ಅವರ ಪುತ್ರಿ ಕು. ಯಶ್ಮಿತಾ ಕ್ಷರಾ ಅವರು ಸುರೇಶ್ ಬಾಬು ಪೊರಾಳ್ ಅವರ ಪುತ್ರಿ.

ಗಾಯಗೊಂಡಿರುವವರ ಪೈಕಿ ತೀವ್ರ ಚಿಂತಾಜನಕ ಸ್ಥಿತಿಯಲ್ಲಿರುವ ವೇದಾ ಅವರನ್ನು ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಿರ್ಮಲಾ ಚಂದ್ರಶೇಖರ್ ಅವರು ದೊಗ್ಗಳ್ಳಿ ಜಯಣ್ಣ ಅವರ ಪುತ್ರಿಯಾಗಿದ್ದು, ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

# ತೆರೆ ಎಳೆಯಲು ಷಾ ಮಧ್ಯ ಪ್ರವೇಶ

**(5ನೇ ಪುಟದಿಂದ)** ಮಾಡಬೇಕೆಂಬುದಕ್ಕೆ ಪರಿಹಾರ ಸೂಚಿಸಲಿದ್ದಾರೆ. ಮುಖ್ಯಮಂತ್ರಿ ವಿರುದ್ಧ ಸಿ.ಡಿ.ಯನ್ನು ಮುಂದಿಟ್ಟು ಕೊಂಡು ಕೆಲವರು ಮಂತ್ರಿಯಾಗಿದ್ದಾರೆ ಎಂದು ಪಕ್ಷದ ಶಾಸಕರುಗಳೇ ಗುರುತರ ಆರೋಪ ಮಾಡಿದ್ದಾರೆ. ಅಲ್ಲದೆ ವಿಜಯೇಂದ್ರ ಅವರಿಗೆ ಹಣ ನೀಡಿ, ಮಂತ್ರಿಯಾಗಿದ್ದಾರೆ ಎಂಬ ಆರೋಪವೂ ಕೇಳಿ ಬಂದಿದೆ. ಮಂತ್ರಿ ಮಂಡಲ ವಿಸ್ತರಿಸಿ ಮೂರು ದಿನ ಕಳೆದರೂ, ಈ ಸಂಬಂದ ಆರೋಪ ಮತ್ತು ಪ್ರತ್ಯಾರೋಪ ನಡೆಯುತ್ತಲೇ ಬಂದಿದೆ.

ಮುಖ್ಯಮಂತ್ರಿಯವರಿಂದ ಮಾಹಿತಿ ಪಡೆದ ನಂತರ ರಾಜ್ಯಾಧ್ಯಕ್ಷರು ಇಲ್ಲವೇ ಉಸ್ತುವಾರಿ ಹೊಣೆ ಹೊತ್ತವರ ಮೂಲಕ ಸರ್ಕಾರ ಮತ್ತು ಪಕ್ಷದ ವಿರುದ್ಧ ಮಾತನಾಡುವವರಿಗೆ ಎಚ್ಚರಿಕೆ ನೀಡಲು ಸೂಚಿಸುವ ಸಾಧ್ಯತೆ ಇದೆ.

ಮಾತುಕತೆ ಸಂದರ್ಭದಲ್ಲೇ ಮುಖ್ಯಮಂತ್ರಿಯವರು ಖಾತೆಗಳ ಹಂಚಿಕೆಯ ಬಗ್ಗೆಯು ತಮ್ಮ ನಾಯಕರಿಗೆ ಮನವರಿಕೆ ಮಾಡಿಕೊಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ನಾಳೆ ಬೆಂಗಳೂರಿನಲ್ಲೇ ತಂಗುವ ಗೃಹ ಸಚಿವರು ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ರಾಜ್ಯ ಕೋರ್ ಕಮಿಟಿ ಸದಸ್ಯರೊಟ್ಟಿಗೂ ಚರ್ಚೆ ನಡೆಸಲಿದ್ದಾರೆ ಎಂದು ಹೇಳಲಾಗಿದೆ. ಈ ಮಧ್ಯೆ ಬೆಳಗಾವಿಯಲ್ಲಿ ನಡೆಯುವ ಪಕ್ಷದ ಸಮಾವೇಶದ ನಂತರ ಯಡಿಯೂರಪ್ಪ ವಿರುದ್ಧ ತಿರುಗಿ ಬಿದ್ದಿರುವ ಶಾಸಕರು ಅಮಿತ್ ಷಾ ಅವರನ್ನು ಭೇಟಿ ಮಾಡುವ ಪ್ರಯತ್ನ ನಡೆಸಿದ್ದಾರೆ. ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಸೇರಿದಂತೆ, ಕೆಲವು ಶಾಸಕರು ಇದಕ್ಕಾಗಿ ಅಮಿತ್ ಷಾ ಅವರ ಸಮಯ ಕೋರಿದ್ದಾರೆ.

# ಲಸಿಕಾ ಅಭಿಯಾನಕ್ಕೆ ಮತದಾರರ ಪಟ್ಟಿ

ನವದೆಹಲಿ, ಜ.15 – ಕೊರೊನಾ ಲಸಿಕೆ ಅಭಿಯಾನದಲ್ಲಿ ಬೂತ್ ಮಟ್ಟದಲ್ಲಿ ಫಲಾನುಭವಿಗಳನ್ನು ಗುರುತಿಸಲು ಪೂರ್ಣ ಸಹಕಾರ ನೀಡುವುದಾಗಿ ಚುನಾವಣಾ ಆಯೋಗ ತಿಳಿಸಿದೆ. ಆದರೆ, ಲಸಿಕೆ ಅಭಿಯಾನ ಪೂರ್ಣಗೊಂಡ ನಂತರ ಆರೋಗ್ಯಾಧಿಕಾರಿಗಳು ಮಾಹಿತಿಯನ್ನು ಅಳಿಸಿ ಹಾಕಬೇಕೆಂದು ಷರತ್ತು ವಿಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷ ಡಿಸೆಂಬರ್ 31ರಂದು ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರಾ ಅವರಿಗೆ ಪತ್ರ ಬರೆದಿದ್ದ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲ, ಮತಗಟ್ಟೆ ಹಂತದಲ್ಲಿ 50 ವರ್ಷಕ್ಕೂ ಹೆಚ್ಚಿನವರು ಗುರುತಿಸಲು ನೆರವಾಗಬೇಕೆಂದು ಕೋರಿದ್ದರು. ಈ ಬಗ್ಗೆ ವಿವರವಾದ ಪರಿಶೀಲನೆಯ ನಂತರ ಪತ್ರ ಬರೆದಿರುವ ಚುನಾವಣಾ ಆಯೋಗ, ಲಸಿಕೆ ಅಭಿಯಾನಕ್ಕೆ ಪೂರ್ಣ ಬೆಂಬಲ ನೀಡಲು ನಿರ್ಧರಿಸಲಾಗಿದೆ. ಆದರೆ, ಈ ಮಾಹಿತಿಯನ್ನು ಸೀಮಿತ ಉದ್ದೇಶಕ್ಕೆ ಮಾತ್ರ ಬಳಸಬೇಕು ಎಂದು ತಿಳಿಸಿದೆ.

# ಇಂದು ಕೊರೊನಾ ಲಸಿಕೆ

**(5ನೇ ಪುಟದಿಂದ)** ನಗರದ ಸಿ.ಜಿ. ಆಸ್ಪತ್ರೆ, ಜೆ. ಜೆ.ಎಂ.ಸಿ. ವೈದ್ಯಕೀಯ ಕಾಲೇಜು, ಹರಿಹರ, ಹೊನ್ನಾಳಿ, ಚನ್ನಗಿರಿ ಹಾಗೂ ಜಗಳೂರುಗಳ ತಾಲ್ಲೂಕು ಆಸ್ಪತ್ರೆ ಹಾಗೂ ಜಗಳೂರು ತಾಲ್ಲೂಕಿನ ಬಿಳಿಚೋಡು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೊದಲ ದಿನ ಲಸಿಕೆ ನೀಡಲಾಗುವುದು.

ಜಿಲ್ಲೆಯ ಎಲ್ಲಾ ಲಸಿಕಾ ಕೇಂದ್ರಗಳಲ್ಲಿ ಅಗತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಜಿಲ್ಲೆಯ 19,070 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗು ವುದು. ಮೊದಲ ದಿನದಂದು ಸಹ ರೋಗಗಳಿಂದ ಬಳಲುತ್ತಿರು ವವರಿಗೆ ಲಸಿಕೆ ನೀಡಲಾಗುತ್ತಿಲ್ಲ ಎಂದವರು ತಿಳಿಸಿದ್ದಾರೆ. ಪ್ರಥಮ ಹಂತದಲ್ಲಿ ಗರ್ಭಿಣಿಯರು, ಹಾಲುಣಿಸುವ ತಾಯಂದಿರು, ಇನ್ನಿತರೆ ಅಲರ್ಜಿ ಇರುವವರಿಗೆ ಲಸಿಕೆ ನೀಡುವುದಿಲ್ಲ ಎಂದು ಡಿಸಿ ಹೇಳಿದ್ದಾರೆ.

ಈ ವೇಳೆ ಡಿಹೆಚ್‌ಓ ಡಾ.ನಾಗರಾಜ್, ಚಿಗಟೇರಿ ಜಿಲ್ಲಾಸ್ಪತ್ರೆ ಶಸ್ತ್ರ ಚಿಕಿತ್ಸಕ ಜಯಪ್ರಕಾಶ್, ಡಿಎಸ್‌ಓ ಡಾ.ರಾಘವನ್, ಆರ್‌ಸಿಹೆಚ್‌ಓ ಡಾ. ಮೀನಾಕ್ಷಿ ಉಪಸ್ಥಿತರಿದ್ದರು.

# ಕ್ರೀಡಾಪಟುಗಳಿಗೆ ಹುರಿದುಂಬಿಸಿದ ಎಸ್ಸೆಸ್ಸೆಂ



ದಾವಣಗೆರೆ, ಜ.14- ನಗರದ ಮಯೂರ ಕ್ರಿಕೆಟ್ ಕ್ಲಬ್ ವತಿಯಿಂದ ಸಂಕ್ರಾಂತಿ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿರುವ ಆರು ದಿನಗಳ ಆಹ್ವಾನಿತ ಅಂತರ್ ಜಿಲ್ಲಾಮಟ್ಟದ ಹದಿನಾರು ವರ್ಷದೊಳಗಿನ ಬಾಲಕರ ಲೆದರ್‌ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಭಾಗವಹಿಸುವ ಮೂಲಕ ಕ್ರೀಡಾಪಟುಗಳನ್ನು ಹುರಿದುಂಬಿಸಿದರು.

ಭಾಗವಹಿಸಿರುವ ಆಹ್ವಾನಿತ ಕ್ರಿಕೆಟ್ ತಂಡಗಳನ್ನು ಆಯೋಜಕರು ಪರಿಚಯಿಸಿ, ನಗರದಲ್ಲಿ ಲೆದರ್ ಬಾಲ್ ಕ್ರಿಕೆಟ್ ಮೈದಾನವನ್ನು ನಿರ್ಮಿಸಿಕೊಟ್ಟಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು. ಮಲ್ಲಿಕಾರ್ಜುನ್ ಅವರು ಬ್ಯಾಟ್ ಮಾಡಿ, ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಶಾಮನೂರು ಟಿ.ಬಸವರಾಜ್, ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರುಗಳಾದ ದೇವರಮನೆ ಶಿವಕುಮಾರ್, ಅಬ್ದುಲ್ ಲತೀಫ್, ಕೆ.ಚಮನ್ ಸಾಬ್, ಜಿ.ಡಿ.ಪ್ರಕಾಶ್, ಅಯೂಬ್ ಪೈಲ್ವಾನ್, ಎಲ್. ಎಂ.ಪ್ರಕಾಶ್, ತುಮಕೂರು ಲೋಕೇಶ್, ಕೆ.ಶಶಿಧರ್, ಅಶೋಕ್, ಕೆ.ಎಸ್.ಸಿ.ಎ. ವಕ್ತಾರರಾದ ಮೋಹನ್‌ರಾವ್, ಅನಿಲ್, ರೈತ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಕರಿಬಸಪ್ಪ, ತಿಮ್ಮೇಶ್, ಸಿರಿಗೆರೆ ಉಮೇಶ್, ರಂಗನಾಥ್, ಸಂತೋಷ್ ಕುಮಾರ್, ಎಲ್.ಬಿ.ಭೈರೇಶ್, ಅನಿತಾಬಾಯಿ ಮಾಲತೇಶ್, ಸುಷ್ಮಾ ಪಾಟೀಲ್ ಇತರರು ಹಾಜರಿದ್ದರು.

# ಬಿಜೆಪಿಯದ್ದು ಪಾಪದ ಸರ್ಕಾರ: ಸಿದ್ದರಾಮಯ್ಯ

ದಾವಣಗೆರೆ, ಜ.15- ಬಿಜೆಪಿಯದ್ದು ಪಾಪದ ಸರ್ಕಾರ. ಅಕ್ರಮವಾಗಿ ರಚನೆಯಾಗಿರುವ ಸರ್ಕಾರ ಎಂದು ಮಾಜಿ ಸಿಎಂ ಸಿದ್ಧರಾಮಯ್ಯ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಭ್ರಷ್ಟಾಚಾರಗಳು ಒಂದೊಂದಾಗಿ ಹೊರ ಬರುತ್ತಿವೆ ಎಂದರು.

ಇದೀಗ ಸಿಡಿ ಬಗ್ಗೆ ಚರ್ಚೆಯಾಗುತ್ತಿದೆ. ಬಿಜೆಪಿಯವರೇ ಬ್ಲಾಕ್ ಮೇಲ್ ಗಿರಾಕಿಗಳು. ಸಿಡಿಯಲ್ಲಿ ಕೆಟ್ಟದಾಗಿ ಇದೆ ಎಂದು ಹೇಳುತ್ತಾರೆ. ಅದೇನಿದೆ ಎಂಬುದು ತನಿಖೆಯಿಂದ ಹೊರ ಬರಲಿ. ಸಿಡಿ ಬಿಡುಗಡೆಗೆ ಹೆಚ್.ವಿಶ್ವನಾಥ್ ಇಂದು ನಾಳೆ ಎನ್ನುತ್ತಿದ್ದಾರೆ. ಮೀನಾಮೇಷ ಮಾಡಬಾರದು ಎಂದರು.

ಕನಕ ಗುರು ಪೀಠದ ಸ್ವಾಮೀಜಿಯ ಪಾದಯಾತ್ರೆ ಬಗ್ಗೆ ಮಾತನಾಡಿದ ಸಿದ್ಧರಾಮಯ್ಯ, ನಾನು ಎಸ್.ಟಿ. ವಿರೋಧಿಯಲ್ಲ ಎಂದರು.

ಮಾಜಿ ಸಚಿವರಾದ ಶಾಮನೂರು ಮಲ್ಲಿಕಾರ್ಜುನ್, ಪಿ.ಟಿ. ಪರಮೇಶ್ವರನಾಯ್ಕ, ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್, ಜಿ.ಪಂ. ಸದಸ್ಯ ಕೆ.ಎಸ್. ಬಸವರಾಜ್, ಮಾಜಿ ಮೇಯರ್ ಅನಿತಾಬಾಯಿ ಮಾಲತೇಶ್ ಜಾಧವ್ ಇತರರು ಈ ಸಂದರ್ಭದಲ್ಲಿದ್ದರು.

# ದೇಶದ ಮೊದಲ ಚಾಲಕ ರಹಿತ ಮೆಟ್ರೋ ರೈಲು ಅನಾವರಣ

ಬೆಂಗಳೂರು, ಜ. 15 – ದೇಶದಲ್ಲಿ ಉತ್ಪಾದಿಸಿದ ಮೊದಲ ಚಾಲಕ ರಹಿತ ಮೆಟ್ರೋ ರೈಲನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಲ್ಲಿನ ಬಿ.ಇ.ಎಂ.ಎಲ್. ಉತ್ಪಾದನಾ ಘಟಕದಲ್ಲಿ ಅನಾವರಣಗೊಳಿಸಿದ್ದಾರೆ.

ಘಟಕಕ್ಕೆ ಭೇಟಿ ನೀಡಿದ್ದ ಸಚಿವ ಸಿಂಗ್, ಬಿ.ಇ.ಎಂ.ಎಲ್. ಇಂಜಿನಿಯರ್ ಹಾಗೂ ತಂತ್ರಜ್ಞರ ತಂಡದ ಕೆಲಸದ ಬಗ್ಗೆ ಹೆಮ್ಮೆಯಾಗಿದೆ. ಅವರು ಆತ್ಮನಿರ್ಭರ್ ಭಾರತದ ನಿಜವಾದ ಯೋಧರು ಎಂದಿದ್ದಾರೆ.

## ಪತ್ರಿಕಾ ಪ್ರಕಟಣೆ

**ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, # 62, 2ನೇ ಮಹಡಿ, ಮಾರ್ಗೋಸಾ ರಸ್ತೆ (3ನೇ ಮುಖ್ಯ) 18ನೇ ಕ್ರಾಸ್, ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560055**

**ವಾದಿ: ಎನ್.ಟಿ.ಪಿ. ಶ್ರೀನಿತ್ಯಾ ಸೌಹಾರ್ದ ಕೋ-ಆಪರೇಟಿವ್ ಲಿ.,** 2873/ಎ, ಎಸ್.ಐ.ಆರ್ಕೇಡ್, ಮೊದಲನೇ ಮಹಡಿ ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ-577004. ಇದರ ವತಿಯಿಂದ ಮುಖ್ಯಕಾರ್ಯನಿರ್ವಾಹಕರು

**ವ್ಯಾಜ್ಯ ಸಂಖ್ಯೆ: ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ./4513/2018-2019**

**3. ಮಲ್ಲಿಕಾರ್ಜುನ ಹೆಚ್.ಎಸ್. ಬಿನ್ ಮಹಾರುದ್ರಪ್ಪ**
#1675/247, ಲೆನಿನ್ ನಗರ ನಿಟ್ಟುವಳ್ಳಿ, ದಾವಣಗೆರೆ ವ್ಯಾಜ್ಯ ಸಂಖ್ಯೆ: **ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ./4509 /2018-2019**

**2. ಶ್ರೀಮತಿ ಯಶೋಧಮ್ಮ ಆರ್. ಕೋಂ ಲೇಟ್ ವಾಮದೇವಪ್ಪ ಬಿ.**
ಕೊಂಡಜ್ಜಿ, ಕೊಂಡಜ್ಜಿ ಪೋ|| ದಾವಣಗೆರೆ ತಾ|| ದಾವಣಗೆರೆ

**3. ಶ್ರೀ ಮುರಳೀಧರ ಬಿ.ವಿ. ಬಿನ್ ಲೇಟ್ ವಾಮದೇವಪ್ಪ.ಬಿ.**
ಕೊಂಡಜ್ಜಿ, ಕೊಂಡಜ್ಜಿ ಪೋ|| ದಾವಣಗೆರೆ ತಾ|| ದಾವಣಗೆರೆ ಜಿಲ್ಲೆ.

**ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ: **ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./4509,4513/18-2019** ರಂತೆ ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಹಣ ದುರಪಯೋಗ ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ ನ್ಯಾಯಾಲಯದ ಮುಂದೆ **ದಿನಾಂಕ : 22.01.2021ರಂದು ಬೆಳಿಗ್ಗೆ 10.30** ಗಂಟೆಗೆ ಸರಿಯಾಗಿ ತಾವಾಗಲೀ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು **ದಿನಾಂಕ: 11.01.2021**ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

**ಸಹಿ/- ಸಹಕಾರ ಸಂಘಗಳ ಉಪನಿಬಂಧಕರು (ನಿ.441)**
**ದಾವಾ ಪಂಚಾಯ್ತಿ ನ್ಯಾಯಾಲಯ # ಕರಾ.ಸೌಸಂ.ಸ.ನಿ, ಬೆಂಗಳೂರು.**
**(ನ್ಯಾಯಾಲಯದ ಆದೇಶದ ಮೇರೆಗೆ)**

# ನೂತನ ಸಂಸತ್ ಭವನ ನಿರ್ಮಾಣ ಆರಂಭ

ನವದೆಹಲಿ, ಜ. 15 - ನೂತನ ಸಂಸತ್ ಭವನದ ನಿರ್ಮಾಣ ಕಾರ್ಯ ಶುಕ್ರವಾರ ಆರಂಭಗೊಂಡಿದೆ. ತಿಂಗಳ ಹಿಂದೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈ ಯೋಜನೆಗೆ ಶಿಲಾನ್ಯಾಸ ನೆರವೇರಿಸಿದ್ದರು.

ನೂತನ ಸಂಸತ್ ಭವನ ತ್ರಿಕೋನಾಕಾರದಲ್ಲಿದ್ದು, 2022ರಲ್ಲಿ ಇದರ ನಿರ್ಮಾಣ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

2022ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ತುಂಬಲಿವೆ. ಈ ಸಂದರ್ಭದಲ್ಲಿ ನೂತನ ಸಂಸತ್ ಭವನದಲ್ಲಿ ಮೊದಲ ಅಧಿವೇಶನ ನಡೆಸಲು ಉದ್ದೇಶಿಸಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಯೋಜನೆಯ ಹೊಣೆ ಹೊತ್ತಿರುವ ಟಾಟಾ ಪ್ರಾಜೆಕ್ಟ್ಸ್ ಉಪಾಧ್ಯಕ್ಷ ಸಂದೀಪ್ ನವಲಖೆ, 35 ದಿನಗಳು ವಿಳಂಬವಾಗಿದ್ದರೂ ಸಮಯಕ್ಕೆ ಸರಿಯಾಗಿ ಇಲ್ಲವೇ ಮುಂಚೆಯೇ ಕಾಮಗಾರಿ ಪೂರ್ಣಗೊಳಿಸುವ ವಿಶ್ವಾಸವಿದೆ ಎಂದಿದ್ದಾರೆ.

## ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್.

**ವ್ಯವಸ್ಥಾಪಕ ನಿರ್ದೇಶಕರ ಕಾರ್ಯಾಲಯ,** #1776/ಎ85/ಎ86/ ಸಿದ್ದವೀರಪ್ಪ ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ–577 004.
ದೂ.ಸಂ. 08192–222383. ಸಿಐಎನ್: U74999KA2016PLC093411
E-mail: smartcitydavanagere@gmail.com

ನಂ.:ಡಿಎಸ್‌ಸಿಎಲ್/ಸಿಆರ್–226/2020–21 ದಿ : 13–01–2021

**ಕೊಟೇಷನ್ ಪ್ರಕಟಣೆ**

ವಿಷಯ : ದಾ.ಸ್ಮಾ.ಸಿ.ಲಿ.ಕಂಪನಿಗೆ ಸಂಬಂಧಪಟ್ಟ 2019–20ನೇ ಸಾಲಿನ ವಾರ್ಷಿಕ ಫೈಲಿಂಗ್ ಮಾಡುವಕುರಿತು.

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಂಪನಿಯು ಕಂಪನಿ ಆ್ಯಕ್ಟ್ 2013ರ ಪ್ರಕಾರವಾಗಿ ಕೆಳಕಂಡ ವಾರ್ಷಿಕ ಫೈಲಿಂಗ್ ಮಾಡಲು ಕೊಟೇಷನ್‌ನ್ನು ಕರೆಯಲಾಗಿದೆ. ಈ ಕೊಟೇಷನ್‌ನಲ್ಲಿ ಕರೆಯಲಾದ ಫಾರಂಗಳು ನಿಗದಿಪಡಿಸಿದ ದಿನಾಂಕ: 06–02–2021 ರೊಳಗೆ ಫೈಲಿಂಗ್‌ಮಾಡಬೇಕಾಗಿದ್ದು, ವಿವರ ಈ ಕೆಳಗಿನಂತಿರುತ್ತದೆ.

ವಿವರ:– 2019–20ನೇ ಸಾಲಿನ ಹಣಕಾಸು ವರ್ಷದ Form AOC-4 (XBRL) ಮತ್ತು Form MGT-7 (MGT-8 ಸೇರಿ) ಅನ್ನು ಸಿದ್ಧಪಡಿಸುವುದು, ಪ್ರಮಾಣೀಕರಿಸುವುದು ಮತ್ತು RoC ಫೈಲಿಂಗ್ ಮಾಡುವುದು. (ತಮ್ಮ ಸ್ವ ವಿವರದೊಂದಿಗೆ) ಕೊಟೇಷನ್ ಮೊತ್ತ (ತೆರಿಗೆ ಸೇರಿ)

ಇದರಲ್ಲಿ ಸೂಚಿಸಿರುವ ಫಾರಂಗಳ ಫೈಲಿಂಗ್‌ಗೆ ತಾವು ತೆಗೆದುಕೊಳ್ಳುವ ಶುಲ್ಕವನ್ನು ದಿನಾಂಕ: 22–01–2021 ರಂದು ಶುಕ್ರವಾರ ಸಂಜೆ04.30 ಗಂಟೆಯೊಳಗಾಗಿ ಕೊಟೇಷನ್ ಸಲ್ಲಿಸುವವವರು ಮುಚ್ಚಿದ ಲಕೋಟೆಯಲ್ಲಿದರವನ್ನು ನಮೂದಿಸಿ, ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಮತ್ತು ವಿಳಾಸಕ್ಕೆ ತಲುಪಿಸತಕ್ಕದ್ದು, ನಂತರ ಬಂದಮತ್ತು ಷರತ್ತುಬದ್ಧ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ

ವಾಸಾಇ/ ದಾವಣಗೆರೆ/582/ ಎಂಸಿಏ/2019–20

## ದಿ ದಾವಣಗೆರೆ ಕ್ಲಬ್ (ರಿ), ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ

2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21 ರಿಂದ 2022-23 ನೇ ಸಾಲುಗಳಿಗೆ (03 ವರ್ಷ) ಅವಧಿಗೆ ದಿನಾಂಕ 31.01.2021ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿಯ ಸದಸ್ಯರ ಚುನಾವಣೆ ವೇಳಾಪಟ್ಟಿಯನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ.

**ಚುನಾವಣಾ ನೋಟಿಸ್**

**ದಿ ದಾವಣಗೆರೆ ಕ್ಲಬ್ (ರಿ), ದಾವಣಗೆರೆ ಇದರ ಚುನಾವಣಾಧಿಕಾರಿಗಳ ಕಾರ್ಯಾಲಯದಿಂದ ದಾವಣಗೆರೆ ಕ್ಲಬ್ಬಿನ 2020-21 ರಿಂದ 2022-23 ನೇ ಸಾಲುಗಳವರೆಗೆ 03 (ಮೂರು) ವರ್ಷಗಳ ಅವಧಿಗೆ ದಿನಾಂಕ 31.01.2021 ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿಯ ಸದಸ್ಯರ ಸಂಖ್ಯೆ 11 (ಹನ್ನೊಂದು) ಮಾತ್ರ, ಈ ಪೈಕಿ ಅಧ್ಯಕ್ಷರು ಒಂದು ಸ್ಥಾನ, ಉಪಾಧ್ಯಕ್ಷರು ಒಂದು ಸ್ಥಾನ, ಗೌರವ ಕಾರ್ಯದರ್ಶಿ ಒಂದು ಸ್ಥಾನ, ಗೌರವ ಸಹ ಕಾರ್ಯದರ್ಶಿ ಒಂದು ಸ್ಥಾನ, ಖಜಾಂಚಿ ಒಂದು ಸ್ಥಾನ ಹಾಗೂ 06 (ಆರು) ಜನ ನಿರ್ದೇಶಕರುಗಳನ್ನು ಪ್ರತ್ಯೇಕವಾಗಿ ಚುನಾಯಿಸಬೇಕಾಗಿರುತ್ತದೆ (ಒಬ್ಬ ಅಭ್ಯರ್ಥಿ ಈ ಪೈಕಿ ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಉಮೇದುವಾರಿಕೆ ಸಲ್ಲಿಸಲು ಅವಕಾಶವಿರುತ್ತದೆ).**

**ಚುನಾವಣಾ ವೇಳಾಪಟ್ಟಿ**

| | | |
|---|---|---|
| 1 | ಅರ್ಹ ಮತದಾರರ ಪಟ್ಟಿ ಪ್ರಕಟಣೆ | ದಿನಾಂಕ 15.01.2021 ನೇ ಶುಕ್ರವಾರ ಸಂಜೆ 5 ಗಂಟೆಗೆ ಕ್ಲಬಿನ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು. |
| 2 | ಸದಸ್ಯರು ಉಮೇದುವಾರಿಕೆ ಅರ್ಜಿ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ | ದಿನಾಂಕ 15.01.2021ನೇ ಶುಕ್ರವಾರದಿಂದ 23.01.2021ನೇ ಶನಿವಾರದವರೆಗೆ ಬೆಳಿಗ್ಗೆ 10-00 ರಿಂದ ಸಂಜೆ 5-00 ರವರೆಗೆ ಕ್ಲಬ್‌ನ ಚುನಾವಣಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಲ್ಲಿಸುವುದು. |
| 3 | ಉಮೇದುವಾರಿಕೆ ಅರ್ಜಿ ಮತ್ತು ನಾಮಪತ್ರ ಅರ್ಜಿಗಳನ್ನು ಪರಿಶೀಲನೆ ಮಾಡುವ ದಿನಾಂಕ ಮತ್ತು ವೇಳೆ | ದಿನಾಂಕ 24.01.2021 ಭಾನುವಾರ ಬೆಳಿಗ್ಗೆ 11-00 ಗಂಟೆಯಿಂದ ಕ್ಲಬ್‌ನ ಕಛೇರಿಯಲ್ಲಿ ಚುನಾವಣಾಧಿಕಾರಿಗಳಿಂದ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. |
| 4 | ಉಮೇದುವಾರಿಕೆ ಅರ್ಜಿ ಮತ್ತು ನಾಮಪತ್ರ ಅರ್ಜಿಗಳನ್ನು ವಾಪಾಸ್ ಪಡೆಯುವ ದಿನಾಂಕ | ದಿನಾಂಕ 25.01.2021ನೇ ಸೋಮವಾರ ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯೊಳಗಾಗಿ ಚುನಾವಣಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಪಡೆದವರ ಕೈಯಲ್ಲಿ ಖುದ್ದಾಗಿ ಲಿಖಿತ ಮೂಲಕ ಸಲ್ಲಿಸುವುದು ನಂತರ ಅಂತಿಮವಾಗಿ ಚುನಾವಣಾ ಕಣದಲಿರುವ ಅಭ್ಯರ್ಥಿಗಳ ಹೆಸರು ಪ್ರಕಟಣೆ. |
| 5 | ಸ್ಪರ್ಧೆಗೆ ಅರ್ಹರಾದ ಉಮೇದುವಾರರ ಅಂತಿಮ ಪಟ್ಟಿಯನ್ನು ಹಾಗೂ ನಂತರ ಚುನಾವಣಾ ಚಿಹ್ನೆಗಳನ್ನು ನೀಡುವ ದಿನಾಂಕ | ದಿನಾಂಕ 26.01.2021 ನೇ ಮಂಗಳವಾರ ಮಧ್ಯಾಹ್ನ 4-00 ಗಂಟೆಗೆ ಪರಿಶೀಲನೆ ನಂತರ ಚುನಾವಣಾಧಿಕಾರಿಗಳಿಂದ ಚುನಾವಣಾ ಚಿಹ್ನೆ ಸಹಿತ ಕ್ಲಬ್‌ನ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು. |
| 6 | ಮತದಾನ ನಡೆಯುವ ದಿನಾಂಕ, ಸ್ಥಳ ಮತ್ತು ವೇಳೆ | ದಿನಾಂಕ 31.01.2021 ನೇ ಭಾನುವಾರದಂದು ಕ್ಲಬ್‌ನ ಆವರಣದಲ್ಲಿ ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯವರೆಗೆ |
| 7 | ಮತಗಳ ಎಣಿಕೆ | ದಿನಾಂಕ 31.01.2021ನೇ ಭಾನುವಾರದಂದು ಮತದಾನ ಮುಗಿದ ನಂತರ |
| 8 | ಚುನಾವಣಾ ಫಲಿತಾಂಶ ಪ್ರಕಟಣೆ | ದಿನಾಂಕ 31.01.2021 ನೇ ಭಾನುವಾರದಂದು ಮತಗಳ ಎಣಿಕೆ ಮುಗಿದ ನಂತರ ಚುನಾವಣಾಧಿಕಾರಿಗಳಿಂದ ಫಲಿತಾಂಶದ ವಿವರ ಪಟ್ಟಿಯನ್ನು ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು. |

ದಿನಾಂಕ : 21.12.2020
ಸ್ಥಳ : ದಾವಣಗೆರೆ

ಸಹಿ/-
(ಎಸ್.ಎಂ.ವೀರಪ್ಪ)
ಸಹಕಾರಿ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ)
ಹಾಗೂ ಚುನಾವಣಾಧಿಕಾರಿ, ದಿ ದಾವಣಗೆರೆ ಕ್ಲಬ್ (ರಿ), ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ

ಶುಕ್ರವಾರ ಬೆಳಗಿನ ಜಾವ ಧಾರವಾಡದ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ನಮ್ಮ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ ಗೈನಕಾಲಜಿ ಪ್ರೊಫೆಸರ್ ಆಗಿದ್ದ

**ಡಾ|| ವೀಣಾ ಪ್ರಕಾಶ್ ಮತ್ತಿಹಳ್ಳಿ**

ಅವರು ನಿಧನ ಹೊಂದಿದ್ದಾರೆ.
ಅವರ ಜೊತೆಗೆ ಗೋವಾ ಪ್ರವಾಸದಲ್ಲಿದ್ದ ಅವರ ಸ್ನೇಹಿತೆಯರೂ ಸಾವನ್ನಪ್ಪಿರುವುದು ನಮಗೆಲ್ಲ ಅತೀವ ದುಃಖ ತಂದಿದೆ.
ದಾವಣಗೆರೆ ನಗರದ ಇತಿಹಾಸದಲ್ಲಿ ಇದೊಂದು ದೊಡ್ಡ ದುರಂತವಾಗಿದ್ದು, ಮೃತಪಟ್ಟ ಎಲ್ಲರಿಗೂ ಭಾವಪೂರ್ಣ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತೇವೆ.
ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಗೌ|| ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು ಹಾಗು ಸರ್ವ ಸದಸ್ಯರು
**ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ.**

ಪ್ರಾಂಶುಪಾಲರು, ನಿರ್ದೇಶಕರುಗಳು, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು
**ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ.**

ಛೇರ್ಮನ್ನರು, ಪ್ರಾಂಶುಪಾಲರು, ವೈದ್ಯಕೀಯ ನಿರ್ದೇಶಕರು, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು
**ಎಸ್.ಎಸ್. ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ.**

# ಉತ್ತರ ಕರ್ನಾಟಕ ಹೆದ್ದಾರಿಗಳಿಗೆ 21 ಸಾವಿರ ಕೋಟಿ ರೂ.

## 847 ಕಿ.ಮೀ. ಹೆದ್ದಾರಿ ಯೋಜನೆಗೆ ಕೇಂದ್ರ ಸಚಿವ ಗಡ್ಕರಿ ಘೋಷಣೆ



ಬೆಂಗಳೂರು, ಜ. 15 - ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಹಾಗೂ ಎಂಎಸ್ಎಂಇ ಸಚಿವ ನಿತಿನ್ ಗಡ್ಕರಿ ಅವರು ಶುಕ್ರವಾರ ಉತ್ತರ ಕರ್ನಾಟಕ ಭಾಗದಲ್ಲಿ 21 ಸಾವಿರ ಕೋಟಿ ರೂ. ವೆಚ್ಚದಲ್ಲಿ 847 ಕಿ.ಮೀ. ಉದ್ದದ ಹೆದ್ದಾರಿ ನಿರ್ಮಾಣದ 13 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಘೋಷಿಸಿದ್ದಾರೆ.

ಅವರು ಇಂದು 323 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುವ ಹುಬ್ಬಳ್ಳಿಯ ರಾಣಿ ಚೆನ್ನಮ್ಮ ವೃತ್ತದ ಎಲಿವೇಟೆಡ್ ಕಾರಿಡಾರ್ ಹಾಗೂ ಕಲಘಟಗಿ ತಾಲ್ಲೂಕು ದಾಸ್ತಿಕೊಪ್ಪ ಗ್ರಾಮದಲ್ಲಿ ಬೇಡ್ತಿ ನಾಲೆಗೆ ಸೇತುವೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಾರತ ಸರ್ಕಾರವು ಕರ್ನಾಟಕ ರಾಜ್ಯದಲ್ಲಿನ ಹೆದ್ದಾರಿಗಳ ಅಭಿವೃದ್ಧಿಗೆ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಹುಬ್ಬಳ್ಳಿ-ಧಾರವಾಡ ಬೈಪಾಸ್ ಚತುಷ್ಪಥ ರಸ್ತೆ ನಿರ್ಮಾಣ, ಬೆಳಗಾವಿ ಚತುಷ್ಪಥ ವರ್ತುಲ ರಸ್ತೆ ಸೇರಿದಂತೆ ಒಟ್ಟು 13 ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ವಿವರಿಸಿದರು.

ಹುಬ್ಬಳ್ಳಿ-ಹೊಸಪೇಟೆ ಹೆದ್ದಾರಿ ಸೇರಿದಂತೆ, ಉತ್ತರ ಕರ್ನಾಟಕದ ಪ್ರಗತಿಯಲ್ಲಿರುವ ಯೋಜನೆಗಳನ್ನೂ ಸಹ ಶೀಘ್ರವೇ ಪೂರ್ಣಗೊಳಿಸುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಒಂದು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ ಎರಡನೇ ಬಾರಿಗೆ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಶಂಕುಸ್ಥಾಪನೆ ನಡೆಸುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ರಾಣಿ ಚೆನ್ನಮ್ಮ ವೃತ್ತದ ಎಲಿವೇಟೆಡ್ ಕಾರಿಡಾರ್ ಹಾಗೂ ದಾಸ್ತಿಕೊಪ್ಪ ಗ್ರಾಮದ ಬೇಡ್ತಿ ನಾಲಾ ಮೇಲಿನ ಸೇತುವೆ ನಿರ್ಮಾಣದಿಂದ ಅಂಕೋಲಾ- ಗುತ್ತಿ ಹೆದ್ದಾರಿಯಲ್ಲಿ ಸುಗಮ ಸಂಚಾರಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ 1.16 ಲಕ್ಷ ಕೋಟಿ ರೂ. ಗಳನ್ನು ಹೆದ್ದಾರಿ ಅಭಿವೃದ್ಧಿಗಾಗಿ ಹೂಡಿಕೆ ಮಾಡುವ ಕೇಂದ್ರ ಸರ್ಕಾರದ ಕ್ರಮದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು, ರಾಜ್ಯದ ಎಲ್ಲ ಹೆದ್ದಾರಿ ಯೋಜನೆಗಳು ಕಾಲಬದ್ಧವಾಗಿ ಪೂರ್ಣಗೊಳ್ಳಲು ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.


# ಪಾದಯಾತ್ರೆ ಮೂಲಕ ಒತ್ತಡ ಸರಿಯಲ್ಲ : ಮುರುಗೇಶ್ ನಿರಾಣಿ

ಬೆಂಗಳೂರು, ಜ.15 - ಏಕಾಏಕಿ ಪಾದಯಾತ್ರೆ ಮಾಡಿ ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರಿಸುವಂತೆ ಒತ್ತಡ ಹಾಕುವುದು ಸರಿಯಲ್ಲ. ಈಗಾಗಲೇ ಮುಖ್ಯಮಂತ್ರಿ ಯಡಿಯೂರಪ್ಪನವರು ನಮ್ಮ ಸಮುದಾಯವನ್ನು 2ಎಗೆ ಸೇರಿಸಲು ಒಪ್ಪಿಗೆ ನೀಡುವ ಭರವಸೆಯನ್ನು ಕೊಟ್ಟಿದ್ದಾರೆ. ಅವರ ಮಾತಿನಲ್ಲಿ ಎಲ್ಲರೂ ನಂಬಿಕೆ ಇಡಬೇಕು ಎಂದು ನೂತನ ಸಚಿವ ಮುರುಗೇಶ್ ನಿರಾಣಿ ಹೇಳಿದ್ದಾರೆ.

ಪಕ್ಷದ ಕಚೇರಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ವೀರಶೈವ ಲಿಂಗಾಯಿತ ಪಂಚಮಸಾಲಿ ಸಮಾಜವನ್ನು 2ಎಗೆ ಸೇರಿಸಲು ನಡೆಸುತ್ತಿರುವ ಪಾದಯಾತ್ರೆಯ ಹಿಂದೆ ಯಾರಿದ್ದಾರೆಂದು ನಾನು ಹೇಳಬೇಕಾದ ಅಗತ್ಯವಿಲ್ಲ. ಅದು ಎಲ್ಲರಿಗೂ ಗೊತ್ತಿರುವ ವಿಷಯ ಎಂದಿದ್ದಾರೆ.

ನಾನು ಈ ಹಿಂದೆ ಪಾದಯಾತ್ರೆ ಕೈಗೊಳ್ಳಬೇಡಿ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರಿಗೆ ಮನವಿ ಮಾಡಿದ್ದೆ. ಬಳಿಕ ಸಿ.ಸಿ.ಪಾಟೀಲ್ ಕೂಡ ಶ್ರೀಗಳಿಗೆ ಪಾದಯಾತ್ರೆ ನಡೆಸದಂತೆ ಮನವಿ ಮಾಡಿದ್ದರು. ನಾವು ಶ್ರೀಗಳಿಗೆ ಹೇಳುವಷ್ಟು ದೊಡ್ಡವರಲ್ಲ ಎಂದು ತಿಳಿಸಿದರು ಎಂದವರು ಹೇಳಿದ್ದಾರೆ.

ಶ್ರೀಗಳು ತಕ್ಷಣವೇ ಪಾದಯಾತ್ರೆ ರದ್ದು ಮಾಡಬೇಕೆಂದು ಅನೇಕ ಮುಖಂಡರು ಮನವಿ ಮಾಡಿದ್ದೇವೆ. ಯಾರೋ ಅವಕಾಶ ಸಿಗದವರು ಅವರಿಗೆ ಬೆಂಬಲ ಕೊಡುತ್ತಿದ್ದಾರೆ. ಇದರ ಹಿಂದೆ ಯಾರಿದ್ದಾರೆಂದು ನಾನು ಹೇಳುವುದಿಲ್ಲ ಎಂದರು.



ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಆವರಣದಲ್ಲಿ ನಡೆಯುತ್ತಿರುವ ಹರಜಾತ್ರಾ ಮಹೋತ್ಸವದ ಎರಡನೇ ದಿನದ ಸಂಜೆ ಏರ್ಪಾಡಾಗಿದ್ದ ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿಯವರ ತೃತೀಯ ಪೀಠಾರೋಹಣ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಪಿ.ಟಿ. ಪರಮೇಶ್ವರನಾಯ್ಕ ಭಾಗವಹಿಸಿದ್ದರು.

# ಸಮಾನತೆಯ ಸಮಾಜ ನಿರ್ಮಾಣಕ್ಕೆ ಗುರುಪೀಠಗಳು ಪೂರಕವಾಗಿರಬೇಕು : ಮಾಜಿ ಸಿಎಂ ಸಿದ್ದರಾಮಯ್ಯ

**ಜಿಗಳಿ ಪ್ರಕಾಶ್**

> ರಾಣಿ ಚೆನ್ನಮ್ಮನ ಜೊತೆ ಸಂಗೊಳ್ಳಿ ರಾಯಣ್ಣ ಇದ್ದಂತೆ, ಸಿದ್ಧರಾಮಯ್ಯನವರ ಜೊತೆ ಪಂಚಮಸಾಲಿ ಪೀಠ ಇರುತ್ತದೆ : ವಚನಾನಂದ ಶ್ರೀಗಳು

ಹರಿಹರ, ಜ.15- ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಹಮ್ಮಿಕೊಂಡಿದ್ದ ಹರ ಜಾತ್ರಾ ಮಹೋತ್ಸವದ 2ನೇ ದಿನದ ಕಾರ್ಯಕ್ರಮದಲ್ಲಿ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರ ತೃತೀಯ ಪೀಠಾರೋಹಣ ನಾಡಿನ ಅಪಾರ ಭಕ್ತರ ಸಮ್ಮುಖದಲ್ಲಿ ಜರುಗಿತು.

ಹುಬ್ಬಳ್ಳಿಯ ಮೂರು ಸಾವಿರ ಮಠದ ಡಾ. ಗುರುಸಿದ್ದರಾಜಯೋಗೀಂದ್ರ ಸ್ವಾಮೀಜಿ ಅವರು ಶ್ರೀ ವಚನಾನಂದ ಸ್ವಾಮೀಜಿ ಅವರಿಗೆ ರುದ್ರಾಕ್ಷಿ ಕಿರೀಟವನ್ನು ತೊಡಿಸುವ ಮೂಲಕ ಪೀಠಾರೋಹಣವನ್ನು ನೆರವೇರಿಸಿದರು.

ಈ ಸಂದರ್ಭಕ್ಕೆ ಸಾಕ್ಷಿಯಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೀಗಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ವಚನಾನಂದ ಶ್ರೀಗಳು ಈ ಪೀಠಕ್ಕೆ ಬರುವುದಕ್ಕಿಂತ ಮುಂಚಿನಿಂದ ನನಗೆ ಪರಿಚಿತರಾಗಿದ್ದರು.

ಗುರುಗಳಾದವರು ಜಾತ್ಯತೀತ ತತ್ವ ಹೊಂದಿ, ಸಾಮಾಜಿಕ ಸುವ್ಯವಸ್ಥೆಯಲ್ಲಿ ಬಲವಾದ ನಂಬಿಕೆ ಇಟ್ಟುಕೊಂಡಿರಬೇಕು. ಧರ್ಮ ಪ್ರಚಾರ, ಶಿಕ್ಷಣ, ಆರ್ಥಿಕ ಸಮಾನತೆ ಆಗದ ಹೊರತು, ಸಮಾಜದಲ್ಲಿ ಬದಲಾವಣೆ ಅಸಾಧ್ಯ ಎಂದು ಸಿದ್ದರಾಮಯ್ಯ ಹೇಳಿದರು.

ಸಮಾಜದಲ್ಲಿರುವ ಮೇಲು ಕೀಳು, ಅಸುರಕ್ಷತೆಗಳನ್ನು ದೇವರು ಮಾಡಿಲ್ಲ. ನಾವು ನಮ್ಮ ಸ್ವಾರ್ಥಕ್ಕಾಗಿ ಮಾಡಿಕೊಂಡಿದ್ದೇವೆ. ಕಾಯಕ ಉತ್ಪಾದನೆ ಮಾಡುವ ಕಾಯಕದವರು ಬಡವರಾಗಿಯೇ ಇದ್ದಾರೆ. ಕಾಯಕದ ಲಾಭ ಪಡೆದವರು ಕಾಯಕ ಮಾಡದವರು ಎಂದು ಬೇಸರ ವ್ಯಕ್ತಪಡಿಸಿದರು.

ಪಂಚಮಸಾಲಿ ಸಮಾಜದವರು ಮೂಲತಃ ಕೃಷಿಕರಾಗಿದ್ದು, ಸ್ವಾರ್ಥಕ್ಕಾಗಿ ಉತ್ಪಾದನೆ ಮಾಡಿಲ್ಲ. ಸಮಾಜಕ್ಕಾಗಿ ಅರ್ಪಿಸಿದ್ದಾರೆ. ಪ್ರತಿಯೊಬ್ಬರೂ ಕಾಯಕ ಮಾಡಬೇಕು. ಕಾಯಕದಿಂದ ಬಂದಿದ್ದನ್ನು ಹಂಚಿ ತಿಂದಾಗ ಸಮಾನತೆ ಬರಲು ಸಾಧ್ಯ ಎಂದರು.

ಜಾತಿ, ಆರ್ಥಿಕ, ಸಾಮಾಜಿಕ ಅಸಮಾನತೆ ಇರದಂತಹ ಸಮಾಜ ನಿರ್ಮಾಣ ಆಗಬೇಕೆಂಬ ಉದ್ದೇಶದಿಂದ ಅನ್ನ ಭಾಗ್ಯ, ಕ್ಷೀರ ಭಾಗ್ಯ, ಕೃಷಿ ಭಾಗ್ಯ, ಪಶು ಭಾಗ್ಯ, ಶಾದಿ ಭಾಗ್ಯ, ಇಂದಿರಾ ಕ್ಯಾಂಟೀನ್ ಯೋಜನೆಗಳು ಜಾರಿಗೆ ತಂದೆ. ಆದರೂ ನನ್ನನ್ನು ಕುರುಬ ಜಾತಿಯವನು ಎಂದು ಕರೆಯುತ್ತಾರೆ.

ನಾನು ಒಂದು ಜಾತಿಗೆ ಸೀಮಿತವಾಗಿಲ್ಲ, ಇಡೀ ಮಾನವ ಕುಲದಲ್ಲಿ ನಾನೊಬ್ಬ, ನನ್ನದು ಮನುಷ್ಯ ಜಾತಿ ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.

ನಾನು ಸಿಎಂ ಆಗಿದ್ದಾಗ ವಿಜಾಪುರ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಅವರ ಹೆಸರನ್ನು ನಾಮಕರಣ ಮಾಡಿದೆವು. ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಸರ್ಕಾರದಿಂದಲೇ ಆಚರಿಸುವಂತೆ ಆದೇಶ ಮಾಡಿದೆ ಎಂದ ಸಿದ್ದರಾಮಯ್ಯನವರು, ಈ ಮಠ ಶ್ರೀಗಳ ನೇತೃತ್ವದಲ್ಲಿ ದೊಡ್ಡ ಧಾರ್ಮಿಕ ಕೇಂದ್ರವಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ಇದಕ್ಕೂ ಮುನ್ನ ಮಾತನಾಡಿದ ಮಾಜಿ ಸಚಿವ ಎಂ.ಬಿ. ಪಾಟೀಲ್ ಅವರು, ನಾನು ನೀರಾವರಿ ಸಚಿವನಾಗಿದ್ದಾಗ 50 ಸಾವಿರ ಕೋಟಿ ರೂ. ವೆಚ್ಚದಲ್ಲಿ ಪ್ರಮುಖ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ, ಎಲ್ಲಾ ರೈತರಿಗೆ ನೆರವಾದ ತೃಪ್ತಿ ನನಗಿದೆ ಎಂದು ಹೇಳಿದರು.

ವಿಧಾನ ಸಭೆಯ ಉಪಸಭಾಪತಿ ಆನಂದ ಮಾಮನಿ, ರಾಣೇಬೆನ್ನೂರು ಶಾಸಕ ಅರುಣ್‌ಕುಮಾರ್ ಪೂಜಾರ್, ವಿಧಾನ ಪರಿಷತ್ ಮಾಜಿ ಸದಸ್ಯ ಸೋಮಣ್ಣ ಬೇವಿನಮರದ ಮಾತನಾಡಿದರು.

ಹುಬ್ಬಳ್ಳಿಯ ಮೂರು ಸಾವಿರ ಮಠದ ಡಾ. ಗುರುಸಿದ್ದರಾಜಯೋಗೀಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಉಸಿರಿನ ಮೇಲೆ ಹಿಡಿತ ಇಟ್ಟುಕೊಂಡಿರುವವರು ಸಾಧಕರಾಗುತ್ತಾರೆ ಎಂಬುದಕ್ಕೆ ವಚನಾನಂದ ಶ್ರೀಗಳೇ ಸಾಕ್ಷಿಯಾಗಿದ್ದಾರೆ. ಯೋಗ ಗುರುವಾಗಿ ಜನರಿಗೆ ಆರೋ ಗ್ಯದ ಜ್ಞಾನ ನೀಡುವ ಶ್ರೀಗಳು ಆರೋಗ್ಯವಂತ ಸಮಾಜ ನಿರ್ಮಾಣ ಮಾಡುತ್ತಾರೆ ಎಂಬ ನಂಬಿಕೆ ನಮಗಿದೆ ಎಂದರು.

ದಿವ್ಯ ನೇತೃತ್ವ ವಹಿಸಿದ್ದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ಸಿದ್ದರಾಮಯ್ಯನವರಿಗೆ ಯೋಗ ಇದೆ.

ಆ ಯೋಗ ಆದಷ್ಟು ಬೇಗ ಬರಲಿ ಎಂದು ಶುಭ ಹಾರೈಸಿ, ಅಂದು ಕಿತ್ತೂರು ರಾಣಿ ಚೆನ್ನಮ್ಮ ಜೊತೆ ಸಂಗೊಳ್ಳಿ ರಾಯಣ್ಣ ಇದ್ದಂತೆ ಇಂದು ನಿಮ್ಮ ಜೊತೆ ಪಂಚಮಸಾಲಿ ಪೀಠ ಇರುತ್ತದೆ ಎಂದು ಬೆಂಬಲ ನೀಡಿದರು.

ಎಂ.ಬಿ. ಪಾಟೀಲ್ ಅವರು ಮಾಡಿದ ನೀರಾವರಿ ಯೋಜನೆಗಳ ಲಾಭ ನಮ್ಮ ರೈತರಿಗೆ ಆಗಿದೆ. ಅದಕ್ಕಾಗಿ ನಾವು ಅವರನ್ನು ಆಧುನಿಕ ಭಗೀರಥ ಎಂದು ಕರೆಯುತ್ತೇವೆ ಎಂದರು.

ಪೀಠದ ಧರ್ಮದರ್ಶಿ ಬಾವಿ ಬೆಟ್ಟಪ್ಪ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ವಿಧಾನಪರಿಷತ್ ಸದಸ್ಯ ಕೆ. ಗೋವಿಂದರಾಜು, ಸಮಾಜದ ಹಿರಿಯರಾದ ಎನ್.ಜಿ. ನಾಗನಗೌಡ್ರು, ಪೀಠದ ಧರ್ಮದರ್ಶಿಗಳಾದ ಬಿ.ಸಿ. ಉಮಾಪತಿ, ಬಸವರಾಜ್ ದಿಂಡೂರು, ಚಂದ್ರಶೇಖರ್ ಪೂಜಾರ್, ಎಚ್.ಪಿ. ಬಾಬಣ್ಣ, ಜ್ಯೋತಿಪ್ರಕಾಶ್, ಗುರುಶಾಂತ ನಿಡೋಣಿ, ಪಂಚಮಸಾಲಿ ಸಂಘದ ರಾಜ್ಯಾಧ್ಯಕ್ಷ ಬಿ. ನಾಗನಗೌಡ, ಜಾತ್ರಾ ಸಮಿತಿ ಅಧ್ಯಕ್ಷ ಬಿ. ಲೋಕೇಶ್, ಬಂಕಾಪುರದ ಶಿವಣ್ಣ, ಶಿವಾನಂದಪ್ಪ, ಷಣ್ಮುಖಪ್ಪ, ಗುತ್ತೂರು ಕರಿಬಸಪ್ಪ, ಶಿವಕುಮಾರ್ ಪಾಲ್ಗೊಂಡಿದ್ದರು.

ಪಂಚಮಸಾಲಿ ಪೀಠದ ಕಾರ್ಯಾಧ್ಯಕ್ಷ ಜಿ.ಪಿ. ಪಾಟೀಲ ಸ್ವಾಗತಿಸಿದರು. ಪೀಠದ ಧರ್ಮದರ್ಶಿ ಪಿ.ಡಿ. ಶಿರೂರು ಪ್ರಾಸ್ತಾವಿಕವಾಗಿ ಮಾತನಾಡಿದರು.





ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ. ಜೈ ಸಹಕಾರ

**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**

16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ-577 002.

ಮಾನ್ಯ ಮತದಾರ ಬಂಧುಗಳೇ,

**"ಪಿ.ಜಿ. ರಾಜಶೇಖರ ಗ್ರೂಪ್"**

ಸಹಕಾರಿಯ ಉತ್ತಮ ಅಭಿವೃದ್ಧಿಗೆ, ಸದಸ್ಯ ಬಂಧುಗಳಿಗೆ ಪ್ರಮಾಣಿಕವಾಗಿ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಈ ಕೆಳಕಂಡ ನಾವುಗಳು ಅಭ್ಯರ್ಥಿಗಳಾಗಿ ಸಹಕಾರಿಯ ಉನ್ನತ ಪ್ರಗತಿಗಾಗಿ ಶ್ರಮಿಸಲು ಮಾಜಿ ಅಧ್ಯಕ್ಷರಾದ **"ಪಿ.ಜಿ. ರಾಜಶೇಖರ್ ಗ್ರೂಪ್"** ಇಂದ ಸ್ಪರ್ಧಿಸಿರುತ್ತೇವೆ. ತಮ್ಮ ಅತ್ಯಮೂಲ್ಯವಾದ ಮತವನ್ನು ಈ ಕೆಳಕಂಡ 10 ಅಭ್ಯರ್ಥಿಗಳಿಗೂ ತಲಾ 1 ರಂತೆ ಮತವನ್ನು ನೀಡಿ ನಮ್ಮೆಲ್ಲರನ್ನೂ ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 14 | ರಾಜಶೇಖರಯ್ಯ ಪಿ.ಜಿ. ಸಾಮಾನ್ಯ | | |
| 4 | ಚನ್ನಬಸವಯ್ಯ ಕೆ.ಎಂ. ಸಾಮಾನ್ಯ | | |
| 9 | ದ್ರಾಕ್ಷಾಯಣಮ್ಮ ಮಹಿಳಾ ಮೀಸಲು | | |
| 16 | ವೀರಭದ್ರಯ್ಯ ಶಾಸ್ತ್ರಿ ಹೆಚ್. ಸಾಮಾನ್ಯ | | |
| 19 | ವೀರರಾಜೇಂದ್ರಸ್ವಾಮಿ ಬಿ.ಎಂ. ಸಾಮಾನ್ಯ | | |

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 21 | ಸುರೇಶ್ ಹೆಚ್.ಪಿ. ಸಾಮಾನ್ಯ | | |
| 5 | ಚಂದ್ರಮ್ಮ ಕೆ.ಎಂ. ಮಹಿಳಾ ಮೀಸಲು | | |
| 3 | ಕಿರಣಕುಮಾರ್ ಜೆ. ಸಾಮಾನ್ಯ | | |
| 20 | ಸಿದ್ದಯ್ಯ ಎಂ.ಎಸ್. (ಸಿದ್ದೇಶ್ ಕೋಟೆಹಾಳ್) ಸಾಮಾನ್ಯ | | |
| 1 | ಅರುಣಕುಮಾರ್ ಜೆ.ಕೆ. ಸಾಮಾನ್ಯ | | |

ದಿನಾಂಕ : 17-1-2021ನೇ ಭಾನುವಾರ
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00ರ ವರೆಗೆ
ಸ್ಥಳ : **ಸದ್ಯೋಜಾತ ಸ್ವಾಮಿಗಳ ಮಠ, 'ಶಿವಾಚಾರ್ಯ ನಿಕೇತನ'**
ಎಂ.ಸಿ.ಸಿ. 'ಬಿ' ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ.

ವಿಶೇಷ ಸೂಚನೆ : ಮತದಾನಕ್ಕೆ ಬರುವಾಗ ಸಹಕಾರಿಯ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡ್ ತರಲು ಕೋರಿದೆ.

ಸಂಪರ್ಕಕ್ಕಾಗಿ
9481875554, 9341127879, 9448443095.



ಎಸ್.ಎಂ. ಗುರುದೇವಮೂರ್ತಿ
ಸಂಸ್ಥಾಪಕರು

ಸ್ವಚ್ಛ, ದಕ್ಷ, ಪಾರದರ್ಶಕ, ಆಡಳಿತ ಮತ್ತು ಅಭಿವೃದ್ಧಿಗೆ ನಿಮ್ಮ ಮತ

**ಸಹಕಾರಿಯ ಷೇರುದಾರರಲ್ಲಿ ಮನವಿ**

ದಿನಾಂಕ : 17.01.2021ರ ಭಾನುವಾರ ನಡೆಯಲಿರುವ ಜಂಗಮ ಸೌಹಾರ್ದ ಸಹಕಾರಿ ನಿಯಮಿತದ ನಿರ್ದೇಶಕ ಸ್ಥಾನಗಳಿಗೆ ಸ್ಪರ್ಧಿಸಿರುವ ಶ್ರೀ ಪಿ.ಜಿ. ರಾಜಶೇಖರ್ ಅವರ ನೇತೃತ್ವದ ಗುಂಪನ್ನು ಬೆಂಬಲಿಸುತ್ತೇವೆ. ಚುನಾವಣೆಯಲ್ಲಿ **ಶ್ರೀ ಪಿ.ಜಿ. ರಾಜಶೇಖರ್** ನೇತೃತ್ವದ ಗುಂಪಿನ ಎಲ್ಲಾ 10 ಜನ ಅಭ್ಯರ್ಥಿಗಳಿಗೆ ಮಾನ್ಯ ಅರ್ಹ ಷೇರುದಾರರು ತಮ್ಮ ಮತವನ್ನು ಚಲಾಯಿಸುವ ಮೂಲಕ ಅವರನ್ನು ಚುನಾಯಿಸುವುದರೊಂದಿಗೆ ನಮ್ಮ ಸಹಕಾರಿಯ ಶ್ರೇಯೋಭಿವೃದ್ಧಿಗೆ ಸಹಕಾರ ನೀಡುವಂತೆ ಕೋರುತ್ತೇವೆ.



ಡಿ.ಸಿ. ಚಂದ್ರಯ್ಯ
ಸಂಸ್ಥಾಪಕರು

## ರಾಘವೇಂದ್ರ ಸ್ವಾಮಿ ದರ್ಶನಕ್ಕೆ ಸಿಗದ ಅವಕಾಶ

# ಪುಣ್ಯ ಸ್ಥಳವಾದ ರಾಘವೇಂದ್ರ ಕೃಪಾಶ್ರಮದ ಮುಂದೆ ಭಕ್ತರ ಅಸಮಾಧಾನ



ದಾವಣಗೆರೆ, ಜ.15- ಸಂಕ್ರಾಂತಿ ಹಬ್ಬದ ನಿಮಿತ್ತ ದೇವರ ದರ್ಶನ ಮಾಡಲು ಅವಕಾಶ ನೀಡದಿರುವುದಕ್ಕೆ ಭಕ್ತ ಸಮೂಹ ಅಸಮಾಧಾನ ವ್ಯಕ್ತಪಡಿಸಿ ಪ್ರತಿಭಟಿಸಿರುವ ಘಟನೆ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣದಲ್ಲಿನ ಪುಣ್ಯ ಸ್ಥಳದಲ್ಲಿ ಗುರುವಾರ ನಡೆದಿದೆ.

ಪುಣ್ಯಸ್ಥಳವಾದ ರಾಘವೇಂದ್ರ ಕೃಪಾಶ್ರಮಕ್ಕೆ ಪ್ರತಿ ವರ್ಷದಂತೆ ಸಂಕ್ರಾಂತಿ ಅಂಗವಾಗಿ ರಾಘವೇಂದ್ರ ಸ್ವಾಮಿ ದರ್ಶನಕ್ಕಾಗಿ ಬಂದಿದ್ದ ವೇಳೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿತ್ತಲ್ಲದೇ, ಮಠಕ್ಕೆ ಬೀಗ ಹಾಕಿ ಪ್ರವೇಶಕ್ಕೆ ಅನುಮತಿ ನಿರ್ಬಂಧಿಸಲಾಗಿತ್ತು. ಹೀಗೆ ಯಾವುದೇ ಮುನ್ಸೂಚನೆ ಇಲ್ಲದೇ ದೇವರ ದರ್ಶನದ ಅವಕಾಶ ನಿಷೇಧಿಸಿದ್ದು ಭಕ್ತರ ಆಕ್ರೋಶಕ್ಕೆ ಕಾರಣವಾಗಿತ್ತು.

ದಾವಣಗೆರೆ, ಹರಿಹರ, ಚನ್ನಗಿರಿ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಿಂದ ಕುಟುಂಬ ಸಮೇತ ಬಂದಿದ್ದ ನೂರಾರು ಭಕ್ತರು ದೇವರ ದರ್ಶನ ಭಾಗ್ಯ ಸಿಗದೇ ಬೇಸರಗೊಂಡು ಮಠದ ಮುಂಭಾಗ ಪ್ರತಿಭಟಿಸಿ, ದರ್ಶನದ ಅವಕಾಶ ನೀಡುವಂತೆ ಕೆಲ ಕಾಲ ಬಿಗಿಪಟ್ಟು ಹಿಡಿದಿದ್ದರು. ಕೊನೆಗೂ ದರ್ಶನದ ಅವಕಾಶ ಸಿಗದ ಕಾರಣ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಬೇರೆ ದಾರಿ ಹಿಡಿದರು.

ಪ್ರತಿ ವರ್ಷವೂ ಸಂಕ್ರಾಂತಿಯಂದು ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆಯಲಾಗುತ್ತಿತ್ತು. ಈ ವರ್ಷ ದರ್ಶನಕ್ಕೆ ಅವಕಾಶ ನೀಡದಿರುವುದು ನಿರಾಸೆ ಮೂಡಿಸಿದೆ. ಕೊರೊನಾ ಕಾರಣವಾಗಿದ್ದರೆ ನಾವು ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಸೇರಿದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ದೇವರ ದರ್ಶನ ಪಡೆಯುತ್ತಿದ್ದೆವು. ದರ್ಶನಕ್ಕೆ ಅವಕಾಶವಿಲ್ಲದಿರುವ ಬಗ್ಗೆ ಮುಂಚಿತವಾಗಿ ಪ್ರಕಟಿಸಬೇಕಿತ್ತು. ಆಗ ನಾವು ಇಲ್ಲಿಗೆ ಬರುವ ಪ್ರಮೆಯವೇ ಇರುತ್ತಿರಲಿಲ್ಲ ಎಂದು ಪ್ರತಿಭಟನಾ ನಿರತ ಭಕ್ತರು ಆಕ್ಷೇಪಿಸಿದ್ದಾರೆ.

# ಜಗಳೂರಿನಲ್ಲಿ ಶಾಸಕ ಎಸ್‌ವಿಆರ್ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ



ಜಗಳೂರು, ಜ.15- ಶಾಸಕ ಎಸ್.ವಿ. ರಾಮಚಂದ್ರ ಅವರ ಹುಟ್ಟು ಹಬ್ಬದ ಅಂಗವಾಗಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಸುಮಾರು 50 ಜನ ರಕ್ತದಾನ ಮಾಡಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಆಯೋಜಕ ವಿಎಸ್‌ಎಸ್‌ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು ಮಾತನಾಡಿ, ರಕ್ತದಾನ ಶ್ರೇಷ್ಠವಾಗಿದ್ದು ಯುವಕರು ರಕ್ತದಾನಕ್ಕೆ ಮುಂದಾಗಬೇಕು ಎಂದರು.

ಸತತ ಮೂರನೇ ಬಾರಿ ಶಾಸಕ ಎಸ್.ವಿ. ರಾಮಚಂದ್ರ ಅವರ ಅಭಿಮಾನಿ ಬಳಗದಿಂದ ಸ್ವಯಂ ಪ್ರೇರಿತವಾಗಿ 50ಕ್ಕೂ ಅಧಿಕ ಯುವಕರು ರಕ್ತದಾನ ಮಾಡುತ್ತಿದ್ದು ತುರ್ತು ಸಂದರ್ಭದಲ್ಲಿ ರಕ್ತನಿಧಿ ಕೇಂದ್ರಗಳಿಂದ ರೋಗಿಗಳಿಗೆ ಸದುಪಯೋಗವಾಗುವ ಉದ್ದೇಶ ನಮ್ಮದಾಗಿದೆ. ಕೆಲ ಸಂದರ್ಭಗಳಲ್ಲಿ ರಕ್ತ ದೊರೆಯದೆ ಬಡರೋಗಿಗಳು ಪರದಾಡುವಂತಾಗುತ್ತದೆ. ವರ್ಷಕ್ಕೊಮ್ಮೆ ರಕ್ತದಾನ ಮಾಡಿದರೆ ವೈಯಕ್ತಿಕ ಆರೋಗ್ಯ ಸದೃಢವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷ ತಿಪ್ಪೇಸ್ವಾಮಿ ಸದಸ್ಯರಾದ ನವೀನ್ ಕುಮಾರ್, ಪಾಪಲಿಂಗಪ್ಪ, ಮುಖಂಡರಾದ ಸೂರ್ಯಕಿರಣ್, ಓಬಳೇಶ್, ಅಶೋಕ್, ನಾಗರಾಜ್ ಮರೇನಹಳ್ಳಿ, ಬಸವರಾಜ್, ಅಶೋಕ್ ಸೇರಿದಂತೆ ಇದ್ದರು.

ಚಲನಚಿತ್ರ ನಟ ಪುನೀತ್ ರಾಜಕುಮಾರ್ ಹರ ಜಾತ್ರಾ ಮಹೋತ್ಸವ ವೇದಿಕೆಗೆ ಆಗಮಿಸುತ್ತಿದ್ದಂತೆ, ಸಾರ್ವಜನಿಕರು ಶಿಳ್ಳೆ, ಕೇಕೆ ಹಾಕಿ ಜೈಕಾರದೊಂದಿಗೆ ಸ್ವಾಗತಿಸಿದರು. ಸಮಾರಂಭದಲ್ಲಿ ಯಾವುದೇ ರೀತಿಯ ಅವಘಡ ನಡೆಯದಂತೆ ಪೊಲೀಸ್ ಇಲಾಖೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರು. ಪುಟ್ಟ ಬಾಲಕ ಅರ್ಜುನ ಇಟ್ಟಿಗೆ ಪುನೀತ್ ರಾಜ್‌ಕುಮಾರ್ ಅವರ ಹಾಡು ಗಳನ್ನು ಹಾಡಿ ರಂಜಿಸಿದರು.



ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಆವರಣದಲ್ಲಿ ನಡೆಯುತ್ತಿರುವ ಹರಜಾತ್ರಾ ಮಹೋತ್ಸವದ ಎರಡನೇ ದಿನ ಯುವರತ್ನ ಸಮಾವೇಶವನ್ನು ಸ್ಪರ್ಶ ಫೌಂಡೇಶನ್ ಅಧ್ಯಕ್ಷೆ ಕು.ಸಂಯುಕ್ತಾ ಪಾಟೀಲ್ ಉದ್ಘಾಟಿಸಿದರು. ನಟ ಪುನಿತ್ ರಾಜ್ ಕುಮಾರ್ ಇತರರು ಉಪಸ್ಥಿತರಿದ್ದರು.

# ಸಮಾಜದಲ್ಲಿ ಪ್ರಗತಿ ಕಾಣಲು ಆಶೀರ್ವಾದ ಮುಖ್ಯ

## ಯುವ ಸಮಾವೇಶದಲ್ಲಿ ನಟ ಪುನೀತ್ ರಾಜ್‌ಕುಮಾರ್

ಎಂ. ಚಿದಾನಂದ ಕಂಚಿಕೇರಿ

ಹರಿಹರ, ಜ.15- ಧಾರ್ಮಿಕ ವಾಗಿ, ಸಾಮಾಜಿಕವಾಗಿ ಸಮಾಜದಲ್ಲಿ ಪ್ರಗತಿ ಕಾಣಲು ತಂದೆ-ತಾಯಿ ಮತ್ತು ಶ್ರೀಗಳ ಆಶೀರ್ವಾದ ಬಹು ಮುಖ್ಯವಾಗಿರುತ್ತದೆ ಎಂದು ಖ್ಯಾತ ಚಲನಚಿತ್ರ ನಟ ಪುನೀತ್ ರಾಜಕುಮಾರ್ ಹೇಳಿದರು.

ನಗರದ ಹೊರವಲಯದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಡೆಯುತ್ತಿರುವ ಹರ ಜಾತ್ರಾ ಮಹೋತ್ಸವ ಸಮಾರಂಭದ ಯುವ ಸಮಾವೇಶದಲ್ಲಿ ಪುನೀತ್ ಯುವ ರತ್ನ ಸಂದೇಶವನ್ನು ನೀಡಿದರು.

ಸಮಾಜದಲ್ಲಿ ಬಹು ಮುಖ್ಯವಾಗಿ ನಂಬಿಕೆ ಇರಬೇಕು. ನಮ್ಮ ಮನೆ, ಸಮಾಜದಲ್ಲಿ ಮತ್ತು ನೆರೆಹೊರೆಯಲ್ಲಿ ನಮ್ಮ ಮೇಲೆ ನಂಬಿಕೆ ಚೆನ್ನಾಗಿದ್ದರೆ ನಾವುಗಳು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗುತ್ತದೆ. ಪುಟ್ಟ ಸಸಿಯನ್ನು ರಕ್ಷಿಸಿ, ಪೋಷಿಸಿದರೆ ಅದು ದೊಡ್ಡ ಮರವಾಗಿ ಬೆಳೆಯುತ್ತದೆ. ಹಾಗೆ ಯುವಕರು ಸಣ್ಣದಾಗಿ ಮಾಡಿದ ಕೆಲಸ ಮುಂದೆ ದೊಡ್ಡದಾಗಿ ಅಭಿವೃದ್ಧಿ ಹೊಂದಲಿದೆ ಎಂಬ ಆಶಯವನ್ನು ಮನಸ್ಸಿನಲ್ಲಿ ಮೂಡಿಸಿಕೊಂಡು ಹೆಜ್ಜೆಗಳನ್ನು ಹಾಕಿದಾಗ ಜೀವನದಲ್ಲಿ ಯಶಸ್ಸು ಕಾಣಬಹುದು ಎಂದು ಹೇಳಿದರು.

ದಿಕ್ಸೂಚಿ ಭಾಷಣ ಮಾಡಿದ ಅವಧೂತ ವಿನಯ್ ಗುರೂಜೀ ಮಾತನಾಡಿ ಯಾವ ವ್ಯಕ್ತಿ ಲಿಂಗವನ್ನು ಧರಿಸುತ್ತಾರೆಯೋ ಆ ವ್ಯಕ್ತಿ ದೇವಸ್ಥಾನದಂತೆ. ಲಿಂಗವಂತರಿಗೆ ಸೂತಕ ಎಂಬುದು ಇಲ್ಲ. ಅಲ್ಲಮಪ್ರಭು ಸಮಾಜಕ್ಕೆ ಬೆಳಕನ್ನು ತೋರಿಸಿದರು. ಅಕ್ಕಮಹಾದೇವಿ ಊಟವನ್ನು ಬಡಿಸಿದರು. ಬಸವಣ್ಣನವರು ಜಾತಿಯ ಬೇರನ್ನು ಕಿತ್ತು, ಬಡವ ಬಲ್ಲಿದನೆಂಬ ನೀತಿಯನ್ನು ಬಿಟ್ಟು ಶ್ರೀಮಂತಿಕೆಯ ಅಹಂಕಾರ ಕಿತ್ತು ನಾವೆಲ್ಲ ಶಿವನ ಮಕ್ಕಳು ಎಂದು ಜಗತ್ತಿಗೆ ಒಳಿತನ್ನು ಮಾಡಿದರು.

ಶಿವತತ್ವದ ಮೂಲಕ ಮೂಢನಂಬಿಕೆ ಕಿತ್ತು ಹಾಕಿ, ಪ್ರಪಂಚದಲ್ಲಿನ ಅಂಧಕಾರವನ್ನು ತೊಳೆದು ಜ್ಞಾನದ ಜ್ಯೋತಿಯನ್ನು ಬೆಳಗಿಸಿದ್ದು ಬಸವಣ್ಣನವರು. ಸ್ವಾಭಿಮಾನದ ಕರ್ಮ ಯೋಗವನ್ನು ಮತ್ತು ಕಾಯಕದ ಪಾಠವನ್ನು ಹಾಗೂ ಅಧ್ಯಾತ್ಮಿಕ ಇಷ್ಟಲಿಂಗ ಪೂಜೆಯ ಪಾಠವನ್ನು ಮಾಡುವ ಮೂಲಕ ಸಮಾಜದಲ್ಲಿ ಸುಧಾರಣೆ ತರುವ ಕೆಲಸವನ್ನು ಬಸವಣ್ಣ ಮಾಡಿದರು.

ಶಾಸ್ತ್ರ ಅಂದರೆ ಹತ್ತು ಕುರುಡು ವ್ಯಕ್ತಿಗಳು ಅವರ ವಿವೇಚನೆಗೆ ತಕ್ಕಂತೆ ಬರೆದಾಗ ಅದು ಒಂದು ಪುಸ್ತಕವಾಗುತ್ತದೆ. ಜೀವಂತ ಅನುಭವವನ್ನು ಕಲಿಯಬೇಕಾದರೆ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭುಗಳಿಂದ ಮಾತ್ರ ಸಾಧ್ಯ. ಹಿಂದಿನ ಕಾಲದಲ್ಲಿ ಎಡಗೈ ಬಹು ಕೆಟ್ಟದಾದ ಕೈ ಎಂಬ ಪದ್ಧತಿ ಇತ್ತು. ಆದರೆ ಇದು ಶಿವನ ವಾಯುಭಾಗ. ಅದರಲ್ಲಿ ಇಷ್ಟಲಿಂಗ ಇಟ್ಟು ಅದು ಶಿವ ಶಕ್ತಿ ಸಂಯೋಗವಾಗಬೇಕು. ಅದನ್ನು ತೋರಿಸಿದ ಬಸವಣ್ಣ ಅದರಿಂದ ನಿನ್ನ ಆತ್ಮಲಿಂಗವನ್ನು ನೋಡಿಕೊಳ್ಳಿ ಎಂದು ತಿಳಿಸಿದರು.

ಈ ಸಮುದಾಯದ ಹೆಣ್ಣು ಮಕ್ಕಳು ಸಹ ಅಷ್ಟೇ ಪ್ರಭಾವಿಗಳು. ಖಡ್ಗವನ್ನು ಹಿಡಿದರೆ ಪ್ರಪಂಚವನ್ನು ಬದಲಾವಣೆ ಮಾಡುತ್ತಾಳೆ, ಲೇಖನಿ ಹಿಡಿದರೆ ಮನುಷ್ಯನ ಅಜ್ಞಾನವನ್ನು ಹೋಗಲಾಡಿಸುತ್ತಾರೆ. ಗೃಹಿಣಿ ಅಂದರೆ ಗೃಹ ಲಕ್ಷ್ಮಿ ಆಗುತ್ತಾರೆ ಎಂದರು.

ಹರ ಜಾತ್ರೆಯು ಜಾತ್ರೆ ಆಚರಣೆಗೆ ಮಾತ್ರ ಸೀಮಿತವಾಗದೆ ಎಲ್ಲರೂ ಪ್ರತಿದಿನ ಇಷ್ಟಲಿಂಗ ಪೂಜೆ ಮಾಡಬೇಕು. ತಂದೆ-ತಾಯಿಯನ್ನು ವೃದ್ಧಾಶ್ರಮಕ್ಕೆ ಕಳುಹಿಸುವುದಿಲ್ಲ. ಜಾತಿ ಎಂಬ ಬೇಲಿಯನ್ನು ಕಿತ್ತು ಹಾಕಿ ಜಗತ್ತನ್ನು ಶಿವಮಯ ಮಾಡುತ್ತೇನೆ ಎಂದು ಅಂದುಕೊಂಡು ಮಾತ್ರ ಸಮಾರಂಭದಲ್ಲಿ ಭಾಗವಹಿಸಿದ್ದು ಸಾರ್ಥಕವಾಗುತ್ತದೆ ಎಂದರು.

ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಶ್ರೀಗಳು ಯುವ ಸಮಾವೇಶಕ್ಕೆ ಆಗಮಿಸಿದ ಪುನೀತ್ ರಾಜ್‌ಕುಮಾರ್, ಅವಧೂತ ವಿನಯ್ ಗುರೂಜೀ, ಸೇರಿದಂತೆ ಸಮಾವೇಶ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ತಮ್ಮ ಭಾಷಣದ ಮೂಲಕ ಆಶೀರ್ವಾದ ಮಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹರ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಬಿ. ಲೋಕೇಶ್ ವಹಿಸಿದ್ದರು.

ಆಧುನಿಕ ಕೃಷಿ ಯುವ ನಾಯಕ ಶಶಿ ಕುಮಾರ್, ರಾಣೇಬೆನ್ನೂರು ಶಾಸಕ ಅರುಣ್ ಕುಮಾರ್, ಮುನಿರತ್ನ, ದಾವಣಗೆರೆ ಮಹಾಪೌರ ಬಿ.ಜಿ. ಅಜಯಕುಮಾರ್, ನಿಷಾ ಯೋಗೀಶ್ವರ್, ಸಂಯುಕ್ತ ಪಾಟೀಲ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಮೋಹನ್ ಲಿಂಬಿಕಾಯಿ, ರುದ್ರೇಶ್, ಬಸವರಾಜ್ ದಿಂಡೂರು, ಪಂಚಮಸಾಲಿ ರಾಜ್ಯ. ಮಹಿಳಾ ಘಟಕದ ಅಧ್ಯಕೆ ನಾಗರತ್ನ, ಬಾವಿಕಟ್ಟಿ, ಬಿ.ಸಿ. ಉಮಾಪತಿ, ಬಾವಿ ಬೆಟ್ಟಪ್ಪ, ಯುವ ನಾಯಕ ಹೆಚ್.ಎಸ್. ನಾಗರಾಜ್, ಜಿಪಂ ಸದಸ್ಯ ತೇಜಸ್ವಿ ಪಟೇಲ್, ಸಂತೋಷ ಪಟೇಲ್, ಶ್ರೀಕಾಂತ ದುಂಡಿಗೌಡ್ರು, ಮಲ್ಲಿಕಾರ್ಜುನ ಹಾವೇರಿ, ಗೀತಾ ರವಿಂದ್ರ, ಮಂಜುನಾಥ ನವಲಗುಂದ ಇತರರು ಹಾಜರಿದ್ದರು.

# ಅಕ್ರಮ ನೀರಾ ಸಂಗ್ರಹಣೆಯ ಆರೋಪಿಗೆ ಜೈಲು ಶಿಕ್ಷೆ

ದಾವಣಗೆರೆ, ಜ.15- ಅಕ್ರಮವಾಗಿ ಸಂಗ್ರಹಿಸಿಡಲಾದ ನೀರಾ ಪ್ರಕರಣದ ಆರೋಪಿಗೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ 2ನೇ ನ್ಯಾಯಾಲಯವು ಒಂದು ವರ್ಷ ಜೈಲು ಶಿಕ್ಷೆ ಹಾಗೂ ರೂ.10,000 ದಂಡ ವಿಧಿಸಿ ಜ.5 ರಂದು ತೀರ್ಪು ನೀಡಿದೆ.

2015 ರ ಜುಲೈ ಮಾಹೆಯಲ್ಲಿ ದಾವಣಗೆರೆ ವಲಯ 2 ರ ಅಬಕಾರಿ ಉಪ ನಿರೀಕ್ಷಕ ಎಂ. ದೇವೇಂದ್ರನಾಯ್ಕ ಅವರು ದಾವಣಗೆರೆ ತಾಲ್ಲೂಕು ನೇರ್ಲಿಗೆ ಗ್ರಾಮದ ಪ್ರಕಾಶ್, 38 ವರ್ಷ ಅವರು ಮಾರಾಟದ ಉದ್ದೇಶಕ್ಕಾಗಿ ಅಕ್ರಮವಾಗಿ ಸಂಗ್ರಹಿಸಲಾಗಿದ್ದ 25 ಲೀಟರ್ ನೀರಾವನ್ನು ಪತ್ತೆ ಹಚ್ಚಿ ಪ್ರಕರಣ ದಾಖಲಿಸಿದ್ದರು. ಅಬಕಾರಿ ಉಪ ನಿರೀಕ್ಷಕ ಹೆಚ್.ಕೃಷ್ಣಮೂರ್ತಿ ಪ್ರಕರಣದ ಪೂರ್ಣ ತನಿಖೆ ನಡೆಸಿ, ಅಂತಿಮ ದೋಷಾರೋಪಣಾ ಪಟ್ಟಿಯನ್ನು 2ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣ ಕುರಿತು ಸುದೀರ್ಘ ವಿಚಾರಣೆ ನಡೆದು ಜ.5 ರಂದು 2ನೇ ಜೆಎಂಎಫ್‌ಸಿ ನ್ಯಾಯಾಧೀಶ ಕಿರಣ್.ಪಿ.ಎಂ.ಪಾಟೀಲ್ ಅವರು ಆರೋಪಿ ಪ್ರಕಾಶ್‌ಗೆ ಒಂದು ವರ್ಷ ಜೈಲು ಮತ್ತು ರೂ.10 ಸಾವಿರ ದಂಡ ವಿಧಿಸಿ ಅಂತಿಮ ತೀರ್ಪು ನೀಡಿ ಆದೇಶಿಸಿರುತ್ತಾರೆ. ಈ ಪ್ರಕರಣದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕ ವಸಂತ ಸರ್ಕಾರದ ಪರವಾಗಿ ವಾದ ಮಂಡಿಸಿರುತ್ತಾರೆ.


ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು




ಇಂದು ಜನ್ಮದಿನ ಆಚರಿಸಿಕೊಳ್ಳುತ್ತಿರುವ ಸ್ನೇಹ ಜೀವಿಗಳು, ಸರಳ-ಸಜ್ಜನಿಕೆಯ ರಾಜಕಾರಣಿಗಳು, ಸಮಾಜ ಸೇವಕರು, ಕ್ರೀಡಾಭಿಮಾನಿಗಳು, ದೀನ - ದುರ್ಬಲರ ಕಷ್ಟಗಳಿಗೆ ಸ್ಪಂದಿಸಿ, ಜನ ಮನ ಗೆದ್ದಿರುವ ನಮ್ಮೆಲ್ಲರ ಪ್ರೀತಿಯ

ಡಾ|| ಎಸ್.ಎಸ್. ಬಕ್ಕೇಶ್

ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್, ಶಾಮನೂರು ಷುಗರ್ಸ್, ದುಗ್ಗಾವತಿ ಇವರಿಗೆ ಮತ್ತು ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರೂ ಆದ

ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ

ಅವರುಗಳಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ, ಶ್ರೀಯುತರುಗಳಿಗೆ ಭಗವಂತನು ಆಯುಷ್ಯ, ಆರೋಗ್ಯ ಭಾಗ್ಯವನ್ನು ಸದಾ ನೀಡಲಿ ಎಂದು ಪ್ರಾರ್ಥಿಸುತ್ತೇವೆ.




ವಿ. ಸಿದ್ದೇಶ್
ವಿನಾಯಕ ರೈಸ್ ಮಿಲ್

ಶುಭ ಕೋರುವವರು

♦ ಕರೂರು ನಾಗರಾಜಪ್ಪ ♦ ಶ್ರೀಮತಿ ಅಶ್ವಿನಿ ಪ್ರಶಾಂತ್
♦ ಶ್ರೀಮತಿ ಅನುಷಾ ಸಿದ್ದೇಶ್ ♦ ಕುಮಾರಸ್ವಾಮಿ ತೊಗಲೇರಿ
♦ ಜಿ.ಬಿ. ಉಮೇಶ್ ♦ ಜಿ.ಎಸ್. ವೀರಣ್ಣ ♦ ತಾಳದ ರಾಜಣ್ಣ
♦ ಕೆ.ಎಸ್. ಮಂಜುನಾಥ ಕರೇಶಿವಪ್ಪ ♦ ಪ್ರಕಾಶ್‌ಮಾಗಿ ♦ ಬಾಬು ♦ ವಿನಯ್
♦ ಹೊನ್ನರಾಜು ದಾದಾಪೀರ್ ಮತ್ತು ♦ ವಿನಾಯಕ ರೈಸ್ ಮಿಲ್ ಸಿಬ್ಬಂದಿ ವರ್ಗ



ಪ್ರಶಾಂತ್ ಎನ್.ಸಿ (ಸಿ.ವಿ. ರಾಮನ್ ಕಾಲೇಜ್), ವಿ. ಪ್ರಕಾಶ್, ಹೆಚ್. ಅನಂತಣ್ಣ (ವರ್ತಕರು), ಜಿ. ಎನ್. ಕೋಟೆಪ್ಪ, ಜೆ.ಕೆ. ಮಹೇಶ್, ಮಲ್ಲಿಕಾರ್ಜುನ್



ಜಿ.ಎನ್. ರವಿಕುಮಾರ್ ಪೂಜಾ ಸ್ಟೀಲ್ಸ್, ಹೆಚ್. ಚಂದ್ರಪ್ಪ, ಆಂಜನೇಯ ಬಿ.ಹೆಚ್. ಮಂಜುನಾಥ ಮಾಜಿ ಸೈನಿಕರು, ಉಮೇಶಣ್ಣ ಗಣೇಶ ಹೋಟೆಲ್, ಎಸ್. ನೀಲಕಂಠಪ್ಪ ರಿಯಲ್ ಎಸ್ಟೇಟ್, ಕೆ. ಗಣೇಶ್ ರಾವ್



ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ. ॐ ಜೈ ಸಹಕಾರ

ಜಂಗಮ ಸೌಹಾರ್ದ ಸಹಕಾರಿ ನಿಯಮಿತ
16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ-577 002.

2021-2026ನೇ ಸಾಲಿನ ಆಡಳಿತ ಮಂಡಳಿ ಚುನಾವಣೆ

ಮಾನ್ಯ ಮತದಾರ ಬಂಧುಗಳೇ,

ಸಹಕಾರಿಯ ಅಭಿವೃದ್ಧಿ, ಗ್ರಾಹಕರ ಹಿತ, ಠೇವಣಿದಾರರ ಹಣಕ್ಕೆ ಭದ್ರತೆ, ದಕ್ಷ-ಪ್ರಾಮಾಣಿಕ ಮತ್ತು ಪಾರದರ್ಶಕ ಆಡಳಿತ ನೀಡುವುದರ ಜೊತೆಗೆ ಹಣಕಾಸೇತರ ಉದ್ದೇಶಗಳನ್ನು ಈಡೇರಿಸುವುದು ನಮ್ಮ ಗುರಿ ಹಾಗೂ ಉದ್ದೇಶಗಳಾಗಿರುತ್ತವೆ. ಈ ಹಿಂದೆ ಸಹಕರಿಸಿದಂತೆ ಪ್ರಸ್ತುತ ಚುನಾವಣೆಯಲ್ಲಿ ತಮ್ಮ ಅಮೂಲ್ಯವಾದ ಮತಗಳನ್ನು ಈ ಕೆಳಕಂಡ 10 ಅಭ್ಯರ್ಥಿಗಳಿಗೆ ನೀಡಿ ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇವೆ.

ಪ್ರೊ. ವೀರಯ್ಯ ಎಸ್.ಎಂ. ಗ್ರೂಪ್

ಇಂತಿ ತಮ್ಮ ಸೇವಾಕಾಂಕ್ಷಿಗಳು,

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು | ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|---|---|---|---|
| 2 | ಇಂದುಧರ್ ನಿಶಾನಿಮಠ್ ಮುದ್ರಣಾಲಯ ಮಾಲೀಕರು ಸಾಮಾನ್ಯ | | | 11 | ಪ್ರೇಮ ಜಿ.ಎಂ. ಸಮಾಜ ಸೇವಕರು ಮಹಿಳಾ ಮೀಸಲು | | |
| 6 | ಚಂದ್ರಶೇಖರಯ್ಯ ಬಿ.ಎಂ. ರೈಸ್‌ಮಿಲ್ ಮಾಲೀಕರು ಸಾಮಾನ್ಯ | | | 12 | ಬಕ್ಕೇಶ್ವರಸ್ವಾಮಿ ಕೆ.ಎಂ. ನಿ. ರೆವಿನ್ಯೂ ಇನ್ಸ್‌ಪೆಕ್ಟರ್ ಸಾಮಾನ್ಯ | | |
| 7 | ಜಯದೇವಯ್ಯ ಸಿ.ಎಂ. ಜಮೀನ್ದಾರರು ಗುಮ್ಮನೂರು ಸಾಮಾನ್ಯ | | | 13 | ಬಸವರಾಜಯ್ಯ ಎನ್.ಎಂ. ನಿವೃತ್ತ ಶಿರಸ್ತೇದಾರರು ನ್ಯಾಯಾಂಗ ಇಲಾಖೆ ಸಾಮಾನ್ಯ | | |
| 8 | ಡಾ|| ಜ್ಞಾನೇಶ್ವರ ಎಲ್.ಎಂ. ಪ್ರಾಂಶುಪಾಲರು ಸಾಮಾನ್ಯ | | | 17 | ವೀರಯ್ಯ ಬಸಯ್ಯ ಮಳೇಮಠ ನಿವೃತ್ತ ತಾಲ್ಲೂಕು ಯೋಜನಾಧಿಕಾರಿ ಸಾಮಾನ್ಯ | | |
| 10 | ನಳಿನ ಕೆ.ಎಸ್. ಡಾ|| ಎಸ್.ಹೆಚ್. ಸಿದ್ಧಲಿಂಗಸ್ವಾಮಿಯವರ ಸೊಸೆ ಮಹಿಳಾ ಮೀಸಲು | | | 18 | ಪ್ರೊ. ವೀರಯ್ಯ ಎಸ್.ಎಂ. ವಿಶ್ರಾಂತ ಪ್ರಾಚಾರ್ಯರು ಸಾಮಾನ್ಯ | | |

ಮತದಾನ ದಿನಾಂಕ : 17-1-2021ನೇ ಭಾನುವಾರ
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00 ರ ವರೆಗೆ
ಸ್ಥಳ : ಸದ್ಯೋಜಾತ ಸ್ವಾಮಿಗಳ ಮಠ, 'ಶಿವಾಚಾರ್ಯ ನಿಕೇತನ' ಎಂ.ಸಿ.ಸಿ. 'ಬಿ' ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ.

ವಿಶೇಷ ಸೂಚನೆ : ಮತದಾನಕ್ಕೆ ಬರುವಾಗ ಸಹಕಾರಿಯ ಗುರುತಿನ ಚೀಟಿಯನ್ನು ತರಲು ಕೋರಿದೆ.

ಸಂಪರ್ಕಕ್ಕಾಗಿ : 94497 29744, 94496 81727, 93410 11199

ಸ್ವಚ್ಛ, ದಕ್ಷ, ಪಾರದರ್ಶಕ, ಆಡಳಿತ ಮತ್ತು ಅಭಿವೃದ್ಧಿಗೆ ನಿಮ್ಮ ಮತ


ಹುಟ್ಟು ಹಬ್ಬದ
ಹಾರ್ದಿಕ ಶುಭಾಶಯಗಳು
ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರು,
ರಾಷ್ಟ್ರೀಯ ಮಾಜಿ ಉಪಾಧ್ಯಕ್ಷರು, ಬಿಜೆಪಿ ಎಸ್.ಟಿ. ಮೋರ್ಚಾ, ಸರಳ, ಸಜ್ಜನಿಕೆಯ ರಾಜಕಾರಣಿಗಳು,
ನೂತನ ಕರ್ನಾಟಕ ಮಹರ್ಷಿ ಶ್ರೀ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ
ನೂತನ ಅಧ್ಯಕ್ಷರಾಗಿರುವ ಕ್ರೀಡಾಭಿಮಾನಿಗಳು, ಕೋಟಿ ಕೋಟಿ ಅನುದಾನ ತಂದು ಅಭಿವೃದ್ಧಿ
ಹರಿಕಾರರಾಗಿರುವ ಜನರ ಕಾಳಜಿಯ ನಮ್ಮ ನೆಚ್ಚಿನ ನಾಯಕರಾದ
ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ
ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ
ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯವನ್ನು ಸದಾ ನೀಡಲಿ
ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಎನ್.ಆರ್. ತಿಪ್ಪೇರುದ್ರಮೂರ್ತಿ
ಬಿಜೆಪಿ ಮುಖಂಡರು,
ಜಗಳೂರು ತಾ.
ಬಸವರಾಜ ಎಸ್.ಕೆ.
ಬಿಜೆಪಿ ಮುಖಂಡರು, ಬಿದರಕೆರೆ,
ಜಗಳೂರು ತಾ.


ಭಾವಪೂರ್ಣ ಶ್ರದ್ಧಾಂಜಲಿ
ಜಗಳೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರೂ ಆತ್ಮೀಯರಾದ
ಟಿ. ಗುರುಸಿದ್ದನಗೌಡರ ಸೊಸೆ ಹಾಗೂ "ಆರೈಕೆ" ಆಸ್ಪತ್ರೆಯ ವೈದ್ಯರಾದ
ಡಾ॥ ಟಿ.ಜಿ. ರವಿಕುಮಾರ್ ಅವರ ಧರ್ಮಪತ್ನಿಯವರಾದ
ಶ್ರೀಮತಿ ಪ್ರೀತಿ ರವಿಕುಮಾರ್
ಮತ್ತು ಅವರ ಸ್ನೇಹಿತೆಯರು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವುದು ತುಂಬಾ
ನೋವಿನ ಸಂಗತಿ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ,
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಎಸ್.ವಿ. ರಾಮಚಂದ್ರ, ಶಾಸಕರು ಮತ್ತು
ಅಭಿಮಾನಿ ಬಳಗ ಜಗಳೂರು
ವಿಧಾನಸಭಾ ಕ್ಷೇತ್ರ, ಜಗಳೂರು.


ಬರದನಾಡಿನ ಭಗೀರಥ, ಭದ್ರಾ ಮೇಲ್ದಂಡೆ ಯೋಜನೆಯ ರುವಾರಿ,
ಜಗಳೂರು ವಿಧಾನಸಭಾಕ್ಷೇತ್ರ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆ
ಪಣತೊಟ್ಟು ಹಗಲಿರುಳು ಶ್ರಮಿಸುತ್ತಿರುವ ಧೀಮಂತ ನಾಯಕ,
ತಾಲ್ಲೂಕಿನ ಶೋಷಿತ, ಹಿಂದುಳಿದ ಸಮುದಾಯದ ಧ್ವನಿ, ನಿರ್ಗತಿಕರ
ಪಾಲಿನ ಆಶಾಕಿರಣ, ಜಗಳೂರು ಕ್ಷೇತ್ರದ ಜನಮೆಚ್ಚಿದ ರಾಜಹುಲಿ,
ಧ್ವನಿ ಇಲ್ಲದ ಸಮುದಾಯಕ್ಕೆ ಧ್ವನಿಯಾದ ದಣಿವರಿಯದ ನಾಯಕ
ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು
ತಾಲ್ಲೂಕಿನ ಜನ ಮೆಚ್ಚಿದ ಶಾಸಕರಾದ
ಸನ್ಮಾನ್ಯ ಶ್ರೀ.ಎಸ್.ವಿ.ರಾಮಚಂದ್ರ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶ್ರೀಮತಿ ಶಾಂತಕುಮಾರಿ ಶಶಿಧರ್
ಅಧ್ಯಕ್ಷರು, ಜಿಲ್ಲಾ ಪಂಚಾಯತ್, ದಾವಣಗೆರೆ
ದೊಣ್ಣೆಹಳ್ಳಿ ಕ್ಷೇತ್ರ, ಜಗಳೂರು ತಾಲ್ಲೂಕು.
ಜಿ.ಆರ್. ಇಂದ್ರೇಶ್
ಅಧ್ಯಕ್ಷರು, ತಾಲ್ಲೂಕು ಬಿ.ಜೆ.ಪಿ. ಓ.ಬಿ.ಸಿ. ಮೋರ್ಚಾ


ಜನ್ಮದಿನದ ಶುಭಾಶಯಗಳು...
ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಬಿಜೆಪಿ ಎಸ್ಟಿ
ಮೋರ್ಚಾ ರಾಷ್ಟ್ರೀಯ ಉಪಾಧ್ಯಕ್ಷರು, ಹಟ್ಟಿ ಚಿನ್ನದ ಗಣಿ ನಿಗಮದ
ಮಾಜಿ ಅಧ್ಯಕ್ಷರು, ರಾಜ್ಯ ಮಹರ್ಷಿ ಶ್ರೀ ವಾಲ್ಮೀಕಿ ಪರಿಶಿಷ್ಟ
ಪಂಗಡಗಳ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರು "ಬರದ ನಾಡಿನ
ಭಗೀರಥ" ಸರಳ-ಸಜ್ಜನಿಕೆಯ ರಾಜಕಾರಣಿಗಳೂ, ದೀನ-ದಲಿತರ
ಆಶಾಕಿರಣ, ನಮ್ಮೆಲ್ಲರ ನೆಚ್ಚಿನ ನಾಯಕರೂ ಆದ
ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ
ಅವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರುತ್ತಾ
ಶ್ರೀಯುತರಿಗೆ ಭಗವಂತನು ಆಯುಷ್ಯ-ಆರೋಗ್ಯ
ಭಾಗ್ಯ ಸದಾ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಹೆಚ್.ಸಿ. ಮಹೇಶ್
ಅಧ್ಯಕ್ಷರು, ಬಿಜೆಪಿ ಮಂಡಲ
ವಿಧಾನಸಭಾ ಕ್ಷೇತ್ರ ಜಗಳೂರು
ಡಿ.ವಿ. ನಾಗಪ್ಪ
ಮಾಜಿ ಅಧ್ಯಕ್ಷರು, ಬಿಜೆಪಿ ಮಂಡಲ
ವಿಧಾನಸಭಾ ಕ್ಷೇತ್ರ ಜಗಳೂರು
ಚಟ್ನಹಳ್ಳಿ ರಾಜಣ್ಣ
ಬಿಜೆಪಿ ಹಿರಿಯ
ಮುಖಂಡರು
ಹೆಚ್. ನಾಗರಾಜ್
ಜಿ.ಪಂ. ಮಾಜಿ ಸದಸ್ಯರು, ಜಿಲ್ಲಾ ಪ್ರಧಾನ
ಕಾರ್ಯದರ್ಶಿ, ಬಿಜೆಪಿ, ದಾವಣಗೆರೆ.
ಬಿ. ರವಿಕುಮಾರ್
ಮಾಜಿ ಅಧ್ಯಕ್ಷರು, ಬಿಜೆಪಿ
ಯುವ ಘಟಕ ಜಗಳೂರು.

## ಸಿದ್ದರಾಮಯ್ಯನವರನ್ನು ಸ್ವಾಗತಿಸಿದ ಶಾಮನೂರು ಮಲ್ಲಿಕಾರ್ಜುನ್



ದಾವಣಗೆರೆ, ಜ.14- ಹರಿಹರದಲ್ಲಿ ಆಯೋಜಿಸಲಾಗಿದ್ದ ಹರ ಜಾತ್ರೆ ಮತ್ತು ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಸಿದ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಆಹ್ವಾನಿಸಿದರು.

ಇದೇ ವೇಳೆ ಮಾಜಿ ಸಚಿವ ಎಂ.ಬಿ.ಪಾಟೀಲ್ ಅವರನ್ನೂ ಮಲ್ಲಿಕಾರ್ಜುನ್ ಅವರು ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಅಬ್ದುಲ್ ಜಬ್ಬಾರ್, ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ದಿನೇಶ್ ಕೆ.ಶೆಟ್ಟಿ, ಶಾಮನೂರು ಟಿ.ಬಸವರಾಜ್, ಸೈಯದ್ ಸೈಫುಲ್ಲಾ, ಕೆಂಗೋ ಹನುಮಂತಪ್ಪ, ಕೆ.ಎಸ್.ಬಸವಂತಪ್ಪ, ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯ ದೇವರಮನೆ ಶಿವಕುಮಾರ್, ಅಬ್ದುಲ್ ಲತೀಫ್, ಕೆ.ಚಮನ್ ಸಾಬ್, ಜಿ.ಡಿ.ಪ್ರಕಾಶ್, ವಿನಾಯಕ ಪೈಲ್ವಾನ್, ಪಾಲಿಕೆಯ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳು ಅಯೂಬ್ ಪೈಲ್ವಾನ್, ಅನಿತಾ ಬಾಯಿ ಮಾಲತೇಶ್, ಸುಷ್ಮಾ ಪಾಟೀಲ್ ಮತ್ತು ಇತರರು ಹಾಜರಿದ್ದರು.

## ಸರ್ಕಾರ – ರೈತರ ನಡುವೆ ಮುಗಿಯದ ಮಾತುಕತೆ

**ಹತ್ತನೇ ಸುತ್ತಿನ ಮಾತುಕತೆಗೆ ಒಂಭತ್ತನೇ ಸುತ್ತಿನಲ್ಲಿ ನಿರ್ಧಾರ**


ನವದೆಹಲಿ, ಜ. 15 – ಪ್ರತಿಭಟನಾ ನಿರತ ರೈತರ ಜೊತೆ ಕೇಂದ್ರ ಸರ್ಕಾರ ನಡೆಸಿದ ಒಂಭತ್ತನೇ ಸುತ್ತಿನ ಮಾತುಕತೆಯೂ ವಿಫಲವಾಗಿದ್ದು, ಹತ್ತನೇ ಸುತ್ತಿನ ಮಾತುಕತೆ ಜನವರಿ 19ರಂದು ನಡೆಸಬೇಕು ಎಂದಷ್ಟೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿದೆ.

ರೈತರು ಅನೌಪಚಾರಿಕ ಗುಂಪು ರಚಿಸಿಕೊಂಡು ಮೂರೂ ಕೃಷಿ ಕಾಯ್ದೆಗಳ ತಿದ್ದುಪಡಿಗೆ ಸ್ಪಷ್ಟ ಪ್ರಸ್ತಾಪ ರೂಪಿಸಬೇಕೆಂದು ಸರ್ಕಾರ ಕೇಳಿದೆ. ಆದರೆ, ಮೂರು ಕಾಯ್ದೆಗಳನ್ನು ಸಂಪೂರ್ಣವಾಗಿ ವಾಪಸ್ ಪಡೆಯಬೇಕೆಂದು ರೈತರು ಒತ್ತಾಯಿಸಿದ್ದಾರೆ.

ಪ್ರತಿಭಟನಾ ನಿರತ 41 ರೈತ ಸಂಘಟನೆಗಳು ಹಾಗೂ ಕೇಂದ್ರ ಸರ್ಕಾರದ ಮೂವರು ಸಚಿವರ ನಡುವೆ ಐದು ಗಂಟೆ ಕಾಲ ಚರ್ಚೆ ನಡೆಯಿತು. ಆದರೆ, ವಿಗ್ಯಾನ ಭವನದಲ್ಲಿ ನಡೆದ ಒಂಬತ್ತನೇ ಸುತ್ತಿನಲ್ಲಿ ಯಾವುದೇ ಬೆಳವಣಿಗೆ ಕಾಣಲು ಸಾಧ್ಯವಾಗಲಿಲ್ಲ. ಮುಂದಿನ ಮಂಗಳವಾರ ಮತ್ತೆ ಸಭೆ ನಡೆಸಲು ಉಭಯರು ನಿರ್ಧರಿಸಿದ್ದಾರೆ.

ಸರ್ಕಾರ ಮೃದುತ್ವ ಹೊಂದಿದೆ ಹಾಗೂ ರೈತರೂ ಸಹ ಇದೇ ಧೋರಣೆ ಹೊಂದಬೇಕು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ. ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿ ಮೊದಲ ಸಭೆ ನಡೆಸಲಿರುವ ದಿನವೇ ಸರ್ಕಾರ ಹಾಗೂ ರೈತರ ನಡುವಿನ ಮಾತುತೆಯ ದಿನಾಂಕ ನಿಗದಿ ಪಡಿಸಿರುವುದು ಆಸಕ್ತಿಕರವಾಗಿದೆ. ಮರು ದಿನವೇ ಸುಪ್ರೀಂ ಕೋರ್ಟ್ ಗಣರಾಜ್ಯೋತ್ಸವದ ದಿನದಂದು ರೈತರು ಟ್ರ್ಯಾಕ್ಟರ್ ಸಮಾವೇಶ ನಡೆಸುವ ಬಗ್ಗೆ ವಿಚಾರಣೆ ನಡೆಸಲಿದೆ.

## ಮೃತರಿಗೆ ಪ್ರಧಾನಿ ಮೋದಿ ಸಂತಾಪ



ಧಾರವಾಡ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ನಗರದ ಮಹಿಳೆಯರು ಮೃತಪಟ್ಟಿರುವುದಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ದುಃಖಿತಪ್ತ ಕುಟುಂಬಗಳ ನೋವಿನಲ್ಲಿ ನಾನೂ ಭಾಗಿಯಾಗುವುದಾಗಿ ಟ್ವೀಟ್ ಮೂಲಕ ಹೇಳಿರುವ ಪ್ರಧಾನಿ, ಅಪಘಾತದಲ್ಲಿ ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.

ಇಟ್ಟಿಗಟ್ಟಿಯ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿರುವ ಭೀಕರ ಅಪಘಾತದಲ್ಲಿ ಸಾವುಗಳು ಸಂಭವಿಸಿರುವ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.

ಘಟನೆಯ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅಪಘಾತದಲ್ಲಿ ಗಾಯಗೊಂಡವರು ಶೀಘ್ರದಲ್ಲಿ ಗುಣಮುಖರಾಗಲಿ ಎಂದು ಪ್ರಾರ್ಥಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

## ಭೀಕರ ಅಪಘಾತದಲ್ಲಿ ಶಾಲಾ ಗೆಳತಿಯರ ನಿಧನ : ಗಣ್ಯರ ಸಂತಾಪ

ದಾವಣಗೆರೆ, ಜ.15- ಧಾರವಾಡ ಬಳಿ ಇಂದು ಬೆಳಿಗ್ಗೆ ಸಂಭವಿಸಿದ ಭೀಕರ ಅಪಘಾತದಲ್ಲಿ ನಗರದ ಶಾಲಾ ಗೆಳತಿಯರು ದುರ್ಮರಣಕ್ಕಿಡಾಗಿದ್ದು, ಎಲ್ಲರ ನಿಧನಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ನಗರ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ವೀರಶೈವ ಸಮಾಜದ ಮುಖಂಡ ಜೆ. ಸೋಮನಾಥ್ ಅವರುಗಳು ಮೃತರ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ.

**ಸಂಸದರು :** ರಸ್ತೆ ಅಪಘಾತದಿಂದಾಗಿ ಉಂಟಾಗಿರುವ ಪ್ರಾಣಹಾನಿ ಅತ್ಯಂತ ನೋವಿನ ಸಂಗತಿ. ಈ ದುಃಖದ ಸಮಯದಲ್ಲಿ ಕುಟುಂಬಗಳೊಂದಿಗೆ ತಾವು ಸದಾ ಇದ್ದೇವೆ ಎಂದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ತಿಳಿಸಿದ್ದಾರೆ.

ಅಪಘಾತದಲ್ಲಿ ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಅವರು ದೇವರಲ್ಲಿ ಪ್ರಾರ್ಥಿಸಿದ್ದಾರೆ.

**ಉಸ್ತುವಾರಿ ಸಚಿವರು :** ರಸ್ತೆ ಅಪಘಾತದಲ್ಲಿ ದುರ್ಮರಣಕ್ಕೀಡಾದ ಎಲ್ಲರಿಗೂ ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜು ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಇಂದು ವಕೀಲರ ಸಂಘಕ್ಕೆ ಚುನಾವಣೆ

ದಾವಣಗೆರೆ ವಕೀಲರ ಸಂಘದ ಆಡಳಿತ ಮಂಡಳಿಗೆ ಇಂದು ಚುನಾವಣೆ ನಡೆಯಲಿದ್ದು, ಬೆಳಿಗ್ಗೆ 11.30 ರಿಂದ ಸಂಜೆ 5.30 ರವರೆಗೆ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದ ಭವನದಲ್ಲಿ ಮತದಾನ ನಡೆಯಲಿದೆ. ನಂತರ ಸಂಜೆ 6.30ರಿಂದ ಮತ ಎಣಿಕೆ ಮಾಡಿ ಫಲಿತಾಂಶ ಪ್ರಕಟಿಸಲಾಗುವುದು ಎಂದು ಹಿರಿಯ ವಕೀಲರೂ ಆಗಿರುವ ಚುನಾವಣಾಧಿಕಾರಿ ಎಲ್. ದಯಾನಂದ್, ಸಹ ಚುನಾವಣಾಧಿಕಾರಿಗಳಾದ ಡಿ.ಹೆಚ್.ರಾಜು, ಹರ್ಷದ್, ಹೆಚ್.ಶಿವಣ್ಣ ತಿಳಿಸಿದ್ದಾರೆ.

**SCIENCE ACADEMY (R.)**
(A UNIQUE CENTRE FOR P.U. CLASSES)
# 307/2B, 1st FLOOR, 2ND MAIN, P.J. EXTN, NEAR STADIUM, DAVANGERE – 4
ADMISSION STARTED FOR
**II PUC SCIENCE PCMB TUTIONS**
Classes starts from 20th January 2021
For more Details contact: Office: 08192 – 257546, Mobile: 9980368779, 9448178087.
"We don't have any other branches in Davangere in the name of Academy"

# ಲಾಭದಾಯಕದಲ್ಲಿ ಮುನ್ನಡೆದಿರುವ ಕವಿರತ್ನ ಕಾಳಿದಾಸ ಕ್ರೆಡಿಟ್ ಸೊಸೈಟಿ

### 22ನೇ ವರ್ಷದ ವಾರ್ಷಿಕ ಸಭೆಯಲ್ಲಿ ಸಂಘದ ಅಧ್ಯಕ್ಷ ಬಿ. ವಿಜಯಕುಮಾರ್ ಹರ್ಷ



ದಾವಣಗೆರೆ,ಜ.15- ಲಾಭದಾಯಕದಲ್ಲಿ ಮುನ್ನಡೆದಿರುವ ನಗರದ ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಅಭಿವೃದ್ಧಿಯನ್ನು ಕಾಯ್ದುಕೊಂಡು ಹೋಗುತ್ತಿರುವ ಕ್ರೆಡಿಟ್ ಸೊಸೈಟಿಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಂಘದ ಅಧ್ಯಕ್ಷ ಬಿ. ವಿಜಯಕುಮಾರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಇ.ಡಬ್ಲ್ಯು ಎಸ್ ಕಾಲೋನಿಯ ದಾನ ರತ್ನಾಕರ ಚಿರಡೋಣಿ ಶ್ರೀಮತಿ ಕಾವೇರಮ್ಮ ಶ್ರೀ ಸತ್ಯನಾರಾಯಣ ಶ್ರೇಷ್ಠಿ ಸಭಾ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಕವಿರತ್ನ ಕಾಳಿದಾಸ ಕ್ರೆಡಿಟ್ ಸೊಸೈಟಿಯ 22ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘವು ಸ್ವಂತ ಕಟ್ಟಡ ಹೊಂದಿರುವ ಸೊಸೈಟಿ ಎಂಬ ಕೀರ್ತಿ ಪಡೆದಿದೆ. 2020, ಮಾರ್ಚ್ ಅಂತ್ಯಕ್ಕೆ 1.88 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. 27 ಲಕ್ಷ ರೂ. ಷೇರು ಬಂಡವಾಳ, 18.50 ಲಕ್ಷ ರೂ. ಕಾಯ್ದಿಟ್ಟ ನಿಧಿ ಮತ್ತು 22 ಲಕ್ಷ ರೂ. ಇತರೆ ನಿಧಿಗಳಾಗಿದ್ದು, 2.69 ಕೋಟಿ ರೂ. ದುಡಿಯುವ ಬಂಡವಾಳವಾಗಿರುತ್ತದೆ.

39 ಲಕ್ಷರೂ.ಗಳನ್ನು ಹೂಡಿಕೆ ಮಾಡಲಾಗಿದ್ದು, ಸಂಘದ ಸದಸ್ಯರ ಅಗತ್ಯಗನುಗುಣವಾಗಿ 1.39 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ. 1.88 ಲಕ್ಷ ರೂ. ಲಾಭ ಗಳಿಸಿದೆ ಎಂದು ಅವರು ಸಂಘದ ಪ್ರಗತಿಯನ್ನು ಅಂಕಿ-ಅಂಶಗಳೊಂದಿಗೆ ವಿವರಿಸಿದರು.

ಪ್ರಾಸ್ತಾವಿಕ ನುಡಿಯೊಂದಿಗೆ ವಂದನಾರ್ಪಣೆ ಮಾಡಿದ ಸಂಘದ ಹಿರಿಯ ನಿರ್ದೇಶಕ ಕೆ. ಹೇಮಂತಕುಮಾರ್, ಕವಿರತ್ನ ಕಾಳಿದಾಸ ಕ್ರೆಡಿಟ್ ಸೊಸೈಟಿಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವಲ್ಲಿ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಪರಿಶ್ರಮ, ಗ್ರಾಹಕರ - ಸದಸ್ಯರ ನಂಬಿಕೆ - ವಿಶ್ವಾಸ, ಸಿಬ್ಬಂದಿ ವರ್ಗದವರ ಕರ್ತವ್ಯ ನಿಷ್ಠೆ ಕಾರಣವಾಗಿದೆ ಎಂದು ಎಲ್ಲರ ಸಹಕಾರವನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಸಂಘದ ಉಪಾಧ್ಯಕ್ಷ ಟಿ.ಹೆಚ್. ನಿರಂಜನಬಾಬು, ನಿರ್ದೇಶಕರುಗಳಾದ ಕೆ.ಜಿ. ಪ್ರಕಾಶ್, ಶ್ರೀಮತಿ ಇ.ವೈ. ಜೀವಿಕಾ, ಶ್ರೀಮತಿ ಶಾಂತಮ್ಮ ಟಿ. ಸವದತ್ತಿ, ಶಿವಣ್ಣ ಇಟಗಿ, ಎ.ಡಿ. ಭೀಮಪ್ಪ, ಕೆ.ಜಿ. ಜಯರಾಮ್, ಷಣ್ಮುಖಪ್ಪ, ಇ.ವೈ. ಲೋಹಿತ್, ವಿಶೇಷ ಆಹ್ವಾನಿತರಾದ ಸಿ.ಬಿ. ಆನಂದ್, ಜಿ.ಆರ್. ಮಾಲತೇಶ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಕೆ.ಲಕ್ಷ್ಮಿ ರಾಜಗೋಪಾಲ್ ಅವರ ಪ್ರಾರ್ಥನೆಯ ನಂತರ ನಿರ್ದೇಶಕ ಎಸ್.ಎಂ. ಹಿರೇಮಠ ಸ್ವಾಗತಿಸಿದರು. ಕಾರ್ಯದರ್ಶಿ ಎಸ್. ರಮೇಶ್ ಕಾರ್ಯಕ್ರಮ ನಿರೂಪಿಸಿದರು.

ಸಂಘದ ಸಿಬ್ಬಂದಿಗಳಾದ ಶ್ರೀಮತಿ ಪಿ. ಮಂಜುಳಾ, ಮನಿಷ್ ಎಂ. ಘಾಟ್ಗೆ, ಜೆ.ಸಿ. ರಮೇಶ್, ಟಿ. ಶಿವಕುಮಾರ್, ವರುಣ್ ಕುಮಾರ್ ಕಂಬಳಿ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

## ಜಿಲ್ಲೆಯಲ್ಲಿ ಇಂದಿನಿಂದ 'ಒಂದು ಮುಷ್ಠಿ ಮಣ್ಣು ಹುತಾತ್ಮರ ಹೆಸರಿನಲ್ಲಿ' ಅಭಿಯಾನ

ದಾವಣಗೆರೆ, ಜ.15- ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಹುತಾತ್ಮರಾದ ರೈತರ ಪರವಾಗಿ ಒಂದು ಮುಷ್ಠಿ ಮಣ್ಣು ಹುತಾತ್ಮರ ಹೆಸರಿನಲ್ಲಿ ಭಾರತೀಯ ರಾಷ್ಟ್ರೀಯ ಯುವ ಕಾಂಗ್ರೆಸ್ ವತಿಯಿಂದ ಅಭಿಯಾನ ಆರಂಭಿಸಲಾಗಿದೆ ಎಂದು ಇಂಡಿಯನ್ ಯೂತ್ ಕಾಂಗ್ರೆಸ್‌ನ ರಾಷ್ಟ್ರೀಯ ವಕ್ತಾರ ಹೆಚ್.ಜೆ. ಮೈನುದ್ದೀನ್ ಹೇಳಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ದಿನಾಂಕ 9 ರಿಂದ ರಾಷ್ಟ್ರಾದ್ಯಂತ ಈ ಅಭಿಯಾನ ಆರಂಭವಾಗಿದ್ದು, ನಾಳೆ ದಿನಾಂಕ 16 ರ ಶನಿವಾರದಿಂದ ಜಿಲ್ಲೆಯ ನಾಲ್ಕು ಭಾಗಗಳಲ್ಲಿ ಅಭಿಯಾನ ನಡೆಸಿ ಮಣ್ಣು ಸಂಗ್ರಹಿಸಲಾಗುವುದು ಎಂದರು.

16 ರಂದು ದಾವಣಗೆರೆ ದಕ್ಷಿಣ ಕ್ಷೇತ್ರದ ದೊಡ್ಡ ಬೂದಿಹಾಳ್, 17 ರಂದು ಉತ್ತರ ಕ್ಷೇತ್ರದ ಶಾಮ ನೂರು, 18 ರಂದು ಹರಿಹರ ಹಾಗೂ 19ರಂದು ಮಾಯಕೊಂಡ ಗ್ರಾಮಗಳಲ್ಲಿ ಅಭಿಯಾನ ನಡೆಸಿ ಮಣ್ಣು ಸಂಗ್ರಹಿಸಿ, ಕೋರಿಯರ್ ಮೂಲಕ ಮುಖ್ಯ ಕಚೇರಿಗೆ ತಲುಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಅಭಿಯಾನದ ಮೂಲಕ ದೇಶಾದ್ಯಂತ ಸಂಗ್ರಹಿಸಿದ ಮಣ್ಣಿನಲ್ಲಿ ಭಾರತ ಭೂಪಟ ಸೃಷ್ಟಿಸಿ ಹುತಾತ್ಮ ರೈತರನ್ನು ಸ್ಮರಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಖಾಲಿದ್ ಪೈಲ್ವಾನ್, ಖಾಜಾ ಮೈನುದ್ದೀನ್, ಸೈಯದ್ ಇರ್ಫಾನ್ ಉಪಸ್ಥಿತರಿದ್ದರು

## ಸಂಸದರ ಇಂದಿನ ಕಾರ್ಯಕ್ರಮ

ಸಂಸದ ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ಸಿಜಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕಾ ವಿತರಣೆಗೆ ಚಾಲನೆ ನೀಡಲಿದ್ದಾರೆ.

ಬೆಳಿಗ್ಗೆ 11.15 ಗಂಟೆಗೆ ಮಲೇಬೆನ್ನೂರಿನ ನೀರಾವರಿ ಇಲಾಖೆಯ ಕಛೇರಿಯ ಹತ್ತಿರ 2 ಕೋಟಿ ವೆಚ್ಚದ ಹೊಸಪೇಟೆ-ಶಿವಮೊಗ್ಗ ರಾಜ್ಯ ಹೆದ್ದಾರಿ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸುವರು.

ಮಧ್ಯಾಹ್ನ 12.15 ಕ್ಕೆ ಸಾರಥಿ ಬಳಿ ಸಾರಥಿ-ಚಿಕ್ಕಬಿದರಿ ನಡುವೆ 8 ಕೋಟಿ ವೆಚ್ಚದ ಸೇತುವೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

## ರಾಜ್ಯದ 243 ಕಡೆ ಲಸಿಕೆ

### ಆರೋಗ್ಯ ಸಚಿವ ಡಾ. ಕೆ.ಸುಧಾಕರ್

ಬೆಂಗಳೂರು, ಜ.15 - ರಾಜ್ಯದ 243 ಕಡೆಗಳಲ್ಲಿ ಶನಿವಾರ ಕೊರೊನಾ ಲಸಿಕೆ ನೀಡುತ್ತಿದ್ದು, ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜು ಸೇರಿದಂತೆ 10 ಕಡೆಗಳಲ್ಲಿ ಲಸಿಕೆ ನೀಡಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಕೊರೊನಾ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಒ, ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸಚಿವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಬೆಂಗಳೂರು ಒಂದರಲ್ಲೇ 10 ಆಸ್ಪತ್ರೆಗಳಲ್ಲಿ ಲಸಿಕೆ ನೀಡಲಾಗುವುದು. ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಸೇರಿದಂತೆ ಖಾಸಗಿ ಆಸ್ಪತ್ರೆಗಳಲ್ಲೂ ನೀಡಲಾಗುವುದು. ಕೋವಿಶೀಲ್ಡ್ ಲಸಿಕೆಯನ್ನು ರಾಜ್ಯದ 237 ಕೇಂದ್ರ ಹಾಗೂ ಕೋವ್ಯಾಕ್ಸಿನ್ ಲಸಿಕೆಯನ್ನು ಬಳ್ಳಾರಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ದಾವಣಗೆರೆ ಕೇಂದ್ರಗಳಲ್ಲಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಲಸಿಕೆ ನೀಡಲು ಮೊದಲಿಗೆ ಜನಪ್ರತಿನಿಧಿಗಳನ್ನೇ ಆರಿಸಬಹುದಿತ್ತು. ಆದರೆ ಕೊರೊನಾ ನಿಯಂತ್ರಣಕ್ಕೆ ಶ್ರಮಿಸುತ್ತಿರುವವರಿಗೆ ಮೊದಲ ಪ್ರಾಶಸ್ತ್ಯದಲ್ಲಿ ಲಸಿಕೆ ನೀಡಲಾಗುತ್ತಿದೆ. ಬಳಿಕ ಇತರೆ ರೋಗಗಳಿಂದ ಬಳಲುವವರಿಗೆ ಲಸಿಕೆ ನೀಡಲಾಗುವುದು ಎಂದರು.

7,17,439 ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲಾಗುತ್ತದೆ. ಮೊದಲ ದಿನ 24,300 ಮಂದಿಗೆ ನೀಡುವ ಗುರಿ ಇದೆ. ನಮ್ಮಲ್ಲಿ ಒಟ್ಟು 8,14,500 ಡೋಸ್ ಲಸಿಕೆ ಲಭ್ಯವಿದ್ದು, ಒಂದು ವಾರದೊಳಗೆ ಮೊದಲ ಹಂತದ ವಿತರಣೆ ಪ್ರಕ್ರಿಯೆ ಮುಗಿಯುವ ಸಾಧ್ಯತೆ ಇದೆ ಎಂದರು.

## ಅಮಿತ್ ಷಾ ಭೇಟಿ ನಂತರವೇ ಖಾತೆ ಹಂಚಿಕೆ: ಬಿಎಸ್‌ವೈ

ಬೆಂಗಳೂರು, ಜ.15 - ಕೇಂದ್ರ ಗೃಹ ಸಚಿವ ಅಮಿತ್ ಷಾ ಎರಡು ದಿನಗಳ ರಾಜ್ಯ ಪ್ರವಾಸ ಮಾಡಿ, ಹಿಂತಿರುಗಿದ ನಂತರವಷ್ಟೇ ನೂತನ ಸಚಿವರುಗಳಿಗೆ ಖಾತೆಗಳನ್ನು ಹಂಚಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮವೊಂದರ ನಂತರ ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರಿಗೆ ಯಾವ ಖಾತೆ ನೀಡಬೇಕೆಂಬುದರ ಬಗ್ಗೆ ಪಟ್ಟಿ ಸಿದ್ದವಾಗಿದೆ ಎಂದ ಅವರು, ಹಾಲಿ ಸಚಿವರ ಖಾತೆಗಳು ಬದಲಾವಣೆಯಾಗುತ್ತವೆಯೇ? ಎಂಬ ಪ್ರಶ್ನೆಗೆ ಏನನ್ನೂ ಉತ್ತರಿಸದೇ ಮುಂದೆ ಸಾಗಿದರು. ಕಳೆದ ಶನಿವಾರ ಮುಖ್ಯಮಂತ್ರಿಯವರು ಸಂಪುಟ ವಿಸ್ತರಿಸಿ ಏಳು ಮಂದಿಯನ್ನು ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಂಡಿದ್ದಲ್ಲದೆ, ಒಬ್ಬರನ್ನು ಸಂಪುಟದಿಂದ ಕೈಬಿಟ್ಟಿದ್ದರು.

ತಮ್ಮ ಬಳಿ ಹಾಗೂ ಕೆಲ ಸಚಿವರಲ್ಲಿ ಹೆಚ್ಚುವರಿಯಾಗಿರುವ ಖಾತೆಗಳನ್ನು ಹೊಸಬರಿಗೆ ನೀಡಲಿದ್ದಾರೆ. ಬಹುತೇಕ ಸೋಮವಾರವಷ್ಟೇ ನೂತನ ಸಚಿವರಿಗೆ ಖಾತೆಗಳು ದೊರೆಯುವ ಸಾಧ್ಯತೆ ಇದೆ.

## ವಿವೇಕಾನಂದ ಪ್ರೌಢಶಾಲೆಯಲ್ಲಿ ವಿವೇಕಾನಂದ ಜಯಂತಿ

ದಾವಣಗೆರೆ, ಜ.15- ಸ್ವಾಮಿ ವಿವೇಕಾನಂದ ಪ್ರೌಢಶಾಲೆಯಲ್ಲಿ ಸ್ವಾಮಿ ವಿವೇಕಾನಂದರ 158ನೇ ಜಯಂತಿಯನ್ನು ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲಾಯಿತು.

ಮುಖ್ಯಶಿಕ್ಷಕಿ ಎಂ. ಜಯಾ ಅಧ್ಯಕ್ಷತೆ ವಹಿಸಿದ್ದರು. ವಿವೇಕಾನಂದರ ಜೀವನ ಚರಿತ್ರೆಯನ್ನು ತಿಳಿಸಿದ ಅವರು, ವಿವೇಕರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

## ನಗರದಲ್ಲಿ ಇಂದು ಯುವ ದಿನಾಚರಣೆ

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು, (ಎಸ್‌ಬಿಸಿ) ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಇಂದು ಬೆಳಿಗ್ಗೆ 12 ಕ್ಕೆ ವಿವೇಕಾನಂದರ ಜನ್ಮ ದಿನಾಚರಣೆ ಪ್ರಯುಕ್ತ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ.

**ದಾವಣಗೆರೆ ವಕೀಲರ ಸಂಘ (ರಿ.)**

**2021-22 ಮತ್ತು 2022-23ನೇ ಸಾಲಿನ ದ್ವೈವಾರ್ಷಿಕ ಚುನಾವಣೆ - 2021**

ನಿಮ್ಮ ಮತ 'ಅಧ್ಯಕ್ಷ' ಸ್ಥಾನಕ್ಕೆ

ತಿಮ್ಮಲಾಪುರದ ರವಿಶಂಕರ್, ವಕೀಲರು

ಗೌರವಾನ್ವಿತ ವಕೀಲ ಬಂಧುಗಳಲ್ಲಿ ಸವಿನಯ ಪ್ರಾರ್ಥನೆ

ನಾನು ತಿಮ್ಮಲಾಪುರದ ರವಿಶಂಕರ್, ದಿನಾಂಕ : 16-01-2021ರಂದು ಶನಿವಾರ ನಡೆಯಲಿರುವ ಚುನಾವಣೆಯಲ್ಲಿ **'ಅಧ್ಯಕ್ಷ'** ಸ್ಥಾನಕ್ಕೆ ಸ್ಪರ್ಧಿಸಿರುತ್ತೇನೆ. ತಾವುಗಳು ನನಗೆ ಮತ ನೀಡಿ ಬಹುಮತದಿಂದ ಗೆಲ್ಲಿಸಿ ವಕೀಲರ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

**ವಕೀಲರ ಅಧ್ಯಕ್ಷ ಸ್ಥಾನ : 'ವಕೀಲರ' ಏಳಿಗೆಗೆ ಹೊರತು ವೈಯಕ್ತಿಕ ಏಳಿಗೆಗಲ್ಲ**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಮೊಹರು |
|---|---|---|
| 1. | | |
| 2. | | |
| 3. | | |
| 4. | | |
| 5. | ತಿಮ್ಮಲಾಪುರದ ರವಿಶಂಕರ್ (TRS) | |

**ಸಮಯ :** ಬೆಳಿಗ್ಗೆ 11.30 ರಿಂದ 5.30 ರವರೆಗೆ
**ಸ್ಥಳ :** ವಕೀಲರ ಭವನ, ಹೊಸ ಕೋರ್ಟ್ ಕಾಂಪ್ಲೆಕ್ಸ್, ಜಿಲ್ಲಾ ನ್ಯಾಯಾಲಯ ಸಂಕೀರ್ಣ, ದೇವರಾಜ ಅರಸು ಬಡಾವಣೆ, ದಾವಣಗೆರೆ.

ಇಂತಿ ತಮ್ಮ ವಿಶ್ವಾಸಿ,
**ತಿಮ್ಮಲಾಪುರದ ರವಿಶಂಕರ್** (TRS)
94484 15396, 91414 19386

ವಿ.ಸೂ. : ಮತದಾನಕ್ಕೆ ಬರುವಾಗ ವಕೀಲರ ಗುರುತಿನ ಚೀಟಿಯನ್ನು ತಪ್ಪದೇ ತರಬೇಕು ಮತ್ತು ಮಾಸ್ಕ್ ಧರಿಸುವುದು ಕಡ್ಡಾಯ.

**ಟಾಸ್ ಲಾ ಅಸೋಸಿಯೇಟ್ಸ್**
ಜನತಾ ಬಜಾರ್ ಬಿಲ್ಡಿಂಗ್, ಪಿ.ಜೆ. ಬಡಾವಣೆ, ದಾವಣಗೆರೆ.






# ಹುಟ್ಟುಹಬ್ಬದ ಶುಭಾಶಯಗಳು

ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು,
ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರು, ರಾಷ್ಟ್ರೀಯ
ಉಪಾಧ್ಯಕ್ಷರು, ಬಿಜೆಪಿ ಎಸ್.ಟಿ. ಮೋರ್ಚಾ, ಸರಳ, ಸಜ್ಜನಿಕೆಯ
ರಾಜಕಾರಣಿಗಳು, ನೂತನ ಕರ್ನಾಟಕ ಮಹರ್ಷಿ ಶ್ರೀ ವಾಲ್ಮೀಕಿ
ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ (ನಿ.)ದ ನೂತನ
ಅಧ್ಯಕ್ಷರಾಗಿರುವ ಕ್ರೀಡಾಭಿಮಾನಿಗಳು, ಕೋಟಿ ಕೋಟಿ
ಅನುದಾನ ತಂದು ಅಭಿವೃದ್ಧಿ ಹರಿಕಾರರಾಗಿರುವ
ಜನಪರ ಕಾಳಜಿಯ ನಮ್ಮ ನೆಚ್ಚಿನ ನಾಯಕರಾದ ಸನ್ಮಾನ್ಯ

# ಶ್ರೀ ಎಸ್.ವಿ.ರಾಮಚಂದ್ರ

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳನ್ನು
ಸಲ್ಲಿಸುತ್ತಾ, ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯವನ್ನು
ಸದಾ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



## 2018-19ನೇ ಸಾಲಿನಿಂದ ಜಗಳೂರು ವಿಧಾನಸಭಾ ಕ್ಷೇತ್ರದ (ಹರಪನಹಳ್ಳಿ ತಾಲ್ಲೂಕಿನ 7 ಗ್ರಾಮ ಪಂಚಾಯ್ತಿ ಸೇರಿ) ವ್ಯಾಪ್ತಿಯಲ್ಲಿ ಅನುಮೋದಿಸಲ್ಪಟ್ಟ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪಕ್ಷಿನೋಟ :

❑ **ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾಶೀರ್ವಾದಗಳೊಂದಿಗೆ ಹಾಗೂ ಇವರ ಮಾರ್ಗದರ್ಶನದಿಂದ ಜಲಸಂಪನ್ಮೂಲ ಇಲಾಖೆ : ಕರ್ನಾಟಕ ನೀರಾವರಿ ನಿಗಮದಿಂದ ಜಗಳೂರು ಕ್ಷೇತ್ರದ 57 ಕೆರೆಗಳಿಗೆ ನೀರು ತುಂಬಿಸುವ ಬೃಹತ್ ಯೋಜನೆ ಪ್ರಗತಿಯಲ್ಲಿದೆ. - 660.00 ಕೋಟಿ ರೂ.**

2) ಲೋಕೋಪಯೋಗಿ ಇಲಾಖೆ : ವಿವಿಧ ಶೀರ್ಷಿಕೆ ಅಡಿ 75 ಕಾಮಗಾರಿಗಳು - **125.09 ಕೋಟಿ ರೂ.**
3) ಪಂಚಾಯತ್ ರಾಜ್ ಇಲಾಖೆ : ವಿವಿಧ ಶೀರ್ಷಿಕೆ ಅಡಿ 40 ಕಾಮಗಾರಿಗಳು - **77.02 ಕೋಟಿ ರೂ.**
4) ಪಟ್ಟಣ ಪಂಚಾಯಿತಿ ಜಗಳೂರು : ವಿವಿಧ ಶೀರ್ಷಿಕೆ ಅಡಿ 12 ಕಾಮಗಾರಿಗಳು - **14.5 ಕೋಟಿ ರೂ.**
5) ಕೃಷಿ ಇಲಾಖೆ : 5069 ರೈತರಿಗೆ **10.767 ಕೋಟಿ ರೂ.** ಬೆಳೆ ವಿಮೆ ರೈತರ ಖಾತೆಗೆ ಜಮಾ.
6) ತೋಟಗಾರಿಕೆ ಇಲಾಖೆ : **13.05 ಕೋಟಿ ರೂ.** ವೆಚ್ಚದಲ್ಲಿ ವಿವಿಧ ಯೋಜನೆಗಳ ಸೌಲಭ್ಯ ಕಲ್ಪಿಸಿದೆ.
7) ಕಂದಾಯ ಇಲಾಖೆ : 742 ರೈತರಿಗೆ ಹಕ್ಕು ಪತ್ರ ವಿತರಣೆ
8) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ : ಅಂಗನವಾಡಿ ಕಟ್ಟಡಗಳ ಕಾಮಗಾರಿಗೆ ಅನುದಾನ - **3.00 ಕೋಟಿ ರೂ.**
9) ಶಿಕ್ಷಣ ಇಲಾಖೆ : **8.81 ಕೋಟಿ ರೂ.** ವೆಚ್ಚದಲ್ಲಿ ಹೈಟೆಕ್ ಶೌಚಾಲಯ ಮತ್ತು ಶಾಲಾ - ಕಾಲೇಜು ಕಟ್ಟಡಗಳ ನಿರ್ಮಾಣ.
10) ಮುಜರಾಯಿ ಇಲಾಖೆ : **6.30 ಕೋಟಿ ರೂ.** ವೆಚ್ಚದಲ್ಲಿ ದೇವಸ್ಥಾನ, ತಂಗುದಾಣ ಕಾಮಗಾರಿ ಪ್ರಗತಿ.
11) ಸಮಾಜ ಕಲ್ಯಾಣ ಇಲಾಖೆ : **3.11 ಕೋಟಿ ರೂ.** ವೆಚ್ಚದಲ್ಲಿ ವಾಲ್ಮೀಕಿ ಭವನ-ಅಂಬೇಡ್ಕರ್ ಭವನಗಳ ನಿರ್ಮಾಣ.
12) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ : 1232 ಮನೆಗಳ ಹಂಚಿಕೆ/ರಂಗಾಪುರ-158 ಮತ್ತು ಉಚ್ಚಂಗಿದುರ್ಗ, ಗ್ರಾಮದಲ್ಲಿ - 103 ನಿವೇಶನಗಳ ಹಂಚಿಕೆ. **7.00 ಕೋಟಿ ರೂ.**. ವೆಚ್ಚದಲ್ಲಿ 50 ಶುದ್ಧ ನೀರಿನ ಘಟಕಗಳ ಸ್ಥಾಪನೆ ಮತ್ತು 160 ಹೈಮಸ್ಟ್ ದೀಪಗಳ ಅಳವಡಿಕೆ.
13) ಸಾರಿಗೆ ಇಲಾಖೆ : **45 ಲಕ್ಷ ರೂ.** ವೆಚ್ಚದಲ್ಲಿ ಜಗಳೂರು ಬಸ್ ನಿಲ್ದಾಣ ನಿರ್ಮಾಣ ಮತ್ತು **1.70 ಕೋಟಿ ರೂ.** ವೆಚ್ಚದಲ್ಲಿ ಅರಸಿಕೆರೆ, ಉಚ್ಚಂಗಿದುರ್ಗ ಬಸ್ ನಿಲ್ದಾಣ ಕಾಮಗಾರಿ ಪ್ರಗತಿ.
14) ಪರಿಶಿಷ್ಟವರ್ಗಗಳ ಅಭಿವೃದ್ಧಿ ನಿಗಮ : ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಅಧ್ಯಕ್ಷರಾದ ನಂತರ ಕ್ಷೇತ್ರಕ್ಕೆ ನೀಡಿದ ಕೊಡುಗೆ : ನೇರಸಾಲ **35.00 ಲಕ್ಷ ರೂ.**, 290 ಮೈಕ್ರೋಕ್ರೆಡಿಟ್ **72.50 ಲಕ್ಷ ರೂ.** 79 ಉದ್ಯಮಶೀಲತೆ- **79.00**, 37 ಉದ್ಯಮಶೀಲತೆ ವಾಹನ ವಿತರಣೆ-**129.50 ಲಕ್ಷ ರೂ.**, 176 ಗಂಗಾಕಲ್ಯಾಣ - **616.00 ಲಕ್ಷ ರೂ.**
15) ಆರೋಗ್ಯ ಇಲಾಖೆ : ಉಚ್ಚಂಗಿದುರ್ಗ, ಮಾದಿಹಳ್ಳಿ, ಅರಸಿಕೆರೆ, ರಾಮಘಟ್ಟ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲ ಸೌಕರ್ಯ ಕಲ್ಪಿಸಲು 161.32 ಲಕ್ಷ ರೂ. ಟೆಂಡರ್ ಪ್ರಕ್ರಿಯೆ.
16) KRIDL : ತಾಲ್ಲೂಕಿನ 22 ಕೆರೆಗಳ ಅಭಿವೃದ್ಧಿ, ಹೂಳುತೆಗೆಯುವುದು, ಅಂತರ್ ಜಲ ಅಭಿವೃದ್ಧಿ, ರಸ್ತೆ, ಅಭಿವೃದ್ಧಿ, **34.69 ಕೋಟಿ ರೂ.**

**957.77 ಕೋಟಿ**
**ಒಟ್ಟು :968.53 ಕೋಟಿ**

## : ಶುಭ ಕೋರುವವರು :

# ಎಸ್.ವಿ.ಆರ್. ಅಭಿಮಾನಿ ಬಳಗ

## ಭಾರತೀಯ ಜನತಾ ಪಕ್ಷ, ಜಗಳೂರು ವಿಧಾನಸಭಾ ಕ್ಷೇತ್ರ.



JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte